# ಅಪರಂಜಿ

ತಿಳಿನಗೆಯ ಕಾರಂಜಿ

ಮೇ 2023



ಷ್.....ಸುಮ್ನಿರು.....ಓಟಿಪಿ ನೆನಪಿನಲ್ಲಿಟ್ಟುಕೊಳ್ತಾ ಇದೀನಿ!

ಬಿಡಿ ಪ್ರತಿ: ರೂ. 10/-

TEMPLE OF KNOWLEDGE

# ಪುಸ್ತಕವಿಲ್ಲದ ಕೋಣೆ ಆತ್ಮವಿಲ್ಲದ ದೇಹವಿದ್ದಂತೆ

ಬೀChiಯವರ ವಿಡಂಬನೆ ಹಾಸ್ಯದ ಮೂಲಕ ಮೌಲ್ಯಗಳು ಬೆಳೆಯುತ್ತದೆ ಹಾಗೂ ಬೀChi ಅವರ ಪುಸ್ತಕಗಳು ಪ್ರೇರಣೆ, ಸ್ಫೂರ್ತಿ ಮತ್ತು ಮನರಂಜನೆಯಿಂದ ತುಂಬಿವೆ ಸಕಾರಾತ್ಮಕ ಪರಿಣಾಮ ಬೀರುತ್ತದೆ.

**50 ಪುಸ್ತಕಗಳ ಪ್ಯಾಕ್**

ನಿಮಗಾಗಿ ಮತ್ತು ಇತರರಿಗೆ ಉಡುಗೊರೆಯಾಗಿ ನೀಡಲು ಈ ಅದ್ಭುತ ಪುಸ್ತಕಗಳ ಸಂಗ್ರಹವನ್ನು ಖರೀದಿಸಿ ಆಸಕ್ತ ಓದುಗರು, ಶಾಲೆಗಳು, ಕಾಲೇಜುಗಳು, ಕಾರ್ಪೊರೇಟ್‌ಗಳು, ವಿಶ್ವವಿದ್ಯಾನಿಲಯಗಳು ಮತ್ತು ಓದಲು ಆಸಕ್ತಿ ಹೊಂದಿರುವ ಇತರ ಸಂಸ್ಥೆಗಳಿಗೆ ಇದನ್ನು ಹಂಚಿಕೊಳ್ಳಿ. ಪುಸ್ತಕಗಳು ನಿಮ್ಮ ಮನೆ ಸೇರಲಿ ಹಾಗೂ ಬಂಧುಗಳಿಗೆ, ಸ್ನೇಹಿತರಿಗೆ ಕಾಣಿಕೆಯಾಗಿ ಎಲ್ಲಾ ಸಮಾರಂಭಕ್ಕೂ ಪುಸ್ತಕಗಳು ಉಡುಗೊರೆಯಾಗಿ ಕೊಡಬಹುದು.

**ಬೆಲೆ ರೂ7592 after discount ರೂ 6799 ಪ್ರತಿಗಳನ್ನು ಪಡೆಯಲು ಸಂಪರ್ಕಿಸಿ**


G Pay 9845264304

ಆಸಕ್ತರು ಸಂಪರ್ಕಿಸಿ : 080–29731414 ಮೊ : 9035302302

---

# BEECHI PRAKASHANA

## ಬೀchi ಪ್ರಕಾಶನ,



## BOOKS AVAILABLE

- Kannada Books
- Banking Exam Books
- Biographies
- Business & Economics
- Children & Young Adult Books
- Comics
- Competitive Exam Books
- Engineering Entrance Exam
- Fiction & Non-Fiction Books
- Office Stationery
- ಕನ್ನಡ ಪುಸ್ತಕಗಳು
- Health & Family
- Humour
- Law
- Literature
- Medical Entrance
- Politics
- Reference Books
- Religion & Spirituality
- Romance
- Other Books

Email : admin@beechi.in | www.beechi.in | 9845264304

# Ravi Graphics
OFFSET PRINTERS

*Bringing colours alive*

***What we specialize into :***

- Books
- Brochures
- Catelogues
- Boxes
- Mono Cartons



53/8, 2nd Main Road, Industrial Town, Rajajinagar, Bangalore - 560 010
Tel: 4088 9999/55, Fax : 4088 9944 website : www.ravigraphics.com

Bag is everything

# bag factory
bagfactory.co.in

## Our Promise

- 100% recyclable paper bags & pouches
- Pan-India delivery
- Premium customisation for high-street brands




Reach us for your paper bag requirements

+91 89719 95599 | sales@bagfactory.co.in | bagfactory.co.in

Published on 3rd of every month
Mailed on 5th of every month
Mailed at: Bangalore P.S.O. 560026

REGISTERED KA/BGW-544/2021-2023
**RNI NO. KAR-KAN/2005/15457**

www.mallige.com

NABH ACCREDITED — PATIENT SAFETY & QUALITY OF CARE

Certificate No.: MC-2068



Established in 1978 we are a multi-speciality, tertiary care hospital.

# CARING AND HEALING

| 126 | 60+ | 25+ |
| --- | --- | --- |
| BEDS | LEADING SPECIALISTS | SPECIALTIES |

An institution of heritage in the heart of Bengaluru.




MALLIGE HOSPITAL
PERSONALISED COMPLETE HEALTHCARE

MALLIGE LABS

**Mallige Medical Centre Pvt. Ltd.**
31 & 32 Crescent Road, Bangalore 560001, India.
+91.80.67165555 +91.80.45577099 +91.80.22203333
Email: info@mallige.com

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003. Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55
Editor : M. SHIVAKUMAR
No. of Pages: 40+4 APARANJI KANNADA MONTHLY.

**ಸಂಪಾದಕ ಮಂಡಳಿ**

ಸಂಪಾದಕರು

**ಶ್ರೀ ಎಂ. ಶಿವಕುಮಾರ್**

ಉಪ ಸಂಪಾದಕರು

**ಶ್ರೀ ಬೇಲೂರು ರಾಮಮೂರ್ತಿ**

ಸದಸ್ಯರು

**ಶ್ರೀ ಎಚ್. ಎನ್. ಆನಂದ**
**ಶ್ರೀ ಎಚ್. ಗೋಪಾಲಕೃಷ್ಣ**

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

ಚಂದಾ ವಿವರ :
ಬಿಡಿ ಪ್ರತಿ : ರೂ. 10/-
ವಾರ್ಷಿಕ ಚಂದಾ : ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 40**
**ಸಂಚಿಕೆ – 8**
**ಮೇ–2023**

*ಈ ಸಂಚಿಕೆಯಲ್ಲಿ...*

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ಶ್ರದ್ಧಾಂಜಲಿ ಸಿ.ಆರ್. ಸತ್ಯ | **ಶಿವಕುಮಾರ್** | 3 |
| ಶ್ರದ್ಧಾಂಜಲಿ ಶ್ರೀನಿವಾಸ ವೈದ್ಯ | **ಶಿವಕುಮಾರ್** | 5 |
| ರಾಮಿ ಮತ್ತು ಟಾಮಿ | **ಬೆಂಶ್ರೀ ರವೀಂದ್ರ** | 7 |
| ಪಾರ್ಕ ಫುಲ್ ಆಫ್ ಲೈಫ್! | **ಇ.ಆರ್. ರಾಮಚಂದ್ರನ್** | 13 |
| "ಮೂಕನ್ಯಾಸ!" | **ಡಾ. ಗಣೇಶ ಎಸ್. ಹೆಗಡೆ** | 16 |
| ಮಲೆನಾಡು ಎಂಬ ಸ್ವರ್ಗ | **ಪುಷ್ಪಲತಾ. ಟಿ.ಜಿ** | 20 |
| ತುಂತುರು | **ದಂನಆ** | 24 |
| ಪದಕುಲುಮೆ | **ಎಸ್.ಎನ್. ಗಣನಾಥ** | 25 |
| ಯಾವ ಜನ್ಮದ ಮೈತ್ರಿ | **ಜ್ಯೋತಿ ರಾಜೇಶ್** | 26 |
| ಪೇಪರ್ ದೆವ್ವ | **ಗುಂಡುರಾವ್ ದೇಸಾಯಿ** | 30 |
| ಜಾಮ್ ಜಾಮ್ | **ಕ್ಷಮೇಶ್ವರ** | 35 |
| ಏನಕೇನ್... | **ವೈ.ಎಂ. ರಘುನಂದನ್** | 37 |
| ವಿಲೇವಾರಿ ವರಿ... | **ಶಂಸ ಐತಾಳ** | 39 |

**ವ್ಯಂಗ್ಯ ಚಿತ್ರಗಳು:**
**ಹೊರ ಪುಟ–ನಾಗನಾಥ್ ಗೌರೀಪುರ**
**ಒಳ ಪುಟ–ರಘುಪತಿ ಶೃಂಗೇರಿ ಮತ್ತು ಆದರ್ಶ ಪೈ**

*ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ ಮಲ್ಲೇಶ್ವರಂ,*
*ಬೆಂಗಳೂರು – 560 003,* email: koravanjiaparanji@gmail.com ಮೊಬೈಲ್:9845264304

ಸಂಪರ್ಕ ವಿಳಾಸ : ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ. ನೋ. 96, 'ಸುಕೇಶವ', ಎರಡನೇ ಅಡ್ಡರಸ್ತೆ, 20ನೇ ಮುಖ್ಯ ರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು–560 068. ದೂರವಾಣಿ: 080–26688488. email:belururamamurthy@gmail.com

**For Online payment of ubscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಶ್ರೀ ಬಾಲಾಜಿ ಪ್ರಿಂಟರ್ಸ್, (ರವಿ) ಸಹಕಾರನಗರ*



# ಅಪರಂಜಿ ಕಿಡಿ

● ಪ್ರಕಾಶ್

ಟಿಕೆಟ್ ಕೈತಪ್ಪಿದವರ ರೋಷಾವೇಶ

ಪತ್ರಿಕೆ

ನಾಡಿಗೆ, ಜನಸಾಮಾನ್ಯರಿಗೆ ಸೇವೆ ಮಾಡುವ ಕಾತರವೇನೋ ಪಾಪ !!

* * *

ಕಾಂಗ್ರೆಸ್ ಚಿಹ್ನೆಯಾದ ಕರದಲ್ಲಿ ಫೇಟ್ ರೇಖೆಯೆ ಕಾಣುವುದಿಲ್ಲವಲ್ಲ ಅಂತ ಅಪರಂಜಿ ನಕ್ಕಳಂತೆ !!

* * *

ಮುಂಬರುವ ಶಾಸಕರಿಂದ ಜನರ ನಿರೀಕ್ಷೆಗಳೇನು ??

ದಿನ ಪತ್ರಿಕೆ

"ಯಕ್ಷ ಪ್ರಶ್ನೆ" ಅಂದರೆ ಇದೇ ಇರಬೇಕು !!

* * *

ಕೆ.ಎಂ.ಎಫ್ ಮತ್ತು ಅಮುಲ್ ಜಟಾಪಟಿ !!

ಪತ್ರಿಕೆ

ಹಾಲಾ ಹಲಾ ಎನ್ನಬಹುದು ಇದನ್ನ !!

* * *

ವಿಲ್ ಶಾಸಕಾಸ್ ರೆಸಾರ್ಟ್ ಟು ರೆಸಾರ್ಟ್ಸ್ ಅಂತ ಅಪರಂಜಿ ಹುಬ್ಬೇರಿಸಿದಳಂತೆ !!

* * *

ಆತುರದಲ್ಲಿ ಬಿ ಜೆ ಪಿ ಕೈ ಬಿಡಬೇಡಿ

ಹೇಳಿಕೆ

ರಾಜಕೀಯದಲ್ಲಿ "ಶುಭಸ್ಯ ಶೀಘ್ರಂ" ಎಂದಿರಬಹುದು"!!

* * *

■

## "ನಮ್ಮ ನಿಮ್ಮಲ್ಲಿ"

## ಶ್ರದ್ಧಾಂಜಲಿ

ಶಿವಕುಮಾರ್



ಶ್ರೀಯುತ ಸಿ.ಆರ್ ಸತ್ಯ

**ಹಸಿವಾದೊಡೆ ಭಿಕ್ಷಾನ್ನಗಳುಂಟು**

**ತೃಷೆಯೊದೊಡೆ ಕೆರೆ ಬಾವಿಗಳುಂಟು.......**

ಎಂದು ಸುಶ್ರಾವ್ಯವಾಗಿ ಅಕ್ಕ ಮಹಾದೇವಿ ವಚನಗಳನ್ನು ಹಾಡುತ್ತಿದ್ದ ಗೆಳೆಯ ಸತ್ಯ ಇನ್ನಿಲ್ಲ. ವಿಜ್ಞಾನ, ಸಾಹಿತ್ಯವೇ ಮುಂತಾಗಿ ಅನೇಕ ಕ್ಷೇತ್ರಗಳಲ್ಲಿ ಪರಿಣಿತರಾಗಿ ಸಮಾಜಕ್ಕೆ ಮೌಲ್ಯಯುತ ಕೊಡುಗೆಯನ್ನು ನೀಡಿದ ಬಹುಮುಖ ಪ್ರತಿಭಾವಂತರಾದ ಸಿ.ಆರ್ ಸತ್ಯ ಅವರು ಏಪ್ರಿಲ್ ನಾಲ್ಕರಂದು ಎಲ್ಲರಿಗೂ ವಿದಾಯ ಹೇಳಿ ಪವಿತ್ರ ಲೋಕಕ್ಕೆ ತೆರಳಿದ್ದಾರೆ.

ಸತ್ಯ ಮತ್ತು ನನ್ನ ಗೆಳೆತನ ಬಾಲ್ಯದಿಂದಲೇ ಪ್ರಾರಂಭವಾಗಿತ್ತು. ಮಲ್ಲೇಶ್ವರದಲ್ಲಿರುವ ಆರ್ ಆರ್ ವಿ ಎಂ. ಪ್ರಾರ್ಥಮಿಕ ಶಾಲೆಯಲ್ಲಿ ಸತ್ಯ ಅವರು ನನ್ನ ತಮ್ಮ ಓಂಪ್ರಕಾಶರ ಸಹಪಾಠಿಯಾಗಿದ್ದರು. 1983 ರಲ್ಲಿ ಅಪರಂಜಿ ಪತ್ರಿಕೆಯನ್ನು ಪ್ರಾರಂಭಿಸಿದಾಗ ಸತ್ಯರೊಂದಿಗಿನ ಸಂಪರ್ಕ ಮತ್ತೆ ಪುನರುಜ್ಜೀವನಗೊಂಡಿತು. ನಮ್ಮಿಬ್ಬರ ವೃತ್ತಿ ಜೀವನಗಳೂ ಬಹು ಮಟ್ಟಿಗೆ ಸಾಮ್ಯತೆಯನ್ನು ಹೊಂದಿದ್ದರಿಂದ ಸಹಜವಾಗಿಯೇ ನಮ್ಮ ಸ್ನೇಹಕ್ಕೆ ಆಪ್ತತೆಯ ಮೆರಗು ಮೂಡಿತ್ತು.

ಅವರಂತೆಯೇ ನಾನೂ ಸಹಾ ಶಾಲಾ ಮಕ್ಕಳಿಗೆ ವೈಜ್ಞಾನಿಕ ಆಟಿಕೆಗಳನ್ನು ತಯಾರಿಸಿ ವಿಜ್ಞಾನ ಕಲಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡಿದ್ದೆ. ಅಪರಂಜಿಗೆ ಲೇಖನಗಳನ್ನು ಬರೆದುಕೊಡಿರೆಂದು ಕೇಳಿದಂದಿನಿಂದ ಅವರು ಪ್ರತಿ ತಿಂಗಳೂ ತಪ್ಪದೇ ಲೇಖನಗಳನ್ನು ಬರೆಯಲು ಪ್ರಾರಂಭಿಸಿದರು. ನಮ್ಮ ಟ್ರಸ್ಟ್‌ಗೆ ಅವರು ಟ್ರಸ್ಟಿಯೂ ಆಗಿದ್ದರು. ಪ್ರತಿ ತಿಂಗಳೂ ನಮ್ಮ ಮನೆಯಲ್ಲಿ ನಡೆಯುತ್ತಿದ್ದ ಟ್ರಸ್ಟ್ ಸಭೆಯಲ್ಲಿ ಅವರ ಉಪಸ್ಥಿತಿಯನ್ನು ಎಲ್ಲರೂ ಇದಿರು ನೋಡುತ್ತಿದ್ದೆವು. ಇದಕ್ಕೆ ಎರಡು ಮುಖ್ಯ ಕಾರಣಗಳಿದ್ದವು. ಮೊದಲನೆಯದು, ಅವರ ಪತ್ನಿ ಶ್ರೀಮತಿ ಶ್ಯಾಮಲರವರು ನಮಗೆಲ್ಲಾ ಕಳಿಸುತ್ತಿದ್ದ ಪಾಟ್‌ಲಕ್ ತಿನಿಸುಗಳು. ಅಬ್ಬ, ಅವುಗಳ ವೈವಿಧ್ಯತೆಯನ್ನು ನೆನಪಿಸಿಕೊಂಡರೆ ಇಂದಿಗೂ ಬಾಯಲ್ಲಿ ನೀರೂರುತ್ತದೆ.

ಎರಡನೆಯ ಕಾರಣ ಅವರ ಹಾಡುಗಾರಿಕೆ. ಅವರು ಗಮಕವನ್ನು ಗುರು ಮುಖೇನ ಕಲಿತಿದ್ದರಿಂದ ಅದರ ಪ್ರಯೋಗಕ್ಕೆ ನಮ್ಮ ಸಭೆ ಒಂದು ಉತ್ತಮ ಅವಕಾಶ ನೀಡಿತ್ತು. ಸಭೆಯ ಕಲಾಪಗಳನ್ನು ಪೂರ್ಣಗೊಳಿಸಿ, ಭೋಜನವನ್ನು ಮುಗಿಸಿದ ನಂತರ ಸತ್ಯರ ಲಘುಗೀತೆಗಳ ಸವಿಯೂಟ. ಇದಕ್ಕಾಗಿಯೇ ಅವರು ತಮ್ಮ ಕೈ ಬರಹದ ಗೀತೆಗಳ ಪುಸ್ತಕವನ್ನು ತಪ್ಪದೇ ತರುತ್ತಿದ್ದರು. ಪುರಂದರದಾಸರ ಕೃತಿಗಳು, ಬಸವಣ್ಣನವರ ಮತ್ತು ಇತರ ವಚನಕಾರರ ವಚನಗಳು ಇವೆಲ್ಲಾ ಬಹು ನಿರರ್ಗಳವಾಗಿ ಸತ್ಯರ ಕಂಠದಿಂದ ಮೂಡಿಬರುತ್ತಿದ್ದವು.

ಸತ್ಯರು ವಿಜ್ಞಾನಿ ಹಾಗೂ ಇಂಜಿನಿಯರ್. ವೈಜ್ಞಾನಿಕ ಅಂಶಗಳನ್ನು ಆಧರಿಸಿ ಸಂಕೀರ್ಣ ರಾಕೆಟ್‌ಗಳನ್ನು ನಿರ್ಮಿಸುವ ಕ್ಷೇತ್ರದಲ್ಲಿ ಸತ್ಯ ಹೆಚ್ಚು ಪರಿಣತಿಯನ್ನು ಪಡೆದಿದ್ದರು. ಅವರ ಇತ್ತೀಚಿನ ಪುಸ್ತಕ "ತ್ರಿಮುಖಿ"ಯಲ್ಲಿ ಸತ್ಯರ ಬಹುಮುಖ ಪ್ರತಿಭೆಯ ಕುರಿತು ಹಲವಾರು ನಿದರ್ಶನಗಳಿವೆ.

ತಿರುವನಂತಪುರದಲ್ಲಿರುವ ಶ್ರೀ ಅನಂತಪದ್ಮನಾಭ ಸ್ವಾಮಿ ದೇವಸ್ಥಾನದ ಕಲ್ಲುಗಳ ಮೇಲೆ ಸತ್ಯ ಅವರು ಮಾಡಿದ ಸಂಶೋಧನೆಯ ಬಗ್ಗೆ ಕನ್ನಡದಲ್ಲಿ "ಅಳಿವಿಲ್ಲದ ಸ್ಥಾವರ" ಪುಸ್ತಕಕ್ಕೆ ಕರ್ಣಾಟಕ ಸಾಂಸ್ಕೃತಿಕ ಅಕಾಡೆಮಿಯಿಂದ ಮತ್ತು ಇದೇ ಪುಸ್ತಕದ ಇಂಗ್ಲೀಷ್ ಅವತರಣಿಕೆಯಾದ "ಸೆಂಟಿನೆಲ್ಸ್ ಆಫ್ ಗ್ಲೋರಿ" ಪುಸ್ತಕಕ್ಕೆ ಕರ್ಣಾಟಕ ಸಾಹಿತ್ಯ ಅಕಾಡೆಮಿ ಪುರಸ್ಕಾರಗಳು ದೊರೆತಿವೆ.

ದೇಶದ ಹಿರಿಯ ವಿಜ್ಞಾನಿಗಳಾದ ಅಬ್ದುಲ್ ಕಲಾಂ, ವಿಕ್ರಮ್ ಸಾರಾಭಾಯ್, ರಾಜಾ ರಾಮಣ್ಣ, ಇವರೊಂದಿಗೆಲ್ಲಾ ಕಾರ್ಯ ನಿರ್ವಹಿಸಿದ ಸತ್ಯರ ಕೊಡುಗೆ ವಿಜ್ಞಾನ ಮತ್ತು ಸಾಹಿತ್ಯ ಕ್ಷೇತ್ರಗಳಿಗೆ ಅತ್ಯಂತ ಮಹತ್ವದ್ದು ಎನ್ನಬಹುದು.

**..........ಶಯನಕೆ ಪಾಳು ದೇಗುಲಗಳುಂಟು**

**ಆತ್ಮ ಸಂಗಾತಕೆ ಚೆನ್ನ ಮಲ್ಲಿಕಾರ್ಜುನಾ ನೀ ಎನಗುಂಟು**

ಎಂದು ಹಾಡಿದ ಸತ್ಯ, ಚೆನ್ನಮಲ್ಲಿಕಾರ್ಜುನನ ಸಂಗಾತವನ್ನರಿಸಿ ಹೊರಟಿದ್ದಾರೆ.

ಅಗಲಿದ ಸತ್ಯರಿಗೆ ಅಪರಂಜಿ ತನ್ನ ದುಃಖ ತಪ್ತ ಶ್ರದ್ಧಾಂಜಲಿಯನ್ನು ಅರ್ಪಿಸುತ್ತಾಳೆ. ಅವರ ಮಧುರ ನೆನಪು ನಮ್ಮೆಲ್ಲರ ಮನದಲ್ಲಿ ಸದಾ ಹಸಿರಾಗಿರುತ್ತದೆ.

■

**ಅಪರಂಜಿ 2023 ವಿಶೇಷಾಂಕ**

– ನಮ್ಮ ಲೇಖಕರಿಗೆ ಮನವಿ

ಅಕ್ಟೋಬರ್ 2023 ಅಪರಂಜಿ ವಿಶೇಷಾಂಕ್ಕಾಗಿ ತಿಳಿಹಾಸ್ಯ/ಪ್ರಬಂಧ ಪ್ರಾಕಾರಗಳ ಲೇಖನಗಳನ್ನು ಕಳಿಸಿ. ನುಡಿ 01 ತತ್ರಾಂಶದಲ್ಲಿ ಟೈಪ್ ಮಾಡಿ ಮೈಲ್‌ಗೆ ಅಟ್ಯಾಚ್ ಮಾಡಿ ಕಳಿಸಿದ ಲೇಖನಗಳನ್ನು ಮಾತ್ರ ಪರಿಗಣಿಸಲಾಗುವುದು. ದಯಮಾಡಿ ಗಮನಿಸಿ – ಹಸ್ತಪ್ರತಿಗಳನ್ನು ಸ್ವೀಕರಿಸುವುದನ್ನು ನಿಲ್ಲಿಸಲಾಗಿದೆ. ನಿಮ್ಮ ಲೇಖನಗಳು ನಮಗೆ ಅಪರಂಜಿಯಲ್ಲಿರುವ ಮಿಂಚಂಚೆಗೆ ಆಗಸ್ಟ್ 30ರೊಳಗೆ ತಲುಪಬೇಕು.



ಶ್ರೀನಿವಾಸ ವೈದ್ಯ

## ಶ್ರದ್ಧಾಂಜಲಿ

**✍ಶಿವಕುಮಾರ್**

ಗೆಳೆಯ ಶ್ರೀನಿವಾಸ ವೈದ್ಯ ಇನ್ನಿಲ್ಲ. ಸುಮಾರು ಐದು ದಶಕಗಳಷ್ಟು ಕಾಲ ಸ್ನೇಹ, ಹರಟೆ, ನಗೆಚಾಟಿಕೆ, ಜೀವನದ ಮೌಲ್ಯಗಳು, ಇವುಗಳ ಶ್ರೀಮಂತ ಸಂಸ್ಕೃತಿಯನ್ನು ನನ್ನೊಂದಿಗೆ ಹಂಚಿಕೊಂಡು, ಈ ಜೀವಯಾತ್ರೆಯನ್ನು ಸುಗಮ ಗೊಳಿಸಿದ ಮಿತ್ರನ ಅಗಲಿಕೆ, ಅನಿರೀಕ್ಷಿತ ವಲ್ಲದಿದ್ದರೂ, ಒದಗಿ ಬಂದಾಗ ಭರಿಸುವುದು ಸುಲಭವಲ್ಲ. ಅಪರಂಜಿಯ ಪ್ರಾರಂಭದ ದಿನಗಳಿಂದಲೂ ವೈದ್ಯರು ನಮ್ಮ ಪತ್ರಿಕೆಗೆ ಬಹು ಉತ್ಕೃಷ್ಟ ಲೇಖನಗಳನ್ನು ನೀಡಿ ನಮ್ಮ ಪ್ರಯತ್ನಕ್ಕೆ ಇಂಬು ನೀಡಿದ್ದರು. ವೈದ್ಯರ ಮೇರುಕೃತಿ "ಹಳ್ಳ ಬಂತು ಹಳ್ಳ" ಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿದ್ದು ಅವರ ಅಸಾಮಾನ್ಯ ಪ್ರತಿಭೆಗೆ ಸಾಕ್ಷಿ. ಅಪರಂಜಿಗೆ ಶ್ರೀಯುತರು ಬರೆದ ಲೇಖನಗಳ ಸಂಗ್ರಹಗಳಾದ, "ತಲೆಗೊಂದು ತರತರ", "ರುಚಿಗೆ ಹುಳಿಯೊಗರು" "ಅಗ್ನಿ ಕಾರ್ಯ" ಇವೇ ಮುಂತಾದ ಅನೇಕ ಮೌಲ್ಯಯುತ ಪುಸ್ತಕಗಳು ವೈದ್ಯರ ಲೇಖಣಿಯಿಂದ ಮೂಡಿ ಬಂದಿವೆ.

ವೈದ್ಯರನ್ನು ನಾನು ಮೊದಲು ಭೇಟಿಮಾಡಿದ್ದು 1977ರಲ್ಲಿ. ಆಗ ಅವರು ಕೆನರಾ ಬ್ಯಾಂಕ್ ನಲ್ಲಿ ಮ್ಯಾನೇಜರ್ ಆಗಿದ್ದರು. ನಾನು ಆಗತಾನೆ ನನ್ನ ಪಬ್ಲಿಕ್ ಸೆಕ್ಟರ್ ಚಾಕರಿಗೆ ವಿದಾಯ ಹೇಳಿ, ಸಣ್ಣ ಉದ್ಯಮವೊಂದನ್ನು ಪ್ರಾರಂಭಿಸಿ ಹಣಕಾಸಿನ ನೆರವಿಗಾಗಿ ವೈದ್ಯರಲ್ಲಿಗೆ ಹೋಗಿದ್ದೆ. ಆಗ ಪ್ರಾರಂಭವಾದ ಪರಿಚಯ, ಕ್ರಮೇಣ ಸ್ನೇಹಕ್ಕೆ ತಿರುಗಿದ್ದಕ್ಕೆ ನಮ್ಮಿಬ್ಬರ ಸಮಾನ ಮನೋಧರ್ಮ ಬಹುಮಟ್ಟಿಗೆ ಕಾರಣವಾಗಿತ್ತು. ಜೀವನದ ವಿಚಿತ್ರ ಆಗುಹೋಗುಗಳು ನಮ್ಮಿಬ್ಬರನ್ನೂ ಒಂದೇ ರೀತಿಯಲ್ಲಿ ಚಕಿತಗೊಳಿಸುತ್ತಿದ್ದವು. ಜೀವನ ನಮ್ಮ ಮುಂದೆ ಒಡ್ಡುವ ಈ ಪರಿಹಾರವಿಲ್ಲದ ಒಗಟುಗಳಿಗೆ ತಕ್ಕ ಪ್ರತಿಕ್ರಿಯೆ ಹಾಸ್ಯ ಎಂಬ ಸತ್ಯವನ್ನು ವೈದ್ಯ ದೃಢವಾಗಿ ನಂಬಿದ್ದರು.

ವೈದ್ಯರು ಅಪರಂಜಿಗೆ ಬರೆದ ಮೊದಲ ಲೇಖನ ಸ್ಯಾರೀಗಾರ್ಡ್. ಅಂದಿನಿಂದ ಮುಂದಿನ ಎರಡು ದಶಕಗಳಲ್ಲಿ ಪುಂಖಾನುಪುಂಖವಾಗಿ ಬರಹಗಳು ವೈದ್ಯರ ಲೇಖಣಿಯಿಂದ ಹರಿದು ಬಂದವು. ಅವರ ಚೊಚ್ಚಲ ಪುಸ್ತಕ "ತಲೆಗೊಂದು ತರತರ"ದ ಬಿಡುಗಡೆ ಸಮಾರಂಭ ಅಪರಂಜಿಯ ವತಿಯಿಂದ ನಡೆದದ್ದು. ಪೂಜ್ಯ ಶಿವರಾಮಕಾರಂತರು ಈ ಪುಸ್ತಕವನ್ನು ಲೋಕಾರ್ಪಣೆ ಮಾಡಿದ್ದರು.

1996ರಲ್ಲಿ ಅಪರಂಜಿ ಬಳಗದ ನಾವು ಹಲವರು ಹಾಸ್ಯೋತ್ಸವವನ್ನು ಜಯನಗರದ ಎಚ್.ಎನ್.ಕಲಾಕ್ಷೇತ್ರದಲ್ಲಿ ನಡೆಸುವ ಸನ್ನಾಹ ನಡೆಸಿದ್ದಾಗ ಆ ಕುರಿತು ನಾವು ನಡೆಸಿದ ಮೊದಲ ಸಭೆಯನ್ನು ವೈದ್ಯರ ಮನೆಯ ಮಹಡಿಯ ಮೇಲೆ ನಡೆಸಿದ್ದನ್ನು ಇಂದಿಗೂ ಗೆಳೆಯ ಕೃಷ್ಣ ನೆನಪಿಸಿಕೊಳ್ಳುತ್ತಾರೆ.

ಅಂದಿನಿಂದ ಹಾಸ್ಯೋತ್ಸವಗಳೊಂದಿಗಿನ ವೈದ್ಯರ ನಿಕಟ ಬಾಂಧವ್ಯ ಎರಡು ದಶಕಗಳ ಕಾಲ ನಿರಂತರವಾಗಿ ನಡೆದುಬಂತು. ನಮ್ಮ ಹಾಸ್ಯೋತ್ಸವದ ಭಾಷಣಕಾರರಲ್ಲಿ ವೈದ್ಯರದ್ದೇ ಸ್ಟಾರ್ ಅಟ್ರಾಕ್ಷನ್.

ಮೊನ್ನೆ ಹಲವು ವಾರಗಳ ಹಿಂದೆ ಅವರನ್ನು ಭೇಟಿಮಾಡಲು ಅವರ ಮನೆಗೆ

ಹೋಗಿದ್ದೆ. ವೈದ್ಯರು ಗಾಲಿ ಕುರ್ಚಿಯ ಮೇಲೆ ಕುಳಿತಿದ್ದರು. ದೇಹ ಕ್ಷೀಣವಾಗಿತ್ತು. ಮಾತುಕತೆ ತನ್ನ ಹೊಳಪನ್ನು ಕಳೆದುಕೊಂಡಿರಲಿಲ್ಲ. "ಅಪರಂಜಿಗೊಂದು ಚುಟಕ ಬರೆದಿದ್ದೇನೆ. ಬರ್ಕೋ" ಅಂದರು. ನಾನು ನನ್ನ ಮೊಬೈಲ್‌ನ ನೋಟ್‌ಪ್ಯಾಡ್ ತೆರೆದು ಸಿದ್ಧನಾದೆ. ಅವರು ಚುಟಕವನ್ನ ಹೇಳಲು ಪ್ರಾರಂಭಿಸಿದರು.

**"ಕಿವಿಯೊಳಗಿಷ್ಟು ಹತ್ತಿಯನಿಡುವಿರಿ**

**ಚಳಿ ನಿಮಗಾಗುವುದೆಂದು.**

**ಕಿವಿಯೊಳ ಹತ್ತಿಯು ಮೂಗಿಗೆ ಬಂದರೆ**

**ಚಳಿ ನಿಮಗಾಗದು ಎಂದೆಂದೂ"**

ವೈದ್ಯರು ಸ್ನೇಹಜೀವಿ. ಅವರೊಂದಿಗಿನ ಐದು ದಶಕಗಳಷ್ಟು ಸುದೀರ್ಘ ಒಡನಾಟದಲ್ಲಿ ಅವರೊಂದಿಗೆ ಅನೇಕ ಪ್ರವಾಸಗಳನ್ನು ಕೈಗೊಳ್ಳುವ ಸೌಭಾಗ್ಯ ನನ್ನದಾಗಿತ್ತು. ಧಾರವಾಡ ವೈದ್ಯರ ಹುಟ್ಟೂರು. ಹಾಗಾಗಿ ಅನೇಕ ಬಾರಿ ವೈದ್ಯ ದಂಪತಿಗಳೊಂದಿಗೆ ಅಲ್ಲಿಗೆ ಹೋಗುವ ಅವಕಾಶ ದೊರಕಿತ್ತು. ಒಂದು ಸಂಜೆ ಅಲ್ಲಿನ ಕೆಲಗೆರೆಯ ದಂಡೆಯ ಮೇಲೆ ವಾಯು ವಿಹಾರಕ್ಕಾಗಿ ಹೊರಟಿದ್ದೆವು. ಶೀನೂ (ವೈದ್ಯರನ್ನ ಹಾಗೆ ಕರೆಯುತ್ತಿದ್ದದ್ದು) ಎಂದಿನಂತೆ ತನ್ನ ಮುಂಬರುವ ಅಮೋಘ ಕಾದಂಬರಿಯ ರೂಪುರೇಷೆಗಳ ವರ್ಣನೆಯಲ್ಲಿ ತೊಡಗಿದ್ದ. ಸ್ವಲ್ಪ ನಡೆದಾಡಿದ ನಂತರ ಅಲ್ಲೇ ಹತ್ತಿರದಲ್ಲಿದ್ದ ಕಲ್ಲು ಬೆಂಚೊಂದರ ಮೇಲೆ ಕುಳಿತೆವು. ಒಮ್ಮೆಲೆ, ಶೀನೂ, ಬೇಂದ್ರೆಯವರ "ನನ್ನ ಕೈಯ ಹಿಡಿದಾಕೆ" ಕವನವನ್ನು ಹಾಡಲು ಪ್ರಾರಂಭಿಸಿದ. ಶೀನುವಿನ ಭಾವಪರವಶತೆ, ಸ್ವರ ಮಾಧುರ್ಯ, ಹೃದಯದ ತಂತುಗಳನ್ನು ಮಿಡಿಯುವಂತಿದ್ದ ಕವನದ ಸಾಲುಗಳು, ಇವೆಲ್ಲವೂ ಒಂದುಗೂಡಿ ಅಲ್ಲಿ ಒಂದು ಅಪೂರ್ವ ಲೋಕವನ್ನು ಸೃಷ್ಟಿಸಿದ್ದವು. ನಿನ್ನೆಯ ತಪ್ಪುಗಳನ್ನು ಮರೆಸುವ, ನಾಳಿನ ಚಿಂತೆಯನ್ನು ದೂರವಿಡುವ, ಕಾಲವನ್ನು ಸ್ತಬ್ಧವಾಗಿಸುವ ಕಿನ್ನರ ಲೋಕವದು.

**ಬಡತನ ಒಡೆತನ ಕಡೆತನಕುಳಿದಾವೇನ**

**ಎದೆ ಹಿಗ್ಗು ಕಡೆಮಟ್ಟ**

**ಬಾಳಿನ ಕಡಲಾಗ ಅದನ ಮುಳುಗಿಸ ಬ್ಯಾಡ**

**ಕಡೆಗೋಲು ಹಿಡಿ ಹುಟ್ಟ**

ಎಂಬ ಸಾಲುಗಳಂತೂ ಜೀವನದ ಬಂಜರುಭೂಮಿಯಲ್ಲಿ ಓಯಸಿಸ್ ಅನ್ನು ಕಾಣುವ ಕಲೆಯನ್ನು ತಿಳಿಸಿ ಹೇಳುವಂತಿದ್ದವು. ಇಂತಹ ಎದೆಹಿಗ್ಗನ್ನು ಮುಕ್ತ ಮನದಿಂದ ನನ್ನದಾಗಿಸಿದ ಮಿತ್ರ ಶೀನೂರಿಗೆ ಇದೋ ನನ್ನ ಕೊನೆಯ ನುಡಿನಮನ.

■

# ರಾಮಿ ಮತ್ತು ಟಾಮಿ

✍ ಬೆಂಶ್ರೀ ರವೀಂದ್ರ

ರಾಮಿಯನ್ನು ನೀವು ನೋಡಿರಬಹುದು. ಐದಡಿಗಿಂತ ಸ್ವಲ್ಪ ಕಮ್ಮಿ. ಸಣ್ಣಕಲ. ಆಯತಾಕಾರದ ಪುಟ್ಟಮುಖ. ನೇರ ಮೂಗು. ಪೊದೆ ಮೀಸೆ. ಪಲ್ಸರ್ ಮೊಟರ್ಬೈಕ್. ಬೆಳಗ್ಗೆ ಏಳಕ್ಕೆ ಹೊರಟರೆ ಮಧ್ಯಾಹ್ನ ಮೂರಕ್ಕೊ ನಾಲ್ಕಕ್ಕೊ ಬರುತ್ತಾನೆ.

ನಮ್ಮ ಬೀದಿಲಿ, ಸುಮಾರು 10–15 ನಾಯಿಗಳಿವೆ. ಯಾಕೆ?, ತಪ್ಪೇನು?, ಅವಕ್ಕೆ ಬದುಕು ಹಕ್ಕು ಇಲ್ವಾ ಅಂತ ಕೇಳ್ಬೇಡಿ. ಖಂಡಿತಾ ಇದೆ. 26000 ವರ್ಷದಿಂದ ಮನುಷ್ಯನ ಜೊತೆಲಿ ನಾಯಿ ಬದುಕಿದೆ ಅಂತ ನಮ್ಮ ಮಂಜು ಬರೆದಿದಾನೆ. ದೇವೇಂದ್ರನ ಹತ್ರಾನೂ ನಾಯಿ ಇತ್ತು ಅಂತ ಅವ್ನ ಕಥೆ.

ಈ ನಾಯಿಗಳು ಹೊಸಬರ್ನಂತೂ ಬೀದಿಗೆ ಸೇರಿಸ್ತಾ ಇರ್ಲಿಲ್ಲ. ಹಳಬರನ್ನೂ ಕೆಲವು ಸರ್ತಿ ಹೆದರ್ಸ್ತಾಯಿತ್ತು. ದ್ವಿಚಕ್ರಿಗಳಿಗಂತೂ ನಾಯಿಗಳು ಸಿಂಹಸ್ವಪ್ನ. ಬುರ್ ಅಂತ.. ಗಾಡಿಗಳು.. ಬರೋದೇ ತಡ... ಬರ್...ಅಂತ ಇವು ಗಾಡಿ ಹತ್ರ ಓಡೋದು, ಪಾಪ ಕೆಲವ್ರು ಹೆದ್ರಕ್ಕೊಂಡು ಬುರ್ಬುರ್ ಅಂತ ಆಕ್ಸಿಲೇಟರ್ ತಿರುಗಿಸೋದು, ಧಬಾರ್ ಅಂತ ಬೀಳೋದು ಎಲ್ಲಾ ನಡಿತಿತ್ತು.

ಕೆಲವರು, ಧೈರ್ಯವಂತ ಗಂಡಸರು... ಓ... ಹಾಗಲ್ಲಾ ಸ್ವಾಮಿ, ಹೆಂಗಸರೂ ಕೂಡಾ ಗಾಡಿ ಸ್ಲೋ ಮಾಡೋರು, ಇಲ್ಲ ಬ್ರೇಕ್ ಹಾಕಿ ಗಪ್ಪಂತ, ನಾಯಿ ಕಣ್ಣಿಗೆ ಕಣ್ಣಿಟ್ಟು ನಿಂತು ಬಿಡೋರು. ಪಾಪ, ಇನ್ನೇನು ಮಾಡತ್ವೆ ಅವು. ಚುನಾವಣಾ ಕಾಲದ ಮಂತ್ರಿಗಳ ತರಹ ಗಪ್ಪಾಗಿ ನಿಂತು, ಸರಕ್ಕಂತ ದಾರಿ ಬಿಡ್ತಿದ್ವು. ಪಾಪ. ಆಗ್ನೋಡ್ಬೇಕಪ್ಪಾ, ಆ ಧೈರ್ಯಸ್ಥರ ಜರ್ಬು. ಬಡಾವಣೆ ವಾಟ್ಸಪ್ ಗುಂಪಲ್ಲಿ, ಬರೆದಿದ್ದೂ ಬರೆದಿದ್ದೆ. ಹಾಗೆ... ಹೀಗೆ... ಹೀಗ್ಮಾಡಿ... ಹಾಗ್ಮಾಡಿ... ಗಂಟೆಗಟ್ಟಲೆ ಗಳಹು.

ಅವತ್ತು ಬೆಳಗ್ಗೆ ಕಾಫೀ ಬಟ್ಟಲು ಬಾಯ್ಗಿಟ್ಟು, ಪೇಪರ್ ಎತ್ಕೊಳಕ್ಕೆ ರೆಡಿ ಅಗ್ತಾಯಿದ್ದೆ.

ನನ್ನ ಮಡದಿ ..

"ರೀ.. ನೋಡದ್ರಾ, ಎದ್ರು ಮನೆ ರಾಮಿಗೆ ನಾಯಿ ಕಚ್ಚಿತಂತೆ" ಅಂದ್ಲು.

"ನಿಂಗ್ಯಾರಮ್ಮಾ ಬೆಳಗ್ಗೆ.. ಬೆಳಗ್ಗೆ... ಬಾತ್ಮೀ ಕೊಟ್ಟವರೂ..". ಅಂತಿದ್ದಾಗೆ,

"ನೀವೊಂದು.. ದಂಡ!, ಅದೇನು ಪೇಪರು ಪೇಪರು ಅಂತ ಸಾಯ್ತಿರಿ, ಏನಿರ್ತೆ ಅದರಲ್ಲಿ, ಅದೇ ....ಡ್ಯಾಶ್..... ಡ್ಯಾಶ್.......ಡುಶುಂ.., ಅವ್ರದ್ದೆ . ಡುಶುಂ.. ಡುಶುಂ..... ಹಾಡಿದ್ದೇ ಹಾಡೋ ಕಿಸಬಾಯಿ ದಾಸಾ ಅನ್ನೊ ಹಾಗೆ" ಗುಡ್ಗು ಕೇಳಿಸ್ತು. ತಲೆ ಎತ್ತಿನೋಡ್ದೆ, ಆಕಾಶ ನಿರಭ್ರವಾಗಿತ್ತು. ನಾನೇ ತಲೆ ಚಚ್ಚುಕೊಬೇಕಾಯ್ತು. ಇಷ್ಟು ವರ್ಷ ಅನುಭವ ಆದ್ರೂ, ಗುಡುಗು ಅಂದ್ರೆ ಆಕಾಶ ಅಂದ್ಕೊಂಡಿದಿನಲ್ಲ.!.

"ವಾಟ್ಸಪ್ ನೋಡಿ, ಅದೇ ರೆಸಿಡೆಂಟ್ಸ ಗ್ರೂಪಲ್ಲಿ, ಫೋಟೋ ಹಾಕಿದಾರೆ, ಪಾಪ. ಮೀನಖಂಡನ ನಾಯಿ ಗಬ್ಬಕ್ಕಂತ ಹಿಡ್ಕೊಂಬಿಟ್ಟಿದೆ."

"ನಾಯಿ.. ಕಚ್ಚತ್ತಾಯಿರೋ ಫೋಟೋನಾ... ಯಾರಪ್ಪಾ ತೆಗೆದ್ರೂ.. ಎಂಥಾ

ಒಳ್ಳೆ ಫೋಟೋಗ್ರಾಫರ್ರು"

"ಆಹಾ.. ನಿಮ್ಮ ಜಾಣತನಕ್ಕೆ ಏನ್‌ಹೇಳ್ಲಿ. ಯಾರಾದ್ರೂ ಫೋಟೋಗ್ರಾಫರ್ ಇಟ್ಕೊಂಡು ನಾಯಿ ಕೈಲಿ ಕಚ್ಚಿಸಿಕೊತಾರಾ"

"ಏನು, ನಾಯಿ ಕೈನಲ್ಲಿ ಕಚ್ಚತಾ"

"ಆಹಾ... ಮತ್ತದೆ, ಮಸ್ಕಿರಿ ಮಾಡಬೇಡಿ. ಅತೀ ಜಾಣತನ. ನಿಮ್ಮನ್ನ ಯಾರು ಜಾಣಾ ಅಂದ್ರೋ ದೇವ್ರಿಗೇ ಗೊತ್ತು. ನಿಮ್ಮಮ್ಮ ಮಾತ್ರಾ ಹುಡ್ಗಿ ನೋಡೋಕ್ಕೆ ಬಂದಾಗ ಹಾಡಿ ಹೊಗಳಿದ್ರು, ಮದ್ವೆ ಆಯ್ತಾ.. ಆಮೇಲೆ.. ಒಂದ್ ದಿನಾನೂ ಅವ್ರು, ನನ್ನ ಮಗ ಜಾಣ ಅನ್ನಲಿಲ್ಲ. ಟೋಪಿ ಹಾಕಿ ಅಗಿತ್ತಲ್ಲಾ ನಂಗೆ.. ಇನ್ನ್ಯಾಕೆ ಅಂತ ನಿಜಾನೆ ಹೇಳ್ತಿದ್ರು ಪಾಪ. ಸ್ವಲ್ಪ ನೋಡ್ಕೊಳಮ್ಮ, ವ್ಯವಹಾರ ಜ್ಞಾನ ಕಮ್ಮಿ, ಆದ್ರೆ ಒಳ್ಳೆ ಹುಡ್ಗ ಅಂತ ನೂರ್ಸರಿ"

"ಅದಿರ್ಲಿ, ಆ ವಿಷ್ಯ ಈಗ್ಯಾಕೆ, ನಿಮ್ಮಪ್ಪ ಹೇಳಿದ್ದು ನಾನು ಹೇಳ್ಲಾ..... ಕಾಸು ಕೊಟ್ಟಾಯ್ತು.. ಹೊಗೆಸೊಪ್ಪು ಸುಟ್ಟಾಯ್ತು ಆ ವಿಷ್ಯ ಬಿಡು. ಈಗೇನಿದ್ರೂ ಸಮ್ಮಿಶ್ರ ಸರ್ಕಾರ, ಹೊಂದಾವಣಿಕೆ ರಾಜಕಾರಣ."

"ಸರಿ, ನೀವು, ಫೋಟೋ ನೋಡ್ತಾಯಿರಿ, ನಾನು...ಒಂದ್ನಿಮಿಷ ಬರ್ತಿನಿ" ಅನ್ನುತ್ತಲೆ ಹೊರಗೆ ನಡೆದ್ಲು. ಕಿಟಕಿಯಿಂದ ನೋಡ್ದೆ. ಆ ಕಡೆಯಿಂದ ರಾಮಿ ಬರ್ತಾಯಿದ್ದ.

ವಾಟ್ಸಪ್ ತೆರೆದೆ. ನಿವಾಸಿಗಳ ಗುಂಪು. ಆಗಲೆ ಬಿಸಿಬಿಸಿ ಚರ್ಚೆ ಆರಂಭ ಆಗಿತ್ತು. ರಾಮಿ ಫೋಟೋ ನೋಡ್ಬೇಕಾದ್ರೆ, ಹಿಂದಕ್ಕೆ ಸ್ಕ್ರೋಲ್ ಮಾಡ್ಬೇಕಿತ್ತು. ಮೀನಖಂಡದ ಚಿತ್ರ, ಮಧ್ಯಭಾಗಕ್ಕೆ ಸರಿಯಾಗಿ ಎರಡು ಹಲ್ಲಿನ ಗುರುತು. ಅದೇ ಚಿತ್ರದ ಬೇರೆ..ಬೇರೆ..ಕೋನಗಳ ಇನ್ನೇರಡು ಚಿತ್ರಗಳು. ನಾನು ಮತ್ತೆ ಮೇಲೆ ಕೆಳಗೆ ಸ್ಕ್ರೋಲ್ ಮಾಡ್ದೆ. ನಾಯಿ ಕಚ್ಚಿತಾಯಿರೋ ಫೋಟೋ ಇದ್ಯಾ ಅಂತ.

ಹೊರಗಡೆಯಿಂದ ಧ್ವನಿ ಕೇಳಿಸ್ತಿತ್ತು.

"ಯಾವಾಗಾಯ್ತು"

"ನಿನ್ನೆ ಸಂಜೆ 7 ಗಂಟೆ"

"ಹೇಗಾಯ್ತು? ಜೋರಾಗಿ ಓಡಿಸಿದ್ರಾ?"

"ಇಲ್ಲಾ ಮೇಡಂ, ನಾನು ಸ್ಲೋನೇ, ನಾನು ಬರ್ತಾಯಿದ್ದಾ, ಇನ್ನೇನು ನಮ್ಮ ಓಣಿಗೆ ತಿರ್ಗಬೇಕು ಅನ್ನೋ ಅಷ್ಟರಲ್ಲಿ, ಆ ಕಡೆ, ಈ ಕಡೆ ಎರಡೂ ಕಡೆ ಇದ್ದ ಎರಡ್ನಾಯಿ ಚಕ್ಕಂತ ಓಡೋಯ್ತು. ನಾನು ನೋಡೇ ಇರ್ಲಿಲ್ಲಾ... ಕಾರ್ ಹಿಂದೆ ಇತ್ತು ಇನ್ನೊಂದ್ ನಾಯಿ.. ಸರ್ರಂತ ಬಂದು, ಕಾಲಿಗೆ ಬಾಯಿ ಹಾಕೇಬಿಡ್ತು. ಪ್ಯಾಂಟ್ ಇದ್ರೂ ಮೀನಖಂಡಕ್ಕೆ ಬಾಯಿ ಊರೇ ಬಿಡ್ತು."

"ಅಯ್ಯೋ ಪಾಪ, ಛೇ..ಛೇ... ಹೀಗಾಬಾರ್ದಿತ್ತು. ದಿನಾ ಓಡಾಡೋ ರಸ್ತೆ, ನೋಡಿರೋ ನಾಯಿ, ಹಾಗೂ ಕಚ್ಚಿ ಬಿಡ್ತಾ, ಆ ನಾಯಿ ಯಾವುದು?. ಗೊತ್ತಾಗತ್ತಾ."

"ಓಹೋ.. ಗೊತ್ತಾಗ್ದೆಯೇನು? ಸರಿ, ನಾ ಬರ್ತಿನಮ್ಮಾ, ಆಸ್ಪತ್ರೆಗೆ ಹೋಗ್ಬೇಕು"

ರಾಮಿ ಹೊರಟ.

ನಮ್ಮನೆಯವಳಿಗೆ ಸ್ವಲ್ಪ ನಿರಾಸೆ ಆಗಿರ್ಬೇಕು. ಇನ್ನೂ ಏನೇನು ಪತ್ತೆದಾರಿ ಪುರುಷೋತ್ತಮನ ಪ್ರಶ್ನೆಗಳಿತ್ತೋ!. ಒಳಗೆ ಬರ್ತಾ "ಏನೋ ಪಾಪ ಅಂತ ಕೇಳಿದ್ರೆ, ರಾಜಕಾರ್ಯ ಇರೋ ಹಾಗೆ ಹೊರಟ" ಅಂತ ಗೊಣಗಿಕೊಳ್ತಾ ಅಡಿಗೆ ಮನೆ ಕಡೆಗೆ ಹೊರಟ್ಳು. ಅಂತೂ ಕೊನೆಗೂ ತಿಂಡಿ ಕೆಲಸ ಆರಂಭವಾಗಬಹುದು ಅನ್ನೋ ಭರವಸೆ ಮೂಡಲಿಕ್ಕೆ ಆರಂಭವಾಯ್ತು.

ನಾನು, ಮತ್ತೆ ನನ್ನ ಗಮನವನ್ನ, ನಿವಾಸಿಗಳ ವಾಟ್ಸಪ್ ಗುಂಪಿನ ಕಡೆಗೆ ಹರ್ಸಿದೆ. ಪಕ್ಕದ್ ಬೀದಿ ಮಾಧವ ಒಂದು ಪೋಸ್ಟ್ ಹಾಕಿದ್ದ. "ಮೂರನೆ ಬೀದಿ ಮಾತ್ರವಲ್ಲಾ, ನಂಬೀದೀಲೂ ಇದೇ ಸಮಸ್ಯೆ. ಇದಕ್ಕೆ ಏನಾದ್ರೂ ಪರಿಹಾರ ಕಂಡು ಹಿಡಿಬೇಕು"

ಕೆಳಗೆ ಇನ್ನೊಂದು ಪೋಸ್ಟು, "ನಾಯಿಗಳಿಗೆ ಊಟಾ ಹಾಕೋರು ಜಾಸ್ತಿ ಆಗಿದಾರೆ. ತಮ್ಮನೆಲಿ ಉಳಿದ ತಂಗಳು, ಬೆಂಗಳು ಎಲ್ಲಾ ಹಾಕ್ತಾರೆ. ನಾಯಿಗಳು ಆ ಆಹಾರ ತಿಂದು ಕೊಬ್ಬಿವೆ. ಮನುಷ್ಯರ ಮೇಲೆ ದಬ್ಬಾಳಿಕೆ ಮಾಡ್ತಾಯಿವೆ. ಮೊದಲು ನಾಯಿಗಳಿಗೆ ಊಟ ಹಾಕೊದು ನಿಲ್ಸಿ."

ತಕ್ಷಣ ಉತ್ತರ ಬಂದಿತ್ತು "ನಾಯಿಗಳೂ ಜೀವಿಗಳು, ಮನುಷ್ಯರಂತೆ ಅವುಗಳಿಗೂ ಬದುಕುವ ಹಕ್ಕಿದೆ. ಇಷ್ಟಕ್ಕೂ ನಾವು ತಿಂದು ಮಿಕ್ಕಿದ್ದು ವೇಸ್ಟ ಮಾಡೋದು ಸರಿನಾ?".

ಮತ್ತೊಂದು ಹೇಳಿಕೆ ಹೀಗಿತ್ತು "ನಾಯಿಗಳಿಗೆ ನಾವು ಹಾಕುವ ಪುಳ್ಚಾರ್‌ನಿಂದ ಕಚ್ಚುವ ಶಕ್ತಿ ಬರೊಲ್ಲ. ಅದೇ.. ಮೈನ್‌ರೋಡ್ ಮೂಲೇಲಿ ಇರೋ ದೊನ್ನೆ ಬಿರಿಯಾನಿ ಅಂಗಡಿಯವನು ಹಾಕೋ ಮಾಂಸದ ತುಂಡುಗಳಿಂದ ಅವಕ್ಕೆ ದುರಹಂಕಾರ ಬಂದಿದೆ. ಆ ಅಂಗಡಿ ಮುಚ್ಚಿಸಿ"

ಅರೆ, ದೊನ್ನೆ ಬಿರಿಯಾನಿ ಅಂಗಡಿ ಮುಚ್ಚಿಸಲು ನಾವು ಯಾರು?. ಆ ಕೆಲ್ಸಾ ಮಾಡೋರಾದ್ರು ಯಾರು? ಅಂತ ಯೋಚನೆ ಮಾಡ್ತಾ ಮುಂದಿನ ಪೋಸ್ಟ ಓದ್ದೆ. ಆಹಾ.. ಎಂಥಾ ಬುದ್ದಿವಂತೆ ಈ ಹೆಂಗ್ಸು ಅನ್ನಿಸ್ತು. ಆಕೆ "ನಮ್ಮ ಬೀದಿ ನಾಯಿ ಯಾರನ್ನೂ ಕಚ್ಚೊಲ್ಲ. ನಮ್ಮದು ಡೆಡ್‌ಎಂಡ್ ರಸ್ತೆ. ನಮ್ಮ ಬೀದಿ ನಾಯಿಗಳು ಗಲ್ಲಿ ಬಿಟ್ಟು ಹೊರಗೆ ಬರೊಲ್ಲ. ಬೇರೆಯವರ್ನ ಒಳಗೆ ಬಿಡೋಲ್ಲ. ನಾವು ಹಾಕಿದ್ದ ಕೂಳು ತಿಂದು ಆನಂದವಾಗಿದೆ. ಕಚ್ಚೊದು ಏನಿದ್ರೂ ಮೈನ್ ರೋಡ್ ನಾಯಿಗಳು."

ಮತ್ತೊಂದು ಪೋಸ್ಟು ನನ್ನ ಗಮನ ಸೆಳಿತು. ರಾಮಿ ಬರೆದಿದ್ದ "ಅಧ್ಯಕ್ಷರೆ, ನೀವೇನು ಮಾಡ್ತಾಯಿದಿರಿ. ನಿಮ್ಮ ಅಧ್ಯಕ್ಷತೆಯಲ್ಲಿ ನಾಯಿಗಳು ನಮ್ಮನ್ನ ಕಚ್ಚತಾಯಿದೆ. ತಕ್ಷಣ ಕ್ರಮ ತಗೊಳ್ಳಿ. ಕಾರ್ಪೊರೇಷನ್ಗೆ ಫೋನ್‌ಮಾಡಿ. ಮುಮಂ ಅವರಿಗೆ ಕರೆ ಮಾಡಿ. ಪ್ರಧಾನ ಸೇವಕರಿಗೆ ಟ್ವಿಟರ್ ಮಾಡಿ. ನಾಯಿಗಳಿಂದ ನಮ್ಮನ್ನು ಕಾಪಾಡಿ"

ತಕ್ಷಣ ಪ್ರತಿಕ್ರಿಯೆ ಬಂದಿತ್ತು.

"ಮಿ ರಾಮಿ, ಡೊಂಟ್‌ವರಿ. ನಾನು ಕಾರ್ಪೊರೇಷನ್ ಅಧಿಕಾರಿಗಳಿಗೆ ಈಗಲೆ ಮೆಸೆಜ್ ಕೊಡ್ತಿನಿ. ನೀವು ಮೊದಲು ಆಸ್ಪತ್ರೆಗೆ ಹೋಗಿ, ಟಿಟನಸ್, ಆಂಟಿ ರೇಬಿಸ್ ಚುಚ್ಚುಮದ್ದು ಹಾಕಿಸ್ಕೊಳ್ಳಿ. I will not allow any stone unturned." ಹೌದು, ಸರಿಯಾದ ಮಾತೇ! ನಮ್ಮ ಬಡಾವಣೆಯಲ್ಲಿ ಎಲ್ಲಾ ಸ್ಟೋನು ಟರ್ನಾಗಿ ಹೋಗಿದೆ!!.

ಅದರ ಕೆಳಗೆ ರಾಮಿ ಕೈ ಎತ್ತಿದ್ದೂ ಕಾಣಸ್ತಿತ್ತು.

ಮಾರನೆ ದಿವ್ಸಾ ಬೆಳಿಗ್ಗೆ 8.30 ರ ಸುಮಾರು. ಪೂಜೆಗೆ ಹೂವು ಬಿಡಿಸ್ತಾಯಿದ್ದೆ. ಡರ್..ಢರ್...ಅಂತ ಒಂದು ಲಗ್ಗೇಜ್ ವ್ಯಾನ್ ತರಹ ಗಾಡಿ ನಮ್ಮ ಬೀದಿಗೆ ಬಂತು. ನಾನು ನೋಡ್ತಾಯಿದ್ದ ಹಾಗೆ ಬೀದಿ ನಾಯಿಗಳೆಲ್ಲ ಬೌ..ಬೌ..ಅಂತ ಬೊಗಳ್ಕೊಂಡು ದಿಕ್ಕಾಪಾಲಾಗಿ ಓಡದ್ವು. ಒಂದೇ ಕ್ಷಣದಲ್ಲಿ ಬೀದಿಲಿ ಒಂದು ನಾಯೀನೂ ಇರಲಿಲ್ಲ.! ನಮಗಿಂತ ಮುಂಚೆ ನಾಯಿಗಳಿಗೆ ಗೊತ್ತಾಗಿತ್ತು.! ನಾಯಿ ಸ್ಕ್ವಾಡ್ ಬಂದಿದೆ ಅಂತ.!! ಗಾಡಿಯಿಂದ ನಾಕು ಹುಡುಗರು ಧಡ...ಧಡ.. ಅಂತ ಬಲೆ, ದಾರ, ಕೋಲು ಎಲ್ಲಾ ಹಿಡ್ಕೊಂಡು ಇಳ್ದ್ರೂ. ಗಾಡಿ ಹಿಂದೆ ಮೇಲ್ವಿಚಾರಕರು ಅಂತ ಕಾಣತ್ತೆ. ಸ್ಕೂಟರ್ನಲ್ಲಿ ಬಂದ್ರು. ನನ್ನ ಪಕ್ಕದಲ್ಲೆ ಬ್ರೇಕ್‌ಹಾಕಿ ನಿಲ್ಸಿ "ಯಾವ್ದೂ ಸಾರ್.... ನಾಯಿ?"

ಒಂದು ಕ್ಷಣ, ನನಗೆ ಅಯೋಮಯವಾಯ್ತು.

"ಯಾವ ನಾಯಿ ಸಾರ್..ನನಗೇನು ಗೊತ್ತು"

"ಓ ಸಾರಿ, ನೀವಲ್ವಾ ನಾಯಿ ಕೈನಲ್ಲಿ ಕಚ್ಚಿಸಿಕೊಂಡಿದ್ದು"

"ನಾಯಿಗಳು ಕೈನಲ್ಲಿ ಕಚ್ಚತ್ವಾ ಸಾರ್"ಅಂತ ಮತ್ತೆ ಅದೇ ಜೋಕ್ ಮಾಡ್ದೆ.

ಮನೆಲಿ, ಇದೇ ಮಾತಿಗೆ ಮೇಡಂ ಕೈನಲ್ಲಿ ಬೈಸಿಕೊಂಡಿದ್ದು ಮರೆತುಹೋಗಿತ್ತು. ಅಯ್ಯೋ ಮೇಡಂ ಕೂಡಾ ಕೈ ನಲ್ಲಿ ಬೈತಾರಾ, ಬಾಯ್ನಲ್ಲಿ ಅಲ್ವಾ ಅಂತ ಯೋಚಿಸುತ್ತಿರುವಾಗಲೆ, ಆ ಮೇಲ್ವಿಚಾರಕರು "ಒಳ್ಳೆ ತಮಾಷೆ ಜನ ರೀ ನೀವು. ಹಾಗನ್ನೋದು ಲೋಕಾರೂಢಿ ಅಲ್ವಾ. ಈಗ ಲಾರಿ ಹರಿದು ಜನರು ಸತ್ತರು ಅಂತ ಪೇಪರ್ನವರು ಬರಿತಾರೆ, ಲಾರಿ ಹರಿಯೋದು ಉಂಟಾ" ಅನ್ನುತ್ತಾ ನಕ್ಕು, ಅದು ಸರಿ, ಆ ನಾಯಿ ಕೈಲಿ ಕಚ್ಚಿಸಿಕೊಂಡವರ್ನ ಕರೀರಿ."

"ಅದೇ.. ನಾಯಿ ಬಾಯಲ್ಲಿ'

"ಹ್ಞಾ.. ಅದೇ ಅವರ್ನೆ ಕರೀರಿ". ಅಷ್ಟೊತ್ತಿಗೆ ಯಾರೋ ರಾಮಿಯನ್ನ ಕರ್ಕೊಂಬಂದ್ರು.

"ನೋಡಿ ಸಾರ್, ಇಲ್ಲೆ ಕಚ್ಚಿದ್ದು" ಪಂಚೇನ ಇನ್ನಷ್ಟು ಮೇಲೆತ್ತಿ ತೋರಿಸೋಕೆ ಶುರು ಮಾಡ್ದ.

"ಪಂಚೆ ಇಳ್ಸರಿ, ಇಂಜೆಕ್ಷನ್ ಹಾಕಿಸ್ಕೊಂಡ್ರಿ ತಾನೇ. ನಿಮಗೆ ಕಚ್ಚಿದ್ ನಾಯಿ ತೋರಿಸಿ"

ಅಷ್ಟು ಹೊತ್ತಿಗೆ ಹತ್ತಾರು ಜನ ಜಮಾಯಿಸಿದ್ರು. ನಾಯಿ ಹಿಡಿಯೋ ಹುಡುಗ್ರು ಅಲ್ಲೆ ಅವ್ರ ಆಯುಧ ಹಿಡ್ಕೊಂಡು ನಿಂತಿದ್ರು. ರಾಮಿ, ಸುತ್ತಾಮುತ್ತಾ ತಿರುಗಿ ನೋಡ್ದ. ಎಲ್ಲಿದೆ ನಾಯಿ, ಒಂದೂ ಇಲ್ಲ!!.

"ಸಾರ್, ನಿಮ್ಮ ಹೆಸ್ರು?" ಯಾರದೋ ಪ್ರಶ್ನೆ.

"ನಾನು ಸೀನಣ್ಣ. ಡಾಗ್ ಸೂಪರ್ವೈಸರ್, ಹೇಳ್ರೀ ಹೇಗಿತ್ತು ನಾಯಿ. ಕರಿನಾ..ಬಿಳೀನಾ... ಮಿಕ್ಸೆಡ್ ಕಲರ್ರಾ.. ಕಂದಾ.. ಯಾವ್ಬಣ್ಣ"

ರಾಮಿ" ಸಾರ್..ಕಂದು ಸಾರ್..ಮುಖದ್ಮೇಲೆ, ಕಣ್ಣ ಮಧ್ಯ ಬಿಳಿನಾಮ ಇತ್ತು ಸಾರ್"

ಸೀನಣ್ಣ ಸೂಚನೆ ಕೊಟ್ಟ. ಹುಡುಗ್ರು ಅವ್ರ ಆಯುಧ ತಗೊಂಡು ಕಂದು ಬಣ್ಣದ ನಾಯಿ ಹುಡತ್ತಾ ಗಲ್ಲಿ ಸುತ್ತತೊಡಗಿದರು.

ಸೀನಣ್ಣನ ಸಭೆ ಮುಂದುವರೆಯಿತು.

ಒಬ್ಬ ಕೇಳ್ದ "ಸಾರ್ ನಾಯಿನಾ ಏನು ಮಾಡ್ತಿರಿ?"

"ಮಾಡೋದೇನು ಬಂತು, ಅನೆಸ್ತೇಶಿಯಾ ಕೊಟ್ಟು ತಗೊಂಡು ಹೋಗ್ತೀವಿ. 10 ದಿನ ಗಮನಿಸಿ, ಸರಿಯಾಗಿದ್ರೆ ವಾಪಸ್ಸು ಇಲ್ಲೆ ತಂದು ಬಿಡ್ತಿವಿ"

"ಅಯ್ಯೋ ಇಲ್ಲೆ ಬಿಡೋಕೆ ಯಾಕೆ ಹಿಡ್ಕೊಂಡು ಹೋಗ್ತೀರಿ, ಬೇರೆ ಯಾವುದಾದರೂ ಬೇರೆ ಬೀದೀಲಿ ಬಿಟ್ಟಬಿಡಿ"

ಸೀನಣ್ಣಂಗೆ ಸಿಟ್ಟು ಬಂತು, "ಯಾಕ್ರಿ, ನನ್ನ ಕೆಲಸ ಕಳೀಬೇಕು ಅಂತ ಮಾಡಿದಿರಾ?, ಕಾನೂನೇ ಇದೆ ನಾಯಿಯ ವಾಸಸ್ಥಾನ ಬದಲಾಯಿಸಲು ಆಗೋಲ್ಲ"

"ಅಲ್ಲಾ ಸಾರ್, ರಾತ್ರಿಯೆಲ್ಲಾ ಬಡ್ಕೊತ್ತವೆ. ಒಳ್ಳೆ ನಿದ್ದೆ ಟೈಂಗೆ, ತರತರ ರಾಗ ಹಾಡ್ತವೆ. ಜಗಳ ಏನು, ಓಡೋದು ಏನು, ನಾಯಿ ಕಾಟ ಜನ್ಮಜನ್ಮಾಂತರಕ್ಕೂ ಬೇಡ."

ಸೀನಣ್ಣ "ನೀವ್ಯಾರೂ ನಾಯಿ ಸಾಕಿಲ್ವಾ.."

ಇದ್ದಕ್ಕಿದಂತೆ ಎಲ್ಲರ ಮುಖದಲ್ಲಿ ಖುಷಿ, ಎಲ್ಲರೂ ಮಾತಾಡೊಕ್ಕೆ ಶುರು. ನಮ್ಮನೆಲಿ.. ಆ ನಾಯಿಯಿದೆ...ಈ ನಾಯಿಯಿದೆ... ಫಾರಿನ್ ಬ್ರಾಂಡೂ. ನಾಯಿಗಳ ವರ್ಣನೆ ಆರಂಭ ಆಯ್ತು.

ಸೀನಣ್ಣ "ನಾಯಿ ಅಂದ್ರೆ ನಾಯಿನೇ, ಅದೇನು ಫಾರಿನ್ ಬ್ರಾಂಡೂ ಅಂದ್ರೆ ಎಂಟುಕಾಲು ಇರುತ್ತಾ". ಎಲ್ಲರೂ ಬೆಪ್ಪಾದ್ರು. ಕ್ಷಣದಲ್ಲಿ ತೆಪ್ಪಗಾದ್ರು.

ಹುಡುಗ್ರು ವಾಪಸ್ಸು ಬಂದ್ರು." "ಅಣ್ಣಾ.. ಇಲ್ಲೆಲ್ಲಾ ಇರೋದು ಬರೀ ಕಂದು ನಾಯಿನೆ",

ಸೀನಣ್ಣ ರಾಮಿ ಕಡೆ ನೋಡ್ದ.

"ಅದೇ ಸಾರ್...ಕಂದು ಬಣ್ಣದ ನಾಯಿ, ಬಿಳಿನಾಮ !. ಎಲ್ಲಾ ಕಂದು ನಾಯಿ ಹಿಡ್ಕೊಂಡು ಹೋಗಿ ಸಾರ್"

ನಾಯಿಗಳೆಲ್ಲಾ ಓಡಿಹೋಗಿತ್ತು. ಓಡಲಾರದ ನಾಕು ಕಂದು ಬಣ್ಣದ ನಾಯಿಗೆ ಅರಿವಳಿಕೆ ಕೊಟ್ರೂ. ಹಣೆ ಮೇಲೆ ಹಸಿರು ಪಟ್ಟೆ ಹಾಕಿದ್ರು.

"ಹಸಿರು ಪಟ್ಟೆ ಯಾಕೆ ಹಾಕಿದ್ರಿ"

"ಗುರ್ತಿಗೆ"...

ಹಿಡಿದಿದ್ದ ನಾಯಿನೆಲ್ಲ ಗಾಡಿಗೆ ಹಾಕಿದ್ರು. ಗಾಡಿ ಬುರ್. ಅದರ ಹಿಂದೆ ಸೀನಣ್ಣನ ಗಾಡಿನೂ.. ಬುರ್.

ನಾನೂ ನಿಧಾನವಾಗಿ ನಮ್ಮ ಬೀದಿಗೆ ಬಂದೆ. ಮನೆ ಗೇಟು ತೇಗಿತಾಯಿರೋವಾಗ ಹಿಂದಿನಿಂದ ಯಾರೋ ನಕ್ಕಂತೆ ಆಯ್ತು. ಹಿಂತಿರುಗಿದೆ, ಯಾರೂ ಇಲ್ಲ. ಯವುದೋ ಬಿಳಿ ನಾಯಿ. ಕಣ್ಣಗಳ ನಡುವೆ ಕಂದು ನಾಮ!. ಅಷ್ಟೊತ್ತಿಗೆ ಮಗ ಅಲ್ಲಿಗೆ ಬಂದ.

ವಿಷಯ ಹೇಳ್ದೆ, ಅವ್ನೂ ನಕ್ಕ. "ಅಪ್ಪಾ ರಾಮಿನ ಕಚ್ಚಿದ್ದು ಕಂದು ನಾಯಿ ಅಲ್ಲ, ಈಗ ಹೋಯ್ತಲ್ಲಾ, ಅದೇ ಬಿಳಿ ನಾಯಿ, ಟಾಮಿ. ಈ ಬೀದಿಲೇ ಇರುತ್ತೆ. ಕಚ್ಚಿದ್ದು ಬಿಟ್ಟು ಬೇರೆ ಹೊತ್ತಕ್ಕೊಂಡು ಹೋಗಿದಾರೆ. ರಾಮಿಗೆ ಕಚ್ಚಿದಾಗ ನಾನು ಹಿಂದೆನೇ ಇದ್ದೆ. ಸರಿಯಾಗೇ ನೋಡಿದಿನಿ. ರಾಮಿನ ಕಚ್ಚಿದ್ದು ಟಾಮಿ"

ಮತ್ತೆ ಯಾರೋ ನಕ್ಕಂತೆ ಆಯ್ತು. ತಲೆ ಎತ್ತಿ ನೋಡದ್ರೆ, ಟಾಮಿ!!.

"ಇನ್ನು ಹತ್ತು ದಿವ್ಸಕ್ಕೆ ಹಸಿರುಹಚ್ಚೆ ಹಾಕಿಸ್ಕೊಂಡವ್ರು ವಾಪಸ್‌ಬರ್ತಾರೆ" ಅಂತ ಟಾಮಿ ಹೇಳಿದ್ದು ಕೇಳಿಸ್ತು!. ಜೊತೆಗೆ ಜೋರು ನಗೂನೂ.!!. ಕೇಳಿಸ್ತು.

■

ಲಕ್ಷ್ಮಣ್ ಕೊರವಂಜಿ

ನಲವತ್ತರ ದಶಕದಲ್ಲಿ ಯುವ ಕನ್ನಡಿಗ ಆರ್.ಕೆ. ಲಕ್ಷಣ್ ಕೊರವಂಜಿಗಾಗಿ ರಚಿಸಿ ಕೊಟ್ಟ ವ್ಯಂಗ್ಯಚಿತ್ರಗಳು ಹಲವು.

ಅವುಗಳಲ್ಲಿ ಇದೂ ಒಂದು – ನಿಮಗಾಗಿ.



"ಏಣೀನ ಇಡೊ ಇಲ್ಲಿ, ನಾ ಇಳೀಬೇಕು.
ಇಡ್ತಿಯೋ ಇಳ್ದು ಬಂದು ಒದೀಲೊ .......... ..."

# ಪಾರ್ಕ ಫುಲ್ ಅಫ್ ಲೈಫ್!

✍ಇ.ಆರ್. ರಾಮಚಂದ್ರನ್

ಪಾರ್ಕನಲ್ಲಿ ಹೊಂಗೆ ಮರ ಮತ್ತು ತೆಂಗಿನ ಮರ ಅಕ್ಕಪಕ್ಕದವರು. ಅಲ್ಲಿ ಆಗುತ್ತಿದ್ದ ಆಗು ಹೋಗುಗಳನ್ನು ನೋಡುತ್ತಾ, ಕೇಳುತ್ತಾ ಕಾಲ ಕಳೆಯುತ್ತಿದ್ದರು. ಅವರಿಬ್ಬರಲ್ಲೂ ಸುಮಾರು 50 ವರ್ಷದ ಮೇಲಿನ ಗಾಢ ಸ್ನೇಹ.

ಅವರ ಕೆಳಗೆ ಒಳ್ಳೆ ಕಲ್ ಬೆಂಚುಗಳು. ಎದುರು ಬದುರು. ಯಾರೋ ಪುಣ್ಯಾತ್ಮರು ಹಾಕಿಸಿ ಹೋಗಿದ್ದರು. ಅಲ್ಲಿ ನಡೆಯುವ ಸೀನ್ ಗಳಿಗೆಲ್ಲಾ ಇವರಿಬ್ಬರೇ ಸಾಕ್ಷಿ.

ಆ ಇಬ್ಬರು ಹೆಂಗಸರು ಮಾತಾಡ್ತಾ ಇದ್ರು.

'ನಮ್ಮ ಸುಮಿತ್ರನ ಮದುವೆ ಹೂವೆತ್ತಿದ ಹಾಗೆ ಸುತೂತ್ರವಾಗಿ ನಡೆಯಿತು. ಸಧ್ಯ! ನಾನು ಹೆದರಿದ್ದೆ.'

'ಹಾಗೇನಾಯ್ತು?..ಹೇಳಿ'.

'ಹುಡುಗನ ಸೂಟು ಬೂಟಿಗೆ ಹತ್ತು ಸಾವಿರ, ನಮ್ಮ ಸುಮಿತ್ರನ ಕೊರಳಿಗೆ ಒಳ್ಳೆ ಆಭರಣ ಹಾಕಿ ಅಂತ ಹೇಳಿದ್ದರು ವರನ ಕಡೆಯವರು; ನೆಕ್ಲೆಸ್, ಮಾಂಗಲ್ಯ ಭೀಮಾ ಜ್ಯುವೆಲರ್ಸ್ ಹತ್ರ ಹೋಗಿ ಮಾಡ್ಸಿದ್ದಕ್ಕೆ ಎರಡೂ ಸೇರಿ ಒಂದೂವರೆ ಲಕ್ಷ ಆಯ್ತು. ಮದುವೆಯ ಮೂರೂ ಊಟಕ್ಕೆ ಹೊತ್ತಿಗೆ 200 ಜನ, ಒಟ್ಟು 600 ಜನ ಊಟಕ್ಕೆ 2 ಲಕ್ಷ ಬಿತ್ತು. ದೇವರು ದೊಡ್ಡವನು ಒಟ್ಟು 5 ಲಕ್ಷಕ್ಕೆ ಎಲ್ಲಾ ಮುಗೀತು. ಕಾಪಾಡಿದ್ಯಲ್ಲಪ್ಪಾಂತ ದಿನಾ ಭಗವಂತನ ಫೋಟೋಗೆ ದೀಪ ಹಚ್ತಿದೀನಿ'.

'ನಿಮ್ಮ ಮದುವೆ ಪರವಾಗಿಲ್ಲ ಸುಭದ್ರಮ್ಮ. ನಮ್ಮ ಲಕ್ಷ್ಮಿ ಮದುವೇಗೆ ಹುಡುಗನ ಸೂಟಿಗೇ 20 ಸಾವಿರ ಆಯ್ತು. ಕೆಜಿಎಫ್ 2 ಸ್ಟೈಲ್ದಂತೆ; ನೆಕ್ಲೇಸ್, ಮಾಂಗಲ್ಯ, ತೋಳಬಂದಿ ಸೇರಿ ಮೂರೂವರೆ ಲಕ್ಷ ಬಿತ್ತು. ಕರೆದಿದ್ದು 700 ಜನ, ಬಂದು ಉಂಡು ಹೋದವ್ರು 1200. ಊಟಾನೇ 5 ಲಕ್ಷ ಕೈಕಚ್ಬಿಡ್ತು. ಎಲ್ಲಾ 10 ರ ಮೇಲೆ ಆಯ್ತು..'

ಹೊಂಗೆ ಮರ ; 'ಕೇಳ್ದ್ಯಾ? ಈಕೆ ಹೋದ ವರ್ಷಹೇಳ್ತಾ ಇದ್ರಲ್ಲಾ ಅವರ್ಕಡೇ ಯಾರಿಗೋ ಖಾಯಿಲೆ ಬಂದಿದೇಂತ ಅವರೇ ಅಲ್ವೇ?'

ತೆಂಗಿನ ಮರ: 'ಎಕ್ಸಾಕ್ಟಲಿ ಅವರೇ! ನಿಮ್ಮ ಚಿಕ್ಕಪ್ಪನಿಗೆ ಹಾರ್ಟು 4 ಕಡೆ ಬ್ಲಾಕ್ ಆಗಿದೆಯಾ? ಅಯ್ಯೋ ಪಾಪ! ನಮ್ಮ ಸೋದರ ಮಾವಂಗೆ 6 ಕಡೆ ಬ್ಲಾಕ್ ಆಗಿತ್ತು! ನಿನ್ನ ಚಿಕ್ಕಮ್ಮನಿಗೆ ಗಾಲ್ ಸ್ಟೋನ್ಸ್ ಆ? ಪಾಪ! ನಮ್ಮ ಸೋದರ ಅತ್ತೆಗೆ ಗಾಲ್ ಸ್ಟೋನ್ಸ್ ಅಂಡ್ ಕಿಡ್ನಿ ಸ್ಟೋನ್ಸ್ ಎರಡೂ ಬಂದಿದೆ..! ಹೀಗೇ ಹೇಳ್ತಾ ಹೋದ್ಲಲ್ಲಾ ....ಎಲ್ಲಾದಕ್ಕೂ ಕಾಂಪಿಟಿಷನ್!'

ಹೊಂಗೆ ಮರ; 'ಹಾ! ಈಗ ಪೂರ್ತಿ ಜ್ಞಾಪಕ ಬಂತು! ಆ ಮದುವೇದೂ ಇಲ್ಲೇ ಕೆಳಗಡೆ ಗುಸುಗುಸು ಮಾತುಕಥೆಯಾಯ್ತು.. ಅವಳ ಮಗಳು ಲಕ್ಷ್ಮಿ ಯಾರೋ ಆಫೀಸ್ ಬಾಯ್ ಜೊತೇಗೆ ಓಡಿಹೋದ್ಲಂತೆ. ಕೊನೆಗೆ ಇವರಿಬ್ರೂ ಗಂಡ ಹೆಂಡ್ತಿ ಮದ್ಯ ರಾತ್ರೀಲಿ ಯಾರಿಗೂ ಹೇಳ್ದೆ ಊರಾಚೆ ಇರೋ ದೇವಸ್ಥಾನಕ್ಕೆ ಹೋಗಿ

ಎರಡು ಹಾರ ಹಾಕಿ ಅವ್ರಿಗೆ ಮದುವೆ ಶಾಸ್ತ್ರ ಮಾಡಿ ಬಂದ್ರು! ಗಂಡಿನ ಕಡೇವ್ರು 'ಮದುವೇನ ನಮ್ಮ ಊರಲ್ಲೇ ಮಾಡಿ ಅಂತ ಕೇಳ್ಕೊಂಡ್ರು...ಅದಕ್ಕೇ ಅಲ್ಲೇ ಮಾಡಿದ್ವಿ..'.ಅಂತ ಹೇಳ್ಕೊಂಡು ಎಲ್ಲಾರಿಗೂ ಹತ್ತು ಲಕ್ಷ ಖರ್ಚು ಬಿತ್ತು ಅಂತ ಹೇಳ್ಕೊಂಡು ತಿರುಗಾಡ್ತಾಳೆ!'

ತೆಂಗಿನ ಮರ: ಹ್ಹ ಹ್ಹ.. ನಿನ್ನ ಜ್ಞಾಪಕ ಶಕ್ತಿಗೆ ಒಂದು ಕಾಯಿ ಒಡೀಬೇಕು..'

ಸ್ವಲ್ಪ ಹೊತ್ತಾದ ಮೇಲೆ ಬಿಲ್ಡರ್ಸ್ ಗ್ರೂಪು ಬಂತು.... ಎರಡೂ ಕಲ್ನಲ್ಲಿ ಫುಲ್ ಬೆಂಚ್ ಕೂತ್ರು.

ಬಿಲ್ಡರ್ಸ್: 'ಇವತ್ತು ಎಲ್ಲಾ ಪ್ರಮೋಟರ್ಸ್ ಬಂದಿರೋದು ಒಳ್ಳೆದಾಯ್ತು.. ನಮ್ಮ ನೆಕ್ಸ್ಟ್ ಪ್ರಾಜೆಕ್ಟ್ ಗೋಲ್ಡನ್ ಮಾರ್ವೆಲ್ 30 ಸ್ಟೋರೀಡ್ ಸ್ಕೈ ಸ್ಕ್ರೇಪರ್... ಎಮ್ ಜಿ ರೋಡ್ ಕುಂಬ್ಳೆ ಸರ್ಕಲ್ ಹತ್ರ.. ಹೆಲಿ ಪ್ಯಾಡ್ ಆನ್ ಟಾಪ್.... ಝಾಕುಜ್ಜಿ ಶವರ್, ಆಟೋಮ್ಯಾಟಿಕ್ ಕಾರ್ ಪಾರ್ಕ್, ಟೆನಿಸ್ ಕೋರ್ಟ್, ಸ್ಕ್ವಾಶ್ ಕೋರ್ಟ್.. ವರ್ಟಿಕಲ್ ವೆಜಿಟಬಲ್ ಗಾರ್ಡನ್, ರೋಸ್ ಗಾರ್ಡನ್..'

ಪ್ರೊಮೊಟರ್: 'ವ್ಹಾ.. ವ್ಹಾ..'

ಬಿಲ್ಡರ್ಸ್: 'ಒಂದೊಂದು ಫ್ಲಾಟ್ 5 ಕ್ರೋರ್ಸ್, ಮಟೀರಿಯಲ್ಸ್ ಎಲ್ಲಾ ಇಂಪೋರ್ಟೆಡ್..'

ಪ್ರಮೊಟರ್; 'ಪೇಪರ್ನಲ್ಲಿ ವೆಬ್ಸೈಟ್ನಲ್ಲಿ ಅನೌನ್ಸ್ ಮಾಡ್ಬಿಡಿ'..

ಬಿಲ್ಡರ್ಸ್: ' ವಿ ಆರ್ ರೆಡಿ ಫರ್ ವರ್ಲ್ಡ್ ವೈಡ್ ಅನೌನ್ಸ್ಮೆಂಟ್... ಎಕ್ಸ್ಕ್ಯೂಸ್ ಮಿ.. ಫೋನ್ ಕಾಲ್ ಅಟೆಂಡ್ ಮಾಡಿ ಬರ್ತಿನಿ...ಬೆಳಿಗ್ಗೆಯಿಂದ ಕಾಲ್ಸ್ ಒಂದೇ ಸಮ.... ಯಾರೋ ಮಾರ್ವೆಲ್ ಪ್ರಾಜೆಕ್ಟ್ ಇನ್ಫೋನ ಮಾರ್ಕೆಟ್ನಲ್ಲಿ ಲೀಕ್ ಮಾಡಿದಾರೆ..'

ಪ್ರಮೊಟರ್ಸ್; 'ಕ್ಯಾರಿ ಯಾನ್..ಸರ್'

ಹೊಂಗೆ ಮರ: ' ಈ ಬಿಲ್ಡರ್ ನಿನ್ನೆ ಇಲ್ಲಿಗೆ ಬಂದಿದ್ದಾ ಅಲ್ವ? ಒಂದಿಷ್ಟು ಮೇಸ್ತ್ರಿಗಳು ಇದ್ರು ಜೊತೆಗೆ..'

ತೆಂಗಿನ ಮರ: ' ಇಲ್ಲೇ ಕೆಳಗೆ ಕೂತಿದ್ರಲ್ಲ.. ಇವನ ಹಳೇ ಪ್ರಾಜೆಕ್ಟ್ ಮುಗಿದು ಒಂದು ವರ್ಷ ಆಯ್ತು.. 3 ಫ್ಲೋರ್ ಅಪಾರ್ಟಮೆಂಟ್. 30 ಫ್ಲಾಟ್. ಅದು ಇನ್ನೂ ಓನರ್ಸ್‌ಗೆ ಹ್ಯಾಂಡ್ ಓವರ್ ಮಾಡಿಲ್ಲಾ.. ಬಾತ್ ರೂಮ್, ಕಿಚನ್ ಸಿಂಕಲ್ಲಿ ನೀರು ಲೀಕು ನಿಲ್ತಾ ಇಲ್ಲ.. ಮೂರ್ನೇ ಮಾಡೀಗೆ ತಾರಸಿಯಿಂದ ಮಳೆ ನೀರು ಸುರೀತಿದೆ. ನಿನ್ನೆ ಇವನ ಮಾರುತಿ ಓಮ್ನಿ ಗಾಡೀಲಿ ಒಂದೈದಾರು ಪ್ಲಂಬರಸ್ನ ಇಲ್ಲಿಗೆ ಕರಕೊಂಡು ಬಂದು ಲೀಕೇಜು ಹೇಗಾದರೂ ಮಾಡಿ ನಿಲ್ಸಿ ಅಂತ ಗೋಗರಿತಾ ಇದ್ದ! ಇಲ್ಲಿ ಮೀಟಿಂಗ್ ಇದೆ ಅಂತ ಗೊತ್ತಾಗಿ ಆ ಪ್ರಾಜಕ್ಟ್ ಮಾಡಿದ ಮೇಸ್ತ್ರಿಗಳು ಹಳೇ ಬಾಕಿ ಕೊಡೀಂತ ಇಲ್ಲಿ ಬಂದು ಅವನ ತಲೇ ಮೇಲೆ ಕೂತಿದ್ದರು..! ಅವರೇ ಇರ್ಬೇಕು ಫೋನಲ್ಲಿ..'

ಬಿಲ್ಡರ್ಸ್ (ಫೋನ್ನಲ್ಲಿ) ; 'ನನಗೆ ಸ್ವಲ್ಪ ಟೈಮ್ ಕೊಡಿ.. ನಾನೀಗ ಇಲ್ಲಿ ಇಲ್ಲ..ಮೈಸೂರಿಗೆ ಹೋಗ್ತಾ ಇದೀನಿ..ಆನ್ ದ ವೇ.. ನೆಕ್ಸ್ಟ್ ವೀಕ್ ಮೀಟ್ ಮಾಡೋಣ'.......ಬೈ..'

(ಪ್ರಮೋಟರ್‍ಗೆ) 'ಸಾರಿ... ನನಗೆ ಇನ್ನೊಂದು ಹೊಸ ಪ್ರಾಜೆಕ್ಟ್ ಶುರುಮಾಡೀಂತ ಪ್ರೆಶರ್ ಹಾಕ್ತಾ ಇದಾರೆ ಇನ್ನೊಂದು ಗ್ರೂಪು.. ಇನ್ನೊಂದು ಟು ವೀಕ್ಸ್ ಆದಮೇಲೆ ಗೋಲ್ಡನ್ ಮಾರ್ವೆಲ್‍ದು ಸ್ಟಾರ್ಟ ಕಲೆಕ್ಟಿಂಗ್ ಬುಕಿಂಗ್ ಅಡ್ವಾನ್ಸ್ ಮನಿ...'

ಹೊಂಗೆ ಮರ: 'ನೊಡಿದ್ಯಾ ಇವನನ್ನ..ಟೈಮ್ ಕೊಡಿ..ಟೈಮ್ ಇಲ್ಲ..ಅಂತ ಹೇಗೆ ಅಡ್ಜಸ್ಟ್ ಮಾಡ್ತಿದಾನೆ! ಕೂಗು ಕೇಕೆ ಹಾಕೋ ಶಬ್ದ ಬಂತಲ್ಲಾ... ಹೋ ಮಕ್ಕಳು ಬಂದ್ರಾ..!'

ತೆಂಗಿನ ಮರ : 'ಸಂಜೆ 4 ಗಂಟೆ ಆಯಿತಲ್ಲಾ.... ಮಕ್ಕಳು ಬಂದದ್ದು ನೋಡಿ ನಮ್ಮ ಬಣ್ಣ ಬಣ್ಣ ದ ಫ್ಲಾಕ್ಸ್ ಹೂವಿಗೆಲ್ಲಾ ಸಂತೋಷ.. ಗಾಳಿಯಿಂದ ತಲೆತೂಗುತ್ತಿವೆ ನೋಡು... ಹೂವುಗಳನ್ನು ನೋಡಿ ಮಕ್ಕಳು ಕುಣಿದಾಡುತ್ತಿವೆ.. ಅವುಗಳು ಕೂಗಿಕೊಂಡು ಲಾನ್ಗೆ ಓಡಿ ಬರುವುದನ್ನು ನೋಡಿ ನಮ್ಮ ಫ್ಲಾಕ್ಸ್ ಖುಷಿಯಾಗಿ ಗಾಳೀಲಿ ಕುಣೀತಿದೆ...ಫೌಂಟನ್ ಬೇರೆ ಹಾಕಿದಾರೆ.. ಇದೊಂದು ಕಾರಣಕ್ಕೆ ನನಗೆ ಪಾರ್ಕಲ್ಲಿ ಇರೋದು ಚಂದ ಅನ್ಸುತ್ತೆ. ಎಷ್ಟೋ ಸರ್ತಿ ಅಲ್ಲಿ ಇಲ್ಲಿ ಸುತ್ತಬೇಕೂಂತ ಅನ್ಸುತ್ತೆ. ಆದರೆ ಇವರಿಬ್ಬರ ಕುಣಿದಾಟ ನೋಡಿದ್ರೆ ನಮಗೂ ವಯಸ್ಸು ಆಗೇ ಇಲ್ಲ.. ನಾವೂ ಹುಡುಗ್ರು ಅಂತ ಅನ್ಸುತ್ತೆ..'

ಹೊಂಗೆ ಮರ: 'ನಿಜ. ನಮಗೂ ಕುಣಿಯೋಣ ಅಂತ ಅನ್ಸುತ್ತೆ..... ಅಲ್ನೋಡು... ಯಾರೋ ಪಾಪ.. ಭಿಕಾರಿ..ಒಬ್ನೇ ಬರ್ತಾ ಇದಾನೆ..'

ತೆಂಗಿನ ಮರ: 'ಸರಿಯಾಗಿ ನೋಡು.. ಗುರ್ತು ಹಿಡೀತಿಯ.. ಫೇಮಸ್ ಫಿಲಾನ್‍ತ್ರೊಪಿಸ್ಟ್..ಮಾಡರ್ನ್ ದಾನ ಶೂರ ಕರ್ಣ... ವಿದೇಶಕ್ಕೆ ಹೋಗಿ ಚೆನ್ನಾಗಿ ಓದಿ, ದೊಡ್ಡ ಹುದ್ದೆಯಲ್ಲಿ ಕೆಲಸ ಮಾಡಿ, ಹಣ ಸಂಪಾದನೆ ಮಾಡಿ, ಇಲ್ಲಿ ಸ್ಕೂಲು, ಆಸ್ಪತ್ರೆ ಕಟ್ಟಿಸಿದ ಪುಣ್ಯಾತ್ಮ. ದಾನ ಮಾಡುವುದು, ಕೊಡುವುದು ಇದ್ದಾಗಲೇ ಮಾಡಬೇಕೆಂದು ಅವರ ಎಲ್ಲಾ ಸ್ವತ್ತುಗಳನ್ನು ದಾನ ಮಾಡಿ, ಸ್ವಂತ ಖರ್ಚಿಗೆ ಬಹಳ ಕಡಿಮೆ ಇಟ್ಟುಕೊಂಡು ಓಡಾಡ್ತಾ ಇರ್ತಾರೆ'.

ಹೊಂಗೆ ಮರ: 'ಯಾರೂಂತ ಈಗ ಗೊತ್ತಾಯ್ತು.. ಪ್ರತಿ ಸ್ವಾತಂತ್ರ ದಿನಾಚರಣೆಯ ಆಗಸ್ಟ್ 15 ಕ್ಕೆ ಪಾರ್ಕಿಗೆ ಬಂದು ದೇಶದ ಹುಟ್ಟುಹಬ್ಬ ಎಂದು ಎಲ್ಲರಿಗೂ ಸಿಹಿ ಹಂಚಿ ಹೋಗ್ತಾರಲ್ಲಾ ಅವರೆ! ನಮ್ಮ ಪಾರ್ಕನಲ್ಲಿ ಮೆಡಿಟೇಷನ್ ಸೆಂಟರ್ ಇವರು ಡೊನೇಟ್ ಮಾಡ್ತಾರಂತೆ. ಇವರಿಗೆ ನಮ್ಮ ಪಾರ್ಕಿನ ನಮೋ ನಮೋ'.

■

**ಧನವಂತ ಮನೆ ಮಾಡಿದ ಒಂಭತ್ತು ಬೆಡ್ ರೂಮು**
**ಘನವಾದ ಪಲ್ಲಂಗ ರೂಮು ರೂಮಿನಲಿ**
**ಜನ ನೋಡಿ ಮೆಚ್ಚಿದರು ತಲೆದೂಗಿ ನಡೆದರು**
**ಮಾನ್ಯ ಮಲಗಿದ ಮೂಲೆಯಲ್ಲಿ ವಿಧಿ ನಕ್ಕಿತೋ ತಿಂಮ – ಬೀಚಿ**

# “ಮೂಕನ್ಯಾಸ!”

ಡಾ. ಗಣೇಶ ಎಸ್. ಹೆಗಡೆ

ಶಿಕ್ಷಣ ಕ್ಷೇತ್ರಕ್ಕೆ ‘ಕೋವಿಡ್’ ಪರ್ವಕಾಲವು ಕಲಿಸಿದ ಒಂದು ವಿಶೇಷ ಪಾಠವೆಂದರೆ– ‘ಆನ್‌ಲೈನ್–ಶಿಕ್ಷಣ’. ಬಹುತೇಕ ಶಿಕ್ಷಕರೆಲ್ಲ ಅಂತೂ ಎದ್ದೂ ಬಿದ್ದೂ ಈ ತಾಂತ್ರಿಕ ಕಲೆಯನ್ನು ಕರತಲಾಮಲಕ ಮಾಡಿಕೊಂಡಿದ್ದಾಗಿತ್ತು. ಆದರೂ ಇದನ್ನು ಕಡೆವರೆಗೂ ತಲೆಗೆ ಹಾಕಿಕೊಳ್ಳದ ಕೆಲಮಂದಿಯೂ ಇದ್ದಾರೆನ್ನಿ! ಕೊರೋನೋತ್ತರದ ಕಾಲದಲ್ಲಿ ತರಗತಿಗಳೆಲ್ಲ ಮತ್ತೆ ಮುಂಚಿನ ಆಫ್‌ಲೈನ್ ದಾರಿಗೆ ಬಂದವು (ಯಾವುದು ‘ಆನ್‌ಲೈನ್’, ಯಾವುದು ‘ಆಫ್‌ಲೈನ್’ ತರಗತಿ ಎಂಬುದೂ ಯೋಚಿಸಬೇಕಾದ್ದೆ!). ಆದರೂ ಕಲಿತ ವಿದ್ಯೆಯನ್ನು ಮರೆಯದಂತೆ ಅಗತ್ಯಬಿದ್ದಾಗ ಆಗಾಗ ಬಳಸುತ್ತಿರುವುದು ಸೂಕ್ತವೆಂದು ಬಗೆದು, ರಜಾದಿನಗಳ ಮುಕ್ತಾಯದ ಸಮಯದಲ್ಲಿ ಕಾಲೇಜಿನ ಅಂತಿಮಸೆಮೆಸ್ಟರಿನ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಯನ್ನು ತೆಗೆದುಕೊಳ್ಳಲು ಉದ್ಯುಕ್ತನಾದೆ.

ತುಂಬಾ ದಿನಗಳನಂತರದ ತರಗತಿಯಾದ್ದರಿಂದ ಹೆಚ್ಚು ಉತ್ಸಾಹದಲ್ಲಿದ್ದೆ. ವಿದ್ಯಾರ್ಥಿಗಳೊಂದಿಗೆ ಬಹಳಷ್ಟು ಸಂಗತಿಗಳನ್ನು ಹಂಚಿಕೊಳ್ಳಬೇಕು, ಪಾಠದ ಅನಂತರ ವಿದ್ಯಾರ್ಥಿಗಳ ಮಾತುಗಳನ್ನಾಲಿಸಬೇಕು, ವಿದ್ಯಾರ್ಥಿಗಳು ರಜೆಯಲ್ಲಿ ಹೊಸ ಕಲಿಕೆಯನ್ನೇನಾದರೂ ಮಾಡಿದ್ದಾರೆಯೆ? ಹೀಗೆಯೆ....

ಈ ‘ಆನ್‌ಲೈನ್’(ಜಾಲಸಂಪರ್ಕ) ತರಗತಿಗೆ ಬಹಳ ದಿನಗಳನಂತರ ಮತ್ತೆ ಮರಳಿದ್ದರಿಂದ, ಪ್ರಾರಂಭದಲ್ಲಿ ಹೊಸ ಪೂಜಾರಿಯ ಪೂಜೆಯಂತೆ ಆಯ್ತು (ಗಂಟೆ ತೂಗುವಾಗ ಆರತಿ ನಿಲ್ಲುವುದು, ಆರತಿ ಎತ್ತುವಾಗ ಗಂಟೆ ನಿಲ್ಲುವಂತೆ)! ಒಂದಿಷ್ಟು ತಾಂತ್ರಿಕ ತೊಂದರೆಗಳನ್ನು ಸರಿಪಡಿಸಿಕೊಂಡು ಅಂತೂ ಪಾಠ ಪ್ರಾರಂಭಿಸುವಾಗಲೆ 10–15 ನಿಮಿಷಗಳ ಕಾಲ ಕಳೆದಿತ್ತು! ಗಂಟಲು ಸರಿಪಡಿಸಿ ಧ್ವನಿ–ಪರೀಕ್ಷೆಮಾಡಿಕೊಂಡು ಜಾಲಪಾಠ– ‘ಆನ್–ಲೈನ್’ ಅರ್ಥಾತ್ ತಂತಿಮೇಲಿನ ನಡಿಗೆಯನ್ನು ಪ್ರಾರಂಭಿಸಿದೆ! ಆರಂಭದಲ್ಲಿ ‘ಪಠ್ಯ’(ಸಿಲಬಸ್), ನೂತನ ಸೆಮೆಸ್ಟರಿನ ‘ಪಾಠದ ಯೋಜನೆ’ಗಳ ಕುರಿತು ವಿಸ್ತಾರವಾಗಿ ಹೇಳುತ್ತ ಸಾಗಿದೆ. ಕೆಲಸಮಯದ ಅನಂತರ ಅನುಮಾನದಿಂದ “ಆಮ್ ಐ ಆಡಿಬಲ್?” ಎಂದು ಕ್ಷೀಣ ಧ್ವನಿಯಲ್ಲಿ ಪ್ರಶ್ನಿಸಿದೆ. ಸಾಮಾನ್ಯವಾಗಿ ಬೇರೆ ಯಾವುದಕ್ಕಲ್ಲದಿದ್ದರೂ ಈ ಪ್ರಶ್ನೆಗೆ ‘.....ಯೆಸ್ ಸಾರ್’ ಎಂದು ತಕ್ಷಣ ಉಲಿಯುತ್ತಿದ್ದ ಕಾಲೇಜಿನ ನಾಲ್ಕಾರು ಕಲಿವ ವಿದ್ಯಾರ್ಥಿಗಳು(ಕ.ವಿ.), ನನ್ನ ಮರು ಪ್ರಶ್ನೆಗೂ ಉತ್ತರಿಸದಿದ್ದಾಗ ಚಕಿತನಾಗಿ ಹಂಚಿಕೊಂಡಿದ್ದ(ಸ್ಕ್ರೀನ್ ಶೇರ್ ಆಗಿದ್ದ) ಪಿಪಿಟಿ ಪರದೆಯನ್ನುಸರಿಸಿ ನನ್ನ ‘ಮೈಕ್ರೋಸಾಫ್ಟ್ ಟೀಮ್ಸ್ ವಿಂಡೊ’(ಮೈ.ಟೀ. ಕಿಟಕಿ)ಗೆ ಬಂದೆ. ತಡವರಿಸಿಕೊಂಡು ನನ್ನ ಮೈಟೀ ಕಿಟಕಿಯ ಸಂದುಗೊಂದುಗಳನ್ನೆಲ್ಲಾ ಪರಿಶೀಲಿಸಿದಾಗ ಮೂಲೆಯಲ್ಲಿನ ಮೈಕಿನ ಚಿಹ್ನೆಯ ಮೇಲೆ ಅಡ್ಡಗೆರೆಯಿತ್ತು! ಅರೆ ಇದೇನಾಯ್ತೆಂದು ಅದನ್ನೊತ್ತಿ (ಅನ್‌ಮ್ಯೂಟ್‌ಮಾಡಿ) ಧ್ವನಿಯನ್ನು ಮರಳಿ ಪಡೆದೆ. “ಆಮ್ ಐ ಆಡಿಬಲ್, ನೌ” ಎಂದು ಕೊಂಚ ಜೋರಾಗಿಯೇ ಕೂಗಿದೆ, ‘........ಯೆಸ್ ಸಾರ್’ ಎಂದು ನಾಲ್ಕಾರು ಧ್ವನಿಗಳು ತಕ್ಷಣ ಪ್ರತಿಧ್ವನಿಸಿದವು. ‘ಇಲ್ಲಿಯವರೆಗಿನದನ್ನು ಮತ್ತೆ ಹೇಳಲೇ?’ ಎಂದೆ, ‘ಏನೂ ತೊಂದರೆಯಿಲ್ಲ ಸಾರ್, ಮುಂದೆ ಹೇಳಿ’ ಎಂದರು ನಮ್ಮ ಜಾಣ ‘ಕವಿ’(ಕಲಿವ ವಿದ್ಯಾರ್ಥಿ)ಗಳು!

ಸರಿ ಹಾಗಾದರೆ, ಪಾಠ ಪ್ರವೇಶ ಮಾಡೋಣವೆಂದು ಹೊರಟೆ. ಆದರೆ ಅದಕ್ಕೂ ಮೊದಲು ನಮ್ಮ 'ಕವಿ'ಗಳಿಗೆ ಕೊಂಚ ಕಲಿಕಾ ಪ್ರೇರಣೆ ನೀಡಿ, ಈ ಜಾಲಪಾಠಗಳು ಇಂದಿಗೂ ಹೇಗೆ ಪ್ರಸ್ತುತ, ಹಾಗೂ ಅನೇಕ ಬಾಧಕಗಳನ್ನು ಮೀರಿ ಅವನ್ನು ಸಾಧನೆಗೆ ಸಾಧಕವನ್ನಾಗಿಸುವ ಬಗೆಗಳ ಕುರಿತು ಹೇಳೋಣವೆಂದು ಹೊರಟೆ.

ಕೋವಿಡ್ ಜಮಾನಾದಲ್ಲಿ ಪ್ರವರ್ಧಮಾನಕ್ಕೆ ಬಂದಿದ್ದ– ಜಾಲಸಂಪರ್ಕಗಳ 'ಕಾಲ'ನ (ಅಮೂಲ್ಯ ಸಮಯ ಕದಿಯುವ) ಸಂಕೀರ್ಣಜಾಲದಲ್ಲಿ ಬೆಪ್ಪಾಗಿ ಬಿದ್ದು, ನುಂಗಿ ನೊಣೆದು ಹೋಗುವ ಬದಲು, ಜಾಲಸಂಪರ್ಕದ ಜಾಲಗಳನ್ನೆ ಜೋಕಾಲಿಯನ್ನಾಗಿಸಿಕೊಂಡು ಜಾಣರಾಗುವ ಕುರಿತು ಮಾತನಾಡಿದೆ. 'ಜಾಲನ್ಯಾಸ'ಗಳ ಕುರಿತು ಜಾಲನ್ಯಾಸದಲ್ಲೇ ಹೇಳಿದೆ. ಶಂಖ ಊದುವ ಬಗೆಯನ್ನು ಶಂಖಊದಿಯೆ ತಿಳಿಸಿದಂತೆ(ಪ್ರಾಯೋಗಿಕ ಜಾಲನ್ಯಾಸ)! ಜಾಲಕಲಿಕಾ ಸವಾಲುಗಳನ್ನು ಪ್ರಸ್ತಾಪಿಸಿ, ಪರಿಹಾರವಾಗಿ ಕಲಿಕೆಯಲ್ಲಿ ಸ್ವ–ಪ್ರೇರಣೆಯ ಮಹತ್ತ್ವ, ಸ್ವ–ಮೌಲ್ಯಮಾಪನ, ಸ್ವ–ಅಧ್ಯಯನ ಕೈಗೊಳ್ಳಬೇಕಾದುದು ಅತ್ಯಗತ್ಯ ಎಂದು ತಿಳಿಸುವ ಪ್ರಯತ್ನ ನಡೆಸಿದ್ದೆ. ಈ ಎಲ್ಲಾ ಸಂಗತಿಗಳು ನಮ್ಮ ಕಾಲೇಜಿನ 'ಕವಿ'ಗಳಿಗೆ ಎಂದಿನ ನೇರ ತರಗತಿಯ ಕಲಿಕೆಯಲ್ಲೂ ಅಷ್ಟೇ ಪ್ರಸ್ತುತವಾಗಿವೆಯೆಂದೂ ಹೇಳುವುದಾಯ್ತು.

ನೇರತರಗತಿಗಳಲ್ಲೇ ನಮ್ಮ 'ಕವಿ'ಗಳ ಗಮನ ಪಾಠದಲ್ಲಿರಿಸಲು ಕೊಂಚ ಸರ್ಕಸ್ ಮಾಡಬೇಕಾದ ನಮಗೆ, ಲಂಗು ಲಗಾಮಿರದ ಈ ಜಾಲನ್ಯಾಸದಲ್ಲಿ ಮೈಮರೆತರೆ ಕಷ್ಟವೆಂದು ನನಗೆ ಬಹಳ ಸಮಯದ ಅನಂತರ ಎಚ್ಚರವಾಯ್ತು. ಎಲ್ಲವೂ ಸ್ತಬ್ಧವಾದಂತಿದೆಯಲ್ಲಾ ಎಂದು ಮತ್ತೊಮ್ಮೆ ಜಾಲನ್ಯಾಸದ ಪಲ್ಲವಿಯನ್ನು– "ಆಮ್ ಐ ಆಡಿಬಲ್, ನೌ........?" ಉಸುರಿದೆ. ನನ್ನ ಪಲ್ಲವಿ, ಅನುಪಲ್ಲವಿಗೂ ಪ್ರತ್ಯುತ್ತರ ಬಾರದಿದ್ದಾಗ ಮತ್ತೊಮ್ಮೆ ಅನುಮಾನದಿಂದ ನನ್ನ 'ಮೈಟೀ ಕಿಟಕಿ' ತೆರೆದು ನೋಡಿ ಚಕಿತನಾದೆ! ಎಲ್ಲಾ ತೊಂಬತ್ತೆರಡು 'ಕವಿ'ಗಳೂ ತಮ್ಮ ತಮ್ಮ ಬಾಯಿ ಮತ್ತು ಕಣ್ಣುಗಳನ್ನು(ಆಡಿಯೊ, ವೀಡಿಯೊ ಮ್ಯೂಟ್) ಮುಚ್ಚಿಕೊಂಡೇ ಕೂತಿದ್ದರು(ಇಲ್ಲಿ 'ಕವಿ'ಯನ್ನು 'ಕಪಿ'ಯಾಗಿ ಭಾವಿಸಿಕೊಂಡರೆ ತಪ್ಪು ನನ್ನದಲ್ಲ). ಕಿವಿಯನ್ನು ಮುಚ್ಚಿಕೊಳ್ಳುವ ಕಷ್ಟವಂತೂ ಅವರಿಗಿರಲಿಲ್ಲ, ಏಕೆಂದರೆ ನನ್ನ ಮೈಟೀ ಕಿಟಕಿಯ ಧ್ವನಿ ಮತ್ತೆ ಬಂದ್‌ಆಗಿತ್ತು! ಮೂಕಗೊಂಡಿದ್ದ(ಮ್ಯೂಟ್) ನನ್ನ ನಿರರ್ಗಳ ಜಾಲನ್ಯಾಸವನ್ನು ತಡೆದು ಎಚ್ಚರಿಸುವ ಗೋಜಿಗೆ ಯಾರೂ ಹೋಗಿರಲಿಲ್ಲ!

ಎಂದೂ ಹೀಗಾಗಿರಲಿಲ್ಲ, ಹೀಗೇಕಾಗ್ತಿದೆ? 'ಮೈಟೀ ಕಿಟಕಿ'ಯ ಜಾಣ್ಮೆಗೇನು ಮಂಕು ಬಡಿಯಿತೇ?! ಎಂದು ಮತ್ತೊಮ್ಮೆ ಸಾವರಿಸಿಕೊಂಡು, ಮೈಕಿನ(ಆಡಿಯೊ) ಅಡ್ಡಗೆರೆಯನ್ನು ನಿವಾರಿಸಿಕೊಂಡು ಮತ್ತೆ ಪ್ರಾರಂಭಿಸಿದೆ. ಕೆಲ ಕಾಲದಲ್ಲೇ 'ಕವಿ'ಯೊಬ್ಬಳು 'ಸಾರ್ ನೀವು ಮ್ಯೂ..ಟಾಗಿದಿರಾ...' ಎಂದು ಉಲಿ(ಎಚ್ಚರಿಸಿ)ದಳು! ಇದು ಮತ್ತೆರಡುಬಾರಿ ಪುನರಾವರ್ತನೆಯಾದಾಗ, ಕೊಂಚ ಕೋಪದಿಂದಲೆ, ನನಗೂ ಮೈಕಿಗೂ ನಡುವೆ ಇದೊಳ್ಳೆ ಲಕ್ಷ್ಮಣರೇಖೆ ಬೀಳ್ತಿದೆಯಲ್ಲ! ಎಂದು ಮನದಲ್ಲೆ ದೂಷಿಸುತ್ತಾ ಚಿಂತಿತನಾದೆ. ಎನಾಗ್ತಿದೆ ನೋಡಿಯೇ ಬಿಡೋಣವೆಂದು ಮತ್ತೆ ಮೈಕನ್ನು ಸರಿಪಡಿಸಿ ಮೂಕಸಾಕ್ಷಿಯಾಗಿ ನೋಡುತ್ತಾ ಕೂತೆ, ತಕ್ಷಣವೇ ಅದಕ್ಕೆ ಮತ್ತೆ ಅಡ್ಡಗೆರೆ ಬಿತ್ತು! ಜೊತೆಗೆ ನನ್ನ ಮೈಟೀ ಕಿಟಕಿಯಮೇಲೆ ಬಿತ್ತರಗೊಂಡ ಕೆಂಪು ಸೂಚನೆ: "ನಿಮ್ಮ ಸಂಸ್ಥೆಯಲ್ಲಿನ ಯಾರೋ ಒಬ್ಬರು ನಿಮ್ಮ ಮೈಕನ್ನು ಮೂಕಗೊಳಿಸಿದ್ದಾರೆ" ನೋಡಿ ಮೂಕವಿಸ್ಮಿತನಾದೆ! ಅಲ್ಲಿಯವರೆಗೆ ನಾನು ಕೂಡಲೆ

ಪವರ್‌ಪಾಂಯಿಟ್‌ನ ಪರದೆಗೆ ತೆರಳಿಬಿಡುತ್ತಿದ್ದರಿಂದ ಕೆಲಕಾಲವಷ್ಟೇ ಬಿತ್ತರಗೊಳ್ಳುವ ಈ ಮೂಕ-ಸಂದೇಶ ನನ್ನ ಗಮನಕ್ಕೆ ಬಂದಿರಲೇಇಲ್ಲ. ಆಗ ಎಲ್ಲವೂ ಸ್ಪಷ್ಟವಾಯ್ತು- ಇದು ತಾಂತ್ರಿಕ ಅಡಚಣೆಯಲ್ಲ, ಬದಲಿಗೆ ಅಡಚಣೆಯ-ತಂತ್ರ, ನಮ್ಮಲ್ಲೇ ಇರುವ 'ಕವಿ'ಸೋಗಿನ ಕಪಿವರ್ತನೆ ಎಂದು! ನನ್ನ 'ಮೈಟೀ ಕಿಟಕಿಯ'ಲ್ಲಿನ ಮೀಟಿಂಗ್- ನಿಯಂತ್ರಣಗಳನ್ನು ಮೊದಲಿಗೇ ನಿರ್ಧರಿಸಿ ಆಯ್ಕೆಮಾಡಿ ಉಳಿಸಿಡಲು ಮರೆತಿರುವುದೆ ಈ ಅವಾಂತರಕ್ಕೆ ದಾರಿಮಾಡಿತೆಂದು ತಿಳಿಯಿತು. ಕೂಡಲೆ ನಿಯಂತ್ರಣಗಳ ಆಯ್ಕೆಗಳನ್ನು ಬದಲಿಸಿ ಸರಿಪಡಿಸಿಕೊಂಡೆ.

ಹಾಗೆ ನೋಡಿದರೆ ಕಪಿಯ ಸಹಜ, ಚಂಚಲ ವರ್ತನೆಯನ್ನು ನಮ್ಮ ಈ ಅತಿ ಬುದ್ಧಿವಂತ 'ಕವಿ'ಗಳಿಗೆ ಹೋಲಿಸುವುದು ಆ ಮುಗ್ಧ ಮೂಗಪ್ರಾಣಿಗೆ ಮಾಡಿದ ಅವಮಾನದಂತೆ! ಈ ಘಟನೆಯಿಂದ ಒಮ್ಮೆ ಅಪಾರವಾದ ಸಿಟ್ಟು ಬಂದರೂ ಸಾವರಿಸಿಕೊಂಡೆ. ಸಿಟ್ಟು ಅಂದರೂ ಹಾಗೇ ಅಲ್ಲವೆ ಅದು ಅಸಹಾಯಕತೆಯ ತೀವ್ರ ಅಭಿವ್ಯಕ್ತಿ- ಮೂಕವೇದನೆ! ಬೀಚಿಯವರು ಹೇಳಿದ್ದಾರಲ್ಲಾ "ಹೆಂಡತಿಮೇಲೆ ಸಿಟ್ಟು ಬಂದರೆ, ಏನು ಮಾಡಬೇಕು? ಅಂದರೆ, ಬಾಯಿಮುಚ್ಕೊಂಡು ಬಿದ್ದಿರು ಅನ್ನಬೇಕು, ಹೆಂಡ್ತಿನಲ್ಲ......... ಸಿಟ್ಟನ್ನ!" ಯಾರೋ ಒಬ್ಬಾತನ ಅನುಚಿತವರ್ತನೆಯಿಂದ ತುಂಬಾ ಬೇಸರವಾದರೂ, ತಹಬಂದಿಗೆ ಬಂದು ಉಳಿದವರ ಹಿತದೃಷ್ಟಿಯಿಂದ ಪಾಠ ಮುಂದುವರಿಸಿ ಮುಗಿಸಿದೆ.

ಆದರೂ, ನಮ್ಮ ಯುವ 'ಕವಿ'ಗಳ ಇಂಥಹ ವರ್ತನೆ ಆಶ್ಚರ್ಯವನ್ನುಂಟು ಮಾಡಿತು. ಜಾಲನ್ಯಾಸಗಳಲ್ಲಿ ಅಧ್ಯಾಪಕರ ಬೋಧನಾ ತನ್ಮಯತೆಯಿಂದಾಗುವ ಮರೆವಿನ ಪ್ರಮಾದವನ್ನೆ ಬಳಸಿಕೊಂಡು ಅವಮಾನಿಸುವಂತಹ (ಕೋವಿಡ್ ಕಾಲದಲ್ಲಿ ಬಿತ್ತರವಾಗುತ್ತಿದ್ದ) ಅಂತರ್ಜಾಲದಲ್ಲಿನ ಅನೇಕ ವೀಡಿಯೊಗಳು ಇವರಿಗೆ ಕುಚೇಷ್ಟೆಯ ಪ್ರೇರಣೆ ನೀಡುತ್ತಿರಬಹುದೇ?! ಎದುರಿಗೆ ಬಂದು ಮಾತನಾಡಬಲ್ಲ ಸ್ನೇಹಪರತೆಯನ್ನು ನಮ್ಮ 'ಕವಿ'ಗಳೊಂದಿಗೆ ಯಾವಾಗಲೂ ನೀಡಿದ್ದಾಗಿಯೂ, ಹೀಗೇಕಾಯ್ತು? ನನ್ನನ್ನು ಮೂಕಗೊಳಿಸಿ ಮುದಪಡೆದ ಆ ಮೂಕ(ಅಧಿಕ)ಪ್ರಸಂಗಿ ಯಾರೆಂದು ಪತ್ತೆಹಚ್ಚಿ ಆತನ/ಆಕೆಯ ಬಾಯಿಬಿಡಿಸಲೇ?..... ಬಗ್ಗಡದಂತಾಗಿದ್ದ ಮನಸ್ಸು ಚಿಂತೆಹತ್ತಿಸಿ ಕಾಡಿಸಿತು, ಆದರೆ ಕೆಲ ಕಾಲದಲ್ಲೆ ತಿಳಿಯಾಗಲು; 'ಮಾನವರ ವರ್ತನಾವೈವಿಧ್ಯಗಳ ವ್ಯರ್ಥವಿಶ್ಲೇಷಣೆಗೆ ತೊಡಗದಿರು' ಎಂಬ ಗುರುವಾಕ್ಯದ ಆಸರೆ ದೊರೆಯಿತು! 'ಶಕ್ತಿ ಸಂರಕ್ಷಣಾ ನಿಯಮ'ದಂತೆ, ನಮ್ಮ ಯುವ 'ಕವಿ'ಯ ಅವಿವೇಕತನದಿಂದ ನನ್ನಲ್ಲಿ ಹುಟ್ಟಿದ ಸಿಟ್ಟಿನ ಶಕ್ತಿಯನ್ನು ವಿವೇಕ ಜಾಗೃತಿಯ ಮೂಲಕ ಆಲೋಚನೆಗೆ, ಹೊಸ ಚಿಂತನೆಗೆ ಬಳಸಿಕೊಳ್ಳುವುದೇ ಜಾಣತನವೆಂದರಿತೆ. ಪೋಲೀಸರ ಎದುರಿನಲ್ಲಿ ನಿಯಂತ್ರಣದಲ್ಲಿರುವವರೆಲ್ಲ ಸಂಭಾವಿತರೆಂಬ ಗ್ಯಾರಂಟಿಯಿಲ್ಲ. ಯಾರ ಕಣ್ಗಾವಲು ಇಲ್ಲದಿರುವಾಗಲೂ ಸ್ವ-ನಿಯಂತ್ರಣದಲ್ಲಿ ಇರುವ ವ್ಯಕ್ತಿಯೇ ನಿಜವಾದ ಸಂಭಾವಿತ. ನೇರತರಗತಿಯಲ್ಲಿ ಸಾಧ್ಯವಿರದ, ಆದರೆ ಈ ಜಾಲಪಾಠಗಳಲ್ಲಿ ದೊರೆಯುವ ಖಾಸಗಿತನವು ಕೆಲವರ ಜುಟ್ಟನ್ನು ಸಡಿಲಮಾಡಿಬಿಡುತ್ತದೆ, ಸ್ವ-ನಿಯಂತ್ರಣವಿಲ್ಲದಿ- ರುವಾತನಿಂದ ಕಲಿಕೆ ಸಾಧ್ಯವೇ? ಎಂಬ ಪ್ರಶ್ನೆ ಮೂಡಿತು!

ಹಾಗೆನೋಡಿದರೆ, ಪ್ರಾಯಕ್ಕೆ ತಕ್ಕ ಅಭಿಪ್ರಾಯ ಸಹಜವೆನ್ನುವಂತೆ ವಿದ್ಯಾರ್ಥಿಗಳ ತುಂಟತನ ಹೊಸತಲ್ಲ. ಕಾಲೇಜಿನ ನೇರ ತರಗತಿಗಳಲ್ಲೂ ಇಂತಹ ಘಟನೆಗಳು ಅಪರೂಪವೇನಲ್ಲ, ಈ ಸವಾಲು ಸದಾ ಇದ್ದದ್ದೆ. ಆದರೆ ಜಾಲತರಗತಿಗಳಲ್ಲಿ

ಅವರು ಚೇಷ್ಟೆಗಳಲ್ಲೂ ಹೊಸತನವನ್ನು ಕಂಡುಕೊಂಡಿದ್ದಾರೆ! ಅಧ್ಯಾಪಕರನ್ನು ಪೆಚ್ಚಾಗಿಸುವ ವೈವಿಧ್ಯಮಯ ಕೀಟಲೆಯ ವೀಡಿಯೋಗಳು ಕೋವಿಡ್‌ಕಾಲದ ವಿಶೇಷ ಮನೋರಂಜನಾ ಸರಕುಗಳಾಗಿದ್ದವು.

ಆದರೆ ಅಪಹಾಸ್ಯಕ್ಕೀಡಾಗದೆ ಇವನ್ನೆಲ್ಲ ನಾಜೂಕಾಗಿ ನಿಭಾಯಿಸುವ ಆನ್‌ಲೈನ್ ಜಾಣ್ಮೆಯನ್ನೂ ಮೈಗೂಡಿಸಿಕೊಂಡು ಸಾಗಬೇಕಿದೆ. ಕೆಲವು ವಿಶೇಷ ಪ್ರಯೋಜನಗಳಿಂದಾಗಿ ಜಾಲಕಲಿಕಾವಿಧಾನವನ್ನು ಸಂಪೂರ್ಣ ಬಿಡುವಂತೆಯೂ ಇಲ್ಲ. ಸಂದರ್ಭೋಚಿತವಾಗಿ ಬಳಕೆಯಲ್ಲಿಟ್ಟುಕೊಳ್ಳಬೇಕಿದೆ. ದೂರಸಂವಹನದಲ್ಲಿ ಯಾರನ್ನೂ ದೂರದೆ ಸಂವಹಿಸಲು, ವಿದ್ಯಾರ್ಥಿಗಳು ಸ್ವಶಿಸ್ತು ಮತ್ತು ಏಕಾಗ್ರತೆಯನ್ನು, ಹಾಗೂ ಅಧ್ಯಾಪಕರು ತಾಳ್ಮೆಯನ್ನು ಹೆಚ್ಚಿಸಿಕೊಳ್ಳಬೇಕಿದೆ! ಆಗಷ್ಟೆ ಈರ್ವರ ನಡುವಿನ ಸಂಬಂಧ ಬಲವಾಗಲು, ಸಂಹವನ ಸುಗಮವಾಗಲು ಸಾಧ್ಯ. ಹೊಸಚಪ್ಪಲಿ ಕಚ್ಚುವುದು ಸಹಜ, ಎಣ್ಣೆಸವರಿ ಸಾವರಿಸಿಕೊಂಡು ಸಾಗುತ್ತಿರುವುದು..., ಬಿಸಾಡಲು ಸಾಧ್ಯವೆ?

ಅಕ್ಬರನು ತನ್ನ ಗಡ್ಡ ಜಗ್ಗಿದವರಿಗೆ ಏನು ಶಿಕ್ಷೆ ಕೊಡೋಣವೆಂದು ಸಭಿಕರಲ್ಲಿ ಕೇಳಿದಾಗ, ಎಲ್ಲರಿಗೂ ಭಿನ್ನವಾಗಿ ಬೀರಬಲ್ ಹೇಳಿದ್ದು 'ಮಿಠಾಯಿ ಕೊಡಬೇಕು' ಎಂದು! ಅದು ಹೇಗೆ ನಿನಗೆ ತಿಳಿಯಿತೆಂದು ಅಕ್ಬರನು ಕೇಳಿದಾಗ, "ಸಾಮ್ರಾಟನ ಗಡ್ಡ ಆತನ ಮಕ್ಕಳಿಗಲ್ಲದೆ ಬೇರಾರಿಗೆ ಸಿಗಲು ಸಾಧ್ಯ?" ಎಂದು ಹೇಳಿದ ಬೀರಬಲ್. ಈ ಕಥೆ ಎಲ್ಲರಿಗೂ ತಿಳಿದೇ ಇದೆ.

ಅಂತೆಯೇ, ಅಧ್ಯಾಪಕರ ಗಡ್ಡವನ್ನು ವಿದ್ಯಾರ್ಥಿಗಳು ತಾನೆ ಜಗ್ಗಬೇಕಾದ್ದು?! ■



# ಮಲೆನಾಡು ಎಂಬ ಸ್ವರ್ಗ

✍ಪುಷ್ಪಲತಾ. ಟಿ.ಜಿ

ಅಮ್ಮಾ ಗೀತಾ ಬಂತು..

ಎಂಬ ಅಕ್ಕನ ಮಾತು ಕೇಳಿದರೂ ಅಲ್ಲೇ ಬಿದ್ದು ಕೊಂಡಿದ್ದೆ.

ಮಲೆನಾಡ ಮುಕ್ತ ಪರಿಸರದಲ್ಲಿ ಬದುಕು ಕಟ್ಟಿಕೊಂಡಿದ್ದ ದೊಡ್ಡಪ್ಪನ ಮನೆ ಎಂದರೆ ಚಿಕ್ಕ ವಯಸ್ಸಿನಿಂದಲೂ ನನಗೆ ಅಚ್ಚು ಮೆಚ್ಚು

ಜನ ಜಂಗುಳಿ ಇಲ್ಲದೆ ಪ್ರಕೃತಿಯ ನಡುವೆ ಕಳೆದು ಹೋಗುವುದೆಂದರೆ ಮನಮೋಹಕ.

ಸದಾ ಹಚ್ಚ ಹಸಿರ ನೆಲ, ಜೋಗದ ಸಿರಿಯ ಮಡುವಲ್ಲಿ ಅರಳಿದ ದಟ್ಟ ಕಾನನ ಅದರ ನಡುವಿನ ಕಾಲುದಾರಿ ಹುಡುಕಿ ಪಕ್ಕದ ಮನೆ ತಲುಪಬೇಕು. ಕಾನನದ ಎದೆಯಲ್ಲಿ ಹೊಕ್ಕು ಸಾಗುವಾಗ ಅದರ ತಂಪು ನೆರಳು,ತಂಗಾಳಿ ಕಪ್ಪೆಯ ಕರ ಕರ,ಹಕ್ಕಿಯ ಚಿಲಿಪಿಲಿ, ಯಾವುದೋ ಪ್ರಾಣಿಯ ಸಪ್ಪಳ, ಕಾಲ ಹೆಜ್ಜೆಗೆ ತಕ್ಕಂತೆ ಸದ್ದು ಮಾಡುವ ಎಲೆ ದರಕು, ಮರದಿಂದ ಮರಕ್ಕೆ ತೂಗಾಡುವ ಮಂಗಗಳ ಹಿಂಡು, ಕಾಲುದಾರಿಯಲ್ಲಿ ಮುಂದೆ ಸಾಗಿದರೆ ಶರಾವತಿ ಹಿನ್ನೀರ ಹೊನಲು, ಅದರ ಅಂಚಲಿ ಹೆಜ್ಜೆ ಇಡುತ್ತಾ ನಡೆದರೆ ಮುಂದೆ ಮನೆಯ ಗುರುತು ತೋಟದ ತುದಿಯಲ್ಲಿ ಇರುವಂತೆ ಕಾಣುತ್ತದೆ.

ತೋಟದ ಅಡಿಕೆ ಬಣ ಗಳನ್ನು ದಾಟಿ ಮುಂದೆ ನಡೆದರೆ ವಿಶಾಲ ಅಂಗಳ ಅದರ ಸುತ್ತಾ ಹೂ ಗಿಡಗಳು ಅಂಗಳದಲ್ಲಿ ಮಲಗಿರುವ ದಷ್ಟ ಪುಷ್ಟವಾಗಿ ಬೆಳೆದ ಎರಡು ನಾಯಿಗಳು ವಾಸನೆಯಲ್ಲೆ ಎಚ್ಚೆತ್ತು ಕಾನನದಲ್ಲಿ ಮೊಳಗುವಂತೆ ಕೂಗುತ್ತವೆ. ಅಷ್ಟರಲ್ಲಿ ಮನೆಯವರು ಹೊರ ಬಂದರೆ ತೊಂದರೆ ಇಲ್ಲ ಇಲ್ಲವಾದರೆ ಅವುಗಳಿಂದ ತಪ್ಪಿಸಿಕೊಳ್ಳುವುದು ಕಷ್ಟವಾದೀತು.

ಇನ್ನು ಮಳೆಗಾಲದಲ್ಲೋ ಒಂದೇ ಸಮನೆ ಅರ್ಭಟಿಸುವ ಮಳೆ, ಜಡಿ ಗಾಳಿಗೆ ತತ್ತರಿಸಿ ಧರೆಗೆ ಉರುಳುವ ಬೃಹತ್ ಮರ ಮುತ್ತಿಕ್ಕುವ ಚಳಿಯಲ್ಲಿ ಬೆಂಕಿಯ ಸುತ್ತ ಕೂತು ಮಾತಾಡುವ ಪರಿ ಎಲ್ಲವೂ ನನಗೆ ಮೊದಲಿನಿಂದಲೂ ಹೆಚ್ಚೇ ಇಷ್ಟ. ಬೆಟ್ಟ ಗುಡ್ಡ ಅಲೆಯುತ್ತ ನೆಲ್ಲಿಕಾಯಿ ನೇರಳೆ ತಿನ್ನುತ್ತಾ ಸಾಗುವ ಚಾರಣದ ಅನುಭವ ಅದ್ಭುತ ಮನೆಯಿಂದ ಕೊಂಚ ದೂರದಲ್ಲಿ ಇರುವ ಶರಾವತಿ ಹಿನ್ನೀರು.ಜನರ ಭಾಷೆಯಲ್ಲಿ ಹೊಳೆಗೆ ಹೋಗುವುದೆಂದರೆ ನನಗೆ ಬಹು ಇಷ್ಟ.

ಲೋಕದ ಗೊಡವೆ ಪಕ್ಕಕ್ಕಿರಿಸಿ ನಿರಾಳವಾಗುವುದು ನಿಶ್ಚಿತ.

ಹಿನ್ನೀರು ಆವರಿಸುವ ಮೊದಲಿದ್ದ ವಾಸ ತಾಣ, ಮನೆಗಳು ಮುಳುಗಿರುವ ಕುರುಹು ಅಲ್ಲಲ್ಲಿ ಕಾಣುವುದನ್ನು ನೋಡಬಹುದು.ಈಜುತ್ತಾ ಆಡುತ್ತಾ ದೊಡ್ಡಪ್ಪನೊಂದಿಗೆ ಪುಟ್ಟ ದೋಣಿ (ಹರಿಗೋಲು)ಯಲ್ಲಿ ಸುತ್ತುತ್ತಾ ನಾವು ದೋಣಿಯಲ್ಲಿ ಹೊಳೆಯಲ್ಲಿ ಸಾಗಿದಂತೆ ದಡದಲ್ಲೇ ಹಿಂಬಾಲಿಸಿ ಓಡಿ ಓಡಿ ಬರುತ್ತಿದ್ದ ಗುಂಡು, ಟೀಪು (ಅವರ ಮನೆಯ ನಾಯಿ) ಕಳೆದೆ ಹೋಗುವ ತಾಣವದು ಒಟ್ಟಾರೆ ಅಲ್ಲಿ ಹೋದರೆ ಆಗುವ ಅನುಭವವೇ ಬೇರೆ.

ಇಷ್ಟೆಲ್ಲಾ ಹೇಳಿದ ಮೇಲೆ ಇನ್ನೊಂದು ವಿಷಯ ಹೇಳಲೇ ಬೇಕು.

ಇಲ್ಲಿನ ಜನರೋ ಮುಗ್ಧರು ಹೊರ ಪ್ರಪಂಚದ ಮೋಸ ಅರಿಯದ ನಿಷ್ಕಪಟರು.

ಪ್ರಕೃತಿ ಗುಣವೋ ಅವರ ಮನದ ತುಮಲವೋ ನಾನರಿಯೆ. ಪ್ರಾಣಿ ಪ್ರೀತಿ, ದಯೆಯನ್ನು ಇವರನ್ನು ನೋಡಿ ಕಲಿಯಬೇಕು ಪ್ರತಿ ಮನೆಯಲ್ಲೂ ಮನೆಯ ಸದಸ್ಯರೊಂದಿಗೆ ಎರಡು ಮೂರು ನಾಯಿ ಒಂದೆರಡು ಬೆಕ್ಕು, ಹತ್ತಾರು ದನಕರು.

ಇದೇನು ಹೊಸ ವಿಷಯ ಎನ್ನುವಿರಾ...

ಅವುಗಳನ್ನು ಅವರು ಸಾಕುವ ಪರಿ ನಮ್ಮಂತೆಯೇ ಅವುಗಳನ್ನು ಕಾಣುವ ಬಗೆ ಅವುಗಳನ್ನು ಪ್ರೀತಿಸುವ ರೀತಿ ಕಂಡಿತಾ ನಿಷ್ಕಲ್ಮಶ ಹೃದಯವಂತಿಕೆಯನ್ನ ಹೇಳುತ್ತದೆ.

ಈ ಕಾರಣಕ್ಕಾಗಿಯೇ ಅಕ್ಕನ ಮಾತಿಗೆ ನಾನು ಯಾವುದೇ ಪ್ರತಿಕ್ರಿಯೆ ನೀಡದೆ ಹೊರಗಿನ ಸೋಫಾ ದಲ್ಲಿ ಬಿದ್ದುಕೊಂಡಿದ್ದವನು ಹಾಗೆ ಹೊರಳಾಡುತ್ತಲೆ ಇದ್ದೆ ಪಾಪ ಪಾಪ ಎನ್ನುತ್ತಾ ಬೀದಿಯಲ್ಲಿ ಸಿಕ್ಕ ನಾಯಿ ಬೆಕ್ಕು ಗಳನ್ನು ಮನೆಗೆ ತಂದು ಸಾಕುವ ಅಕ್ಕ ಅವುಗಳಿಗೂ ಚಿತ್ರ ವಿಚಿತ್ರ ಹೆಸರಿಟ್ಟಿದ್ದಳು.

ಅವರ ಮನೆಯಲ್ಲಿರುವುದು 2 ನಾಯಿ ಅದರಲ್ಲಿ ಒಂದಕ್ಕೆ ಇರುವುದು ಮೂರೇ ಕಾಲು.ಅದು ಟೀಪು ಹೆಣ್ಣು ನಾಯಿ ಅದಕ್ಕೆ ಅಂಗವಿಕಲ ವೋ ಇಲ್ಲವೇ ಚಿಕ್ಕ ವಯಸ್ಸಿನಲ್ಲೆ ಕಾಲಿಗೆ ಏನಾಗಿತ್ತೊ ಒಟ್ಟಾರೆ ಹಿಂದಿನ ಒಂದು ಕಾಲು ಇಲ್ಲದೆ ಮೂರೇ ಕಾಲಲ್ಲಿ ಓಡಾಡುತ್ತಿದ್ದ ಅದನ್ನು ಕೆಲವರು ಆಟೋ ಎಂದು ಅಕ್ಕನನ್ನು ಕಿಚಾಯಿಸುತಿದ್ದರು.

ಇನ್ನೊಂದು ಗುಂಡು ಇಲ್ಲವೇ ಡಿಂಗ.

ಇದರಿಂದ ನನ್ನದೂ ಇವರ ಮನೆಯಲ್ಲಿ ಅಯೋಮಯ ಸ್ಥಿತಿ.

ನನ್ನನ್ನು ಎಲ್ಲರೂ ಚಿಕ್ಕಂದನಿಂದಲೂ ಗುಂಡು ಎಂದೇ ಕರೆಯುವುದರಿಂದ ಇಲ್ಲಿ ಬಂದಾಗ ನನ್ನ ಸ್ಥಿತಿ ತೀರಾ ಹಾಸ್ಯಮಯ.

ಗುಂಡು ಎಂದಾಗ ಓ ಎನ್ನುವುದೋ, ಬಿಡುವುದೋ

ಏಷ್ಟೋ ಬಾರಿ ಗುಂಡು ಊಟಕ್ಕೆ ಬಾ ಎಂದು ಕೂಗಿದಾಗ ಎಂದಾಗ ಹು ಬಂದೆ ದೊಡ್ಡಮ್ಮ ಎಂದು ಬಿಡುತ್ತಿದ್ದೆ.

ಎಲ್ಲರೂ ಗೊಳ್ ಎಂದು ನಕ್ಕು ಬಿಡುತ್ತಿದ್ದರು. ನೀನಲ್ಲ ಮಗಾ ಈ ಗುಂಡು ಎಂದು ದೊಡ್ಡಮ್ಮ ವಿವರಣೆ ನೀಡುತ್ತಿದ್ದುದು ಉಂಟು.

ಇನ್ನು ನನ್ನ ಹೆಸರಿನೊಂದಿಗೆ ಇಷ್ಟೆಲ್ಲಾ ಅವಾಂತರ ಅವಾಂತರ ಮಾಡಿದ್ದ ಗುಂಡು ಮಾತ್ರ ಏನೂ ಅರಿಯದಂತೆ ಬಾಲ ಆಡಿಸುತ್ತಿದ್ದ.ಬಿಸ್ಕೆಟ್ ತಗೋ ಎಂದರೆ ಸಾಕು ಎದುರು ಬಂದು ನಿಂತು ಬಿಡುತ್ತಿದ್ದ

ಈ ತರ್ಲೆ ಗುಂಡ ನನಗೂ ಇಷ್ಟ. ಹೇಳಿದ್ದೆಲ್ಲ ಕೇಳುವ ಬುದ್ದಿವಂತ.ಎಲ್ಲಕ್ಕೂ ತಲೆ ಬಾಗುವ ನಿಷ್ಠಾವಂತ, ಬಾಲ್ ಆಟಕ್ಕೆ ನನಗೆ ಜೊತೆಗಾರ.

ಇನ್ನು ಬುದ್ಧ

ಯಾರಿದು ಎಂದು ಕೊಳ್ಳಬೇಡಿ

ಇದು ಬೆಕ್ಕಿನ ಹೆಸರು ಅದರ ಹೆಸರಿನ ಹಾಗೆ ಅದೂ ವಿಶೇಷ.

ಏಕೆ ಎನ್ನುವಿರಾ..

ಅದಕ್ಕೆ ಇರುವುದು ಒಂದೇ ಕಣ್ಣು, ಚಿಕ್ಕ ಬಾಲ

ಇದು ಹೇಗೆ ಎನ್ನುವಿರಾ..

ಹುಟ್ಟುವಾಗ ಎರಡು ಕಣ್ಣಿನಲ್ಲೇ ಜಗತ್ತು ನೋಡಿತ್ತು.ಊಟ ತಿನ್ನುತ್ತಿದ್ದ ಟೀಪುವಿನ ತಟ್ಟೆಗೆ ಬಾಯಿ ಹಾಕಿದ ಪರಿಣಾಮ ಅದರ ಕೋಪಕ್ಕೆ ಬಲಿಯಾಗಿ ಒಂದು ಕಣ್ಣು ಅಸ್ತಿತ್ವ ಕಳೆದು ಕೊಂಡಿತು.

ಇನ್ನೊಂದು ಗೊಂಬೆ. ಹೆಸರಿನಂತೆ ಮುದ್ದಾಗಿ ಆಚೆ ಈಚೆ ಓಡಾಡಿಕೊಂಡಿದೆ. ಇನ್ನು ಕೊಟ್ಟಿಗೆ ಗೆ ಹೋದರೆ ಅಲ್ಲಿ ಗಂಗಾ , ಗೋಲಿ,ಶುಭ,ಭೂಮಿ,ಭಾನು ,ಸುಬ್ಬ ಹೀಗೆ ಅಲ್ಲೂ ಇಂತಹ ಜಗತ್ತೇ ತೆರೆಯುತ್ತದೆ.

ಈಗ ನಿಮಗೆ ತಿಳಿದಿರಬಹುದು.

ನಾನೇಕೆ ಹಾಗೆ ಬಿದ್ದು ಕೊಂಡಿದ್ದೆ ಎಂಬುದು ಅಷ್ಟರಲ್ಲಿ ಸುಮಾರು ನಡು ಪ್ರಾಯದ ಒಂದು  ಹೆಂಗಸು ಬಂದು ಕುರ್ಚಿಯಲ್ಲಿ ಕುಳಿತು ಕೊಂಡರು.

ನಾನು ಅಸ್ತ ವ್ಯಸ್ತ ವಾದ ಬಟ್ಟೆಯನ್ನೆಲ್ಲಾ ಸರಿಪಡಿಸಿಕೊಳ್ಳುತ್ತಾ ಎದ್ದು ಹೊರ ನಡೆದೆ. ಮರಕ್ಕೆ ಕಟ್ಟಿದ ಜೋಕಾಲಿಯಲ್ಲಿ ಕುಳಿತಿದ್ದ ಅಕ್ಕನ ಪಕ್ಕದ ಜೋಕಾಲಿ ಯಲ್ಲಿ ಕುಳಿತು ಬಂದವರ ವಿವರ ಕೇಳಿದೆ.

ಅಕ್ಕ ಹೇಳಿದ ಕತೆ ಕೇಳಿ ಇಂದಿನ ಕಾಲದಲ್ಲಿ ಅತ್ತೆಗೆ ಹೆದರುವ ಸೊಸೆ....ಇಂತಹ ವಿಪರ್ಯಾಸ ಎಂದುಕೊಂಡೆ.

ಗುಂಡು ಟೀ ತಗೋ ಎಂಬ ದೊಡ್ಡಮ್ಮನ ಕೂಗಿಗೆ ಇಬ್ಬರೂ ಒಳ ಬಂದೆವು.

ದೊಡ್ಡಮ್ಮ ಕೊಟ್ಟ ಚಕ್ಕುಲಿ ಯನ್ನೂ ಟಿ ನಲ್ಲಿ ನೆನೆಸಿ ಮೆಲ್ಲುತಿದ್ದ ಅವರ ಹಲ್ಲು ಎಂದೋ ಸ್ವಾಧೀನ ಕಳೆದುಕೊಂಡು ಹೋಗಿದ್ದವು .ಕೃತಕ ಹಲ್ಲು ಉದುರುವ ಭಯದಲ್ಲಿ ಸದ್ದಿಲ್ಲದೆ ಚಕ್ಕುಲಿ ಮೆಲ್ಲುತಿದ್ದ ಅವರ ಜೀವನವು ಅತ್ತೆಯ ಏರುದನಿ ನಡುವೆ ಸದ್ದಿಲ್ಲದೆ ಸಾಗಿತ್ತಂತೆ.

ಅತ್ತೆಯ ಸುದ್ದಿ ಹೇಳುತ್ತಾ ಟಿ ಕುಡಿದು ಅತ್ತೆ ಊಟಕ್ಕೆ ಬರುವ ಹೊತ್ತಾಯಿತು ಎನ್ನುತ್ತಾ ಹೊರಟಿತು.

ಪುನಃ ಹೊರಟಿದ್ದು ಗೌರಿ ...ಗುಂಡುನ ಕರಿ...ನನ್ ಜೊತೆ ಬಂದು ಬಿಟ್ರೆ ಕಷ್ಟ. ಎನ್ನುತ್ತಾ ನಿಂತಿತು.

ಅಯ್ಯೋ ನಾನು ಇವರಿಗೆ ಹೇಗೆ ಗೊತ್ತು..ನಾನೆಲ್ಲಿ ಇವರ ಜೊತೆ ಹೊರಟು ನಿಂತಿದ್ದೇನೆ.

ಎಂದು ನಾನು ಗೊಂದಲದಲ್ಲಿ ಇದ್ದೆ ಅಷ್ಟರಲ್ಲಿ ಗುಂಡು..... ಬಾ...ಎಂದು ದೊಡ್ಡಮ್ಮ ಕೂಗಿದರು. ಗುಂಡು ಓಡಿ ಬಂದ ದೊಡ್ಡಮ್ಮ ಏನೋ ತಿನ್ನಲು ಕೊಡುವರು ಎಂದು ಅವರ ಎದೆ ಎತ್ತರಕ್ಕೆ ಹಾರಿ ಏನೂ ಇಲ್ಲ ಎಂದು ಖಚಿತ ಪಡಿಸಿಕೊಂಡು ಅಕ್ಕನನ್ನು ಹುಡುಕಿ ಹೊರಟ.

ಗುಂಡು ಅವರ ಮನೆಗೆ ಹೋಗಬಾರದ ದೊಡ್ಡಮ್ಮ ಎಂದೆ.ಅವರ ಅತ್ತೆಗೆ ಗೀತಾ ಇಲ್ಲಿ ಬಂದದ್ದು ಗೊತ್ತಾಗಿ ಬಿಡುತ್ತೆ ಅಂತ ಭಯ ಅವ್ರಿಗೆ ಅಂದರು.

ಹೌದ ಅವರೆಂತಹ ಅತ್ತೆ....

ಎನ್ನುತ್ತಾ ಯೋಚಿಸಿ ಪುನಃ ಉಯ್ಯಾಲೆ ಬಳಿ ಹೋದೆ.

ಸಂಜೆ ಆಗಿತ್ತ ಬಂದಿತ್ತು.ಅಷ್ಟು ಹೊತ್ತಿಗೆ ನಾನು ಹೊರಗೆ ಗುಂಡು ಜೊತೆ ಅಡುತಿದ್ದೆ ಅಷ್ಟರಲ್ಲಿ ಗುಂಡು ನನ್ನ ಜೊತೆ ಅದುವುದ ಬಿಟ್ಟು ಟೀಪು ಜೊತೆ ಸೇರಿ ಗೇಟ್ ಬಳಿ ಓಡಿ ಕೂಗಲು ಆರಂಬಿಸಿದ.

ಸ್ವಲ್ಪ ಹೊತ್ತಿನ ನಂತರ ಒಬ್ಬರು ಅಜ್ಜಿ ಯೊಂದಿಗೆ ಎರಡು ನಾಯಿ ಬಾಲ ಆಡಿಸುತ್ತಾ ಬಂದವು.

ಅವರು ಬಂದವರು.ಏನಾ ತಮ್ಮ .... ಅರಾಮನ..

ಕಮಲನ ಮಗ ಅಲ್ಲನಾ...ನೀನು...ಅಂದರು ಗಡಸು ದನಿಯಲ್ಲಿ.

ಹೌದು.

ಅರಮ್ ನೀವು ಚೊಲೋ ಇದೀರಿ..ಅಂದೆ ಅದೇ ಉತ್ತರ ಕರ್ನಾಟಕ ಭಾಷೆ ನಂದು.ಹೂ ಗೌರಿ ಅಂದ್ರು ದೊಡ್ಡಮ್ಮನ ಕರೆದೆ.

ಪುನಃ ಟಿ ಪುನಃ ಮಾತು.

ಸೊಸೆ ಏನೂ ಕೆಲ್ಸ ಮಾಡಲ್ಲ ಎರಡು ದೋಸೆ ತಿನ್ನುತ್ತಾಳೆ ಎಂದು ಜೋರು ದನಿ ಯಲ್ಲಿ ಹೇಳುತ್ತಿದ್ದರು.

ನಾನೋ ಮೂಕ ವಿಸ್ಮಿತನಾಗಿ ನೋಡಿದೆ.

ಇವರಿಬ್ಬರೂ ನಿತ್ಯ ಬರುವ ದೊಡ್ಡಮ್ಮ ನ ಸ್ನೇಹಿತರು ಇಬ್ಬರ ಮಾತಿಗೂ ಹೂ ಗುಡುತ್ತಲೆ ಕೆಲಸ ಮಾಡುವುದು ದೊಡ್ಡಮ್ಮನ ಚಾಣಾಕ್ಷತೆ.ಸೊಸೆಯ ಬೈಗುಳದ ಪೀಟಿಕೆ ಮುಗಿಸಿ

ಗೌರಿ ಒಂದು ಲೋಟ ಚಾ ಪುಡಿ ಕೊಡು ಇಲ್ಲವೇ ಸಕ್ಕರೆ ಕೊಡು ಎಂದು ಬಂದ ಕಾರಣ ಈಡೇರಿಸಿ ಜಾಗ ಕಾಲಿ ಮಾಡುವುದು ಅವರ ಚಾಣಾಕ್ಷತೆ.

ನಿತ್ಯವೂ ಒಂದು ಊರಿಗಾದರು ಭೇಟಿ ನೀಡುವ ಅವರು ಸಂಚಾರ ಪ್ರಿಯೆ ಪಕ್ಕದ ಮನೆ ಎನ್ನುವಂತಿಲ್ಲ.ಹತ್ತಿರದ ಮನೆ ಎನ್ನಬಹುದು ಬಾಂಧವ್ಯ ಸೊಗಸಾಗಿದೆ. ಹಿರಿ ಜೀವ ಓಡಾಡುತ್ತಾ ತಮ್ಮ ಅನುಭವ ತಿರುಗಾಟದ ಮಾಹಿತಿ ಹರಟತಿದ್ದರೆ ಒಂತರ ಮನೆ ತುಂಬಾ ಸದ್ದು,ಗೆಲುವಿನ ವಾತಾವರಣ.

ಒಟ್ಟಿನಲ್ಲಿ ಮುಗ್ಧತೆ ನಿಷ್ಕಲ್ಮಶ ತುಂಬಿದ ಮಲೆನಾಡ ಪರಿಸರ ನನ್ನನ್ನು ಕೂಗಿ ಕರೆಯುವುದುಂತು ನಿಜ. ನವೋದಯ ಶಾಲೆಯ ರಜೆ ಬಂತೆಂದರೆ ನಾಲ್ಕು ದಿನ ಮನೆಯಲ್ಲಿ ಕಳೆದು ಆನಂತರ ಇತ್ತ ಮುಖ ಮಾಡುವುದು ರೂಢಿ.

ಇಲ್ಲಿ ಬಂದು ಇಲ್ಲಿಯವನೆ ಆಗಿ ಬದುಕಿ ಬಿಡುವ ಕುಶಿ ಅನಂತ.ಇಲ್ಲಿನ ಪ್ರಕೃತಿ ಸೌಂದರ್ಯ ನೋಡಿದಾಗಲೆಲ್ಲ ಭೂಮಿಯ ಮೇಲಿನ ಸ್ವರ್ಗ ಇರುವುದಾದರೆ ಅದು ಮಲೆನಾಡ ಮಡಿಲಿನಲ್ಲಿ ಎನ್ನುವುದು ಸತ್ಯ.

■

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

ದಂನಆ

- ✓ ನೀವು ದುಃಖವನ್ನು ಮಾರಲಾರರಿ, ಖುಷಿಯನ್ನು ಖರೀದಿಸಲಾರರಿ.
- ✓ ಪ್ರತಿ ದಿನವೂ ಜೀವನದಲ್ಲಿ ಒಮ್ಮೆ ಮಾತ್ರ ಬರುವಂತಹದು.
- ✓ ನಿಮ್ಮ ಹೃದಯದಲ್ಲೊಂದು ಹಸಿರು ಮರ ಇರಲಿ. ಆಗ ಚಿಲಿಪಿಲಿಗುಟ್ಟುವ ಪಕ್ಷಿಗಳು ಬಂದೇ ಬರುತ್ತವೆ.
- ✓ ಯು ಕೆನ್ ಓನ್ಲಿ ಗೆಟ್ ಸಂಥಿಂಗ್ ಫಾರ್ ನಥಿಂಗ್ ಇಫ್ ಯು ಹ್ಯಾವ್ ಪ್ರೀವಿಯಸ್ಲಿ ಗಾಟ್ ನಥಿಂಗ್ ಫಾರ್ ಸಂಥಿಂಗ್.
- ✓ ಐಶ್ವರ್ಯ ಪಿಸುಗುಟ್ಟುತ್ತದೆ, ಹಣ ಚೀರುತ್ತದೆ.
- ✓ ನಾಯಕತ್ವ ಎಂದರೆ ಇತರರನ್ನು ಬಲಪಡಿಸುವುದು.
- ✓ ಯುವರ್ ಪಾಸ್ಟ್ ಮಿಸ್ಟೇಕ್ಸ್ ಆರ್ ಮೆಂಟ್ ಟು ಗೈಡ್ ಯು ಅಂಡ್ ನಾಟ್ ಟು ಡಿಫೈನ್ ಯು.
- ✓ ಮದ್ಯಪಾನ ಮುಕ್ತ ಶಿಬಿರದಲ್ಲಿ ಡ್ರಿಂಕ್ಸ್ ಬ್ರೇಕ್ ಇರುತ್ತಾ?
- ✓ ಕಳ್ಳರ ಮೊದಲನೆ ನಿಯಮ: ಕದಿಯಲು ಯಾವುದೂ ಸಣ್ಣದಲ್ಲ.
- ✓ ಫೈನ್ ಈಸ್ ಎ ಟ್ಯಾಕ್ಸ್ ಫಾರ್ ಬೀಯಿಂಗ್ ರಾಂಗ್. ಟ್ಯಾಕ್ಸ್ ಈಸ್ ಎ ಫೈನ್ ಫಾರ್ ಬೀಯಿಂಗ್ ರೈಟ್.
- ✓ ಬದುಕಿನ ಅಡೆತಡೆಗಳು ಒಂದೇ ತರಹ ಇರುತ್ತವೆ. ಆದರೆ ವ್ಯತ್ಯಾಸ ಇರುವುದು ನೀವು ಅವುಗಳನ್ನು ಹೇಗೆ ಎದುರಿಸುತ್ತೀರಿ ಎಂಬುದರಲ್ಲಿ.
- ✓ ಬಂದೂಕು ಜನರನ್ನು ಸಾಯಿಸುವುದಿಲ್ಲ. ಜನ ಜನರನ್ನು ಸಾಯಿಸುತ್ತಾರೆ.
- ✓ ಯು ಆರ್ ಓನ್ಲಿ ಅಸ್ ಗುಡ್ ಅಸ್ ದಿ ಸಮ್ ಆಫ್ ಯುವರ್ ಪಾರ್ಟ್ಸ್ ಅಂಡ್ ಒನ್ ಪರ್ಸನ್ ಕೆನಾಟ್ ಬಿ ಎ ಟೀಂ.
- ✓ ನಿಮ್ಮ ಪಯಣವನ್ನು ಎಲ್ಲರೂ ಅರ್ಥ ಮಾಡಿಕೊಳ್ಳರು. ಆದುದರಿಂದ ನೀವು ನೀವಾಗಿರಿ ಮತ್ತು ಪಯಣವನ್ನು ಮುಂದುವರೆಸಿ.
- ✓ ನಮ್ಮ ತಪ್ಪುಗಳಿಗೆ ನಾವು ಒಳ್ಳೆ ವಕೀಲರಾಗುತ್ತೇವೆ, ಇತರರ ತಪ್ಪುಗಳಿಗೆ ಒಳ್ಳೇ ನ್ಯಾಯಾಧೀಶರಾಗುತ್ತೇವೆ.
- ✓ ಲೈಫ್ ಇನ್ ಲೈಫ್ ಈಸ್ ರಿಯಲ್ ಲೈಫ್. ■

## ಪದಕುಲುಮೆ

✍ಎಸ್ ಎನ್ ಗಣನಾಥ

Appದ್ಬಾಂಧವ: ಕಷ್ಟಕಾಲಕ್ಕೆ ಸರಿಯಾಗಿ ಒದಗುವ ಮೊಬೈಲ್ ಅಪ್ಲಿಕೇಶನ್. ಉದಾ: ಡಿಜಿ ಲಾಕರ್

ಅಂದ ವಿಶ್ವಾಸ: ಕೇವಲ ಸುಂದರವಾಗಿದ್ದರೆ ಸಾಕು, ಎಲ್ಲವೂ ಸಾಧ್ಯ ಎನ್ನುವ ಮನೋಭಾವ

ಉಪದ್ರವ: 'ಮುಖ್ಯದ್ರವ' ದೊಂದಿಗೆ ಬೆರೆಸುವ ಇತರೆ ದ್ರವಗಳಾದ ನೀರು, ಸೋಡಾ ಇತ್ಯಾದಿ

ಏಕಸಂಧಿಗ್ರಾಹಿ: ಎಲ್ಲಾ ಸಂಧಿಗಳನ್ನು ಕಲಿಸಿದರೂ ಆತ ಕಲಿತದ್ದು ಮಾತ್ರ ಒಂದೇ ಸಂಧಿ

ಕಷ್ಟಾವಧಾನ: ಹೊಸದಾಗಿ ಅಷ್ಟಾವಧಾನ ಮಾಡಲು ಹೊರಟವನ ಪಾಡು

ಚಾಟೂಕ್ತಿ: Chat session ಗಳಲ್ಲಿ ಹೇಳಿದ ಸಂಗತಿ

ಓಂ ಸಿಕ್ ನೆಸ್: ಆಧ್ಯಾತ್ಮ ಇತ್ಯಾದಿ ಸಂಗತಿಗಳ ಬಗ್ಗೆ ಅತೀವ ಅಸಡ್ಡೆ

ಓಲೈಕೆ: ಇನ್ನೆಲ್ಲಾ ಆಪರೇಟರುಗಳನ್ನು ಬಿಟ್ಟು ಯಾವಾಗಲೂ ಓಐಂ ಟ್ಯಾಕ್ಸಿಗಳನ್ನು ಬುಕ್ ಮಾಡುವುದು

ಕದನ: ಬುಲ್ ಫೈಟ್

ಕರಪತ್ರ: ಟ್ಯಾಕ್ಸ್‌ಕುರಿತಾದ ಟಪಾಲು

ಖೂನ್ ದಾನ್: Blood donation ಮಾಡುವವರ ತಂಡ

ಚಂಡಿಘರ್: ಹಠಮಾರಿ ಹೆಣ್ಣುಮಗಳ ಮನೆ

ಛತ್ರೀಸ್ ಘರ್: ಕೊಡೆಗಳ ಅಂಗಡಿ

ತಂತ್ರಘ್ನ: ಇಂಜಿನಿಯರಿಂಗ್ ಪದವಿ ಗಳಿಸಿದರೂ ನಂತರ ಹಣಕ್ಕಾಗಿ ಬೇರೆ ಬೇರೆ ಕ್ಷೇತ್ರಗಳಿಗೆ ಹಾರುವವರು

ಪಂಕಜ: ಮೊದಲು ಬರುವುದು ಧೂಳು; ನಂತರ ಗಾಳಿ

ತತ್ತ್ವಮಸಿ: ಆದರ್ಶಗಳಿಗೆ ಹತ್ತಿಕೊಂಡಿರುವ ಮಸಿ

ದನಚರಿ: ಗೋಶಾಲೆಯಲ್ಲಿ ಪ್ರತಿನಿತ್ಯದ ಕೆಲಸಗಳ ವೇಳಾಪಟ್ಟಿ

ದೀರ್ಘಾಲೋಚನೆ: ಕೂಡಲೆ/ಕೂಡಲೇ, ತುಂಬ/ತುಂಬಾ, ಲಕ್ಷ್ಮಿ/ಲಕ್ಷ್ಮೀ ಇವೆರಡರಲ್ಲಿ ಯಾವುದು ಸರಿ ಎಂಬ ಜಿಜ್ಞಾಸೆ.

ದೂರ್ವಾಸ: ತುಂಬಾ ದೂರದಲ್ಲಿ ಮನೆ ಮಾಡಿರುವುದು ಉದಾ: ಯಲಹಂಕ, ಹಾರೋಹಳ್ಳಿ

Itchಾ ಮರಣಿ: ಅತಿಯಾಗಿ ಮೈ ತುರಿಕೆಯಾಗಿ ಕೊನೆಗೆ ಅದರಿಂದಲೇ ಮರಣ ಹೊಂದಿದವನು

ಪತಿಭಟನೆ: ಗಂಡನಿಂದ ಬರುವ ವಿರೋಧ

■

# ಯಾವ ಜನ್ಮದ ಮೈತ್ರಿ

ಜ್ಯೋತಿ ರಾಜೇಶ್

ಬೆಳಿಗಿನಿಂದ ರಾತ್ರಿಯವರೆಗೆ ಎಲ್ಲ ಕೆಲಸ ಮಾಡಿ ಮುಗಿಸಿ ಪೂರ್ತಿ ರಿಲ್ಯಾಕ್ಸ್ ಆಗಬೇಕೆಂದ್ರೆ ಕೈಯಲ್ಲಿ ಮೊಬೈಲ್ ಬೇಕೇಬೇಕು ನನಗೆ. ಬರೀ ರಾತ್ರಿ ಅಂತೇನೂ ಅಲ್ಲಾ.... ಬಿಡುವಿದ್ದಾಗಲೆಲ್ಲ ಮೊಬೈಲ್ ಕೈಗೆ ತಗೋಳೋದೆಯಾ.... ಈವತ್ಯಾಕೋ ನೆಟ್ವರ್ಕ್ ಸ್ವಲ್ಪ ಕಿರಿಕಿರಿ ಮಾಡ್ತಿತ್ತು, ನನಗೆ ಬೇಕಾದ ಕಾರ್ಯಕ್ರಮ ನೋಡಕ್ಕಾಗ್ಲಿಲ್ಲ... ಆ ಸಿಟ್ಟನ್ನ "ಇದೊಂದು ಯಾವಾಗಿನ ಗೋಳು" ಅಂತ ಮೊಬೈಲ್ ನ್ನು ಪಕ್ಕದಲ್ಲಿ ಕುಕ್ಕುವುದರ ಮೂಲಕ ತೀರಿಸಿಕೊಂಡು ಹಾಗೇ ಮಲಗಿದೆ....

ಬೆಳಿಗ್ಗೆ ಎದ್ದು ಮೈಮುರಿದು ಇನ್ನೇನು ಮುಖ ತೊಳೆದು ನನ್ನಿಷ್ಟದ ಕಾಫೀ ಹೀರೋಣವೆಂದು ಏಳಲು ನೋಡ್ತೀನಿ..... ಅಯ್ಯೋ ಇದೇನು ನಾನಾಗೇ ಎದ್ದು ಓಡಾಡಲಾಗದ ಸ್ಥಿತಿ.... ಇದೇನಪ್ಪಾ ಹೀಗೆ? ಅಂದ್ಕೊಂಡು ಪಕ್ಕಕ್ಕೆ ಹೊರಳಲು ನೋಡಿದ್ರೆ ಅದೂ ಅಸಾಧ್ಯವೆನಿಸಿತು. ಅಷ್ಟೊತ್ತಿಗೆ ಯಾಕೋ ನನ್ನ ಮೈ ಎಲ್ಲ ಒಂದು ರೀತಿಯ ನಡುಕವಾಗಿ, ಜೊತೆಯಲ್ಲೇ ನನಗರಿವಿಲ್ಲದೇ ನಾನು ಹಾಡತೊಡಗಿದಾಗ ನನ್ನನ್ನು ತನ್ನ ಕೈಯಲ್ಲೆತ್ತಿದ ಯಾರೋ ಪುಣ್ಯಾತ್ಗಿತ್ತಿ ನಿದ್ದೆಗಣ್ಣಲ್ಲೇ 'ಹಲೋ.... ಏನು ಹೇಳಿ' ಅಂದಾಗಲೇ ಅರಿವಾಗಿದ್ದು, ನಾನು ಮೊಬೈಲ್ ಆಗ್ಬಿಟ್ಟಿದ್ದೆ.....

ಓ...ದೇವ್ರೇ ಇದೆಂಥ ಪರಿಸ್ಥಿತಿಯಪ್ಪಾ? ಯಾವಾಗ್ಲೂ ಕೈಯಲ್ಲಿ ಮೊಬೈಲ್ ಹಿಡಿದು, ಸ್ಟೈಲ್ ಮಾಡ್ತಿದ್ದ ನಾನೇ ಮೊಬೈಲ್ ಆಗ್ಬಿಟ್ನಲ್ಲಾ....ಅದನ್ನ ಕ್ಷಣವೂ ಬಿಡದೇ ಗೋಳಾಡಿಸಿದ್ದರ ಫಲವಾಗಿ ಈ ಹಣೆ ಬರಹ ಬರೆದು ನನ್ನ ಸೃಷ್ಟಿಸಿದನೇ ಬ್ರಹ್ಮ(?) ಅಂತ ಗೋಳಾಡ್ಕೊಂಡೆ.... ಆದ್ರೆ ನನ್ ಗೋಳು ಕೇಳೋರ್ಯಾರು? 'ಪಾಲಿಗೆ ಬಂದದ್ದು ಪಂಚಾಮೃತ'

ಇನ್ನು ನನ್ನ ಜೀವನ ಹೀಗೇ ಅಂದ್ಕೊಂಡೆ.... ಪುಣ್ಯ ಎಂದರೆ ಒಂದ್ ಒಳ್ಳೇ ಸ್ಟೈಲ್ ಆಗಿ, ಸಿಕ್ಕಾಪಟ್ಟೆ ಫೀಚರ್ಸ್ ಇರೋ ಒಳ್ಳೇ ಸ್ಮಾರ್ಟ್ ಮೊಬೈಲ್ ಆಗಿದ್ದೆ. ಹಾಗಾಗಿ ಸ್ವಲ್ಪನಾದ್ರೂ ಖುಷಿಯಾಯ್ತು, ಹಿಂದಿನ ನರ ಜನ್ಮದಲ್ಲಿ ಸಿಕ್ಕಾಪಟ್ಟೆ ಸ್ಟೈಲೂ, ಮೇಕಪ್ಪೂ ಮಾಡ್ತಿದ್ದರಿಂದ ಬಂದ ಭಾಗ್ಯವಿರಬೇಕಿದು. ಆದ್ರೆ ಆ ಫೀಚರ್ಸೇ ನನ್ನ ಫ್ಯೂಚರ್ನ ಪೂರಾ ಹಾಳ್ಮಾಡುತ್ತೇಂತ ಆಮೇಲೆ ಗೊತ್ತಾಯ್ತು. ಏನ್ಮಾಡೋದು ಪ್ರಾರಬ್ಧ ಕರ್ಮ, ಯಾರನ್ನೂ ಬಿಡಲ್ವಂತಲ್ಲಾ....

ನನ್ನ ಒಡತಿ ನೋಡಲು ಸುಂದರಿ, ಸುಕೋಮಲೆ, ಸೊಗಸುಗಾತಿ ಕಣ್ರೀ.... ಕೇಳಿ ನಿಮ್ಗೂ ಖುಷಿಯಾಯ್ತಾ? ತಡೀರಿ...ತಡೀರಿ ಈಗಲೇ ಒಂದು ನಿರ್ಣಯಕ್ಕೆ ಬಂದ್ಬಿಡ್ಬೇಡಿ.... ಅವ್ಳು ನೋಡಲಷ್ಟೇ ಸುಕೋಮಲೆ.... ಮಾಡುವ ಕೆಲಸಗಳೆಲ್ಲಾ ಬರೀ ಗಡಿಬಿಡಿ, ಸಿಕ್ಕಾಪಟ್ಟೇ ಶಾರ್ಟ್ ಟೆಂಪರ್ಡೂ.... ಸಿಟ್ ಬಂದಾಗ ಏನ್ ಸಿಕ್ರೂ ಎತ್ ಬಿಸಾಕೋದೆಂಯಾ. ಆ ಮನೆಯ ಲೋಟ, ತಂಬಿಗೆ, ರಿಮೋಟ್ ಮುಂತಾದವುಗಳೆಲ್ಲವೂ ತಮ್ಮ ಆಕಾರ ಕಳೆದುಕೊಂಡಿದ್ದು ಬಹುಶಃ ಈ ಸುಕೋಮಲೆಯ ಕರಗಳಿಂದಲೇ ಇರಬೇಕು. ಅದೆಲ್ಲ ಕಂಡ ನಾನು ಯಾವಾಗ ಆ ಸುಕೋಮಲೆಯ ಕರದಲ್ಲಿದ್ದರೂ ಥರಥರ ನಡುಗುತ್ತಲೇ ಇರ್ತಿದ್ದೆ. ಆದ್ರೆ ನನ್ನ ತುಂಬಾ ಪ್ರೀತ್ಸೋಳು, ಯಾವಾಗ್ಲೂ ಎತ್ಕೊಂಡೇ ಇರ್ತಿದ್ಲು. ನನ್ನ ಸನಿಹಕ್ಕೋಸ್ಕರ ಗಂಡ~ಮಕ್ಕಳ ಜೊತೆ ಜಗಳನೂ ಆಡ್ತಿದ್ಲು. ನೀವೇನೇ ಹೇಳಿ, ನಮಗೋಸ್ಕರ ಯಾರಾದ್ರೂ ಇನ್ನೊಬ್ಬರನ್ನು ಎದುರು ಹಾಕೋತಾರೆ ಅಂದ್ರೆ ಅದೆಷ್ಟು ಖುಷಿಯಾಗುತ್ತಲ್ವಾ? ನನಗೂ ಮೊದಮೊದಲು ಹಾಗೇ ಅನಿಸ್ತಿತ್ತು. ಆದರೆ ದಿನದಲ್ಲಿ ಹದಿನಾರರಿಂದ ಹದಿನೇಳು ಗಂಟೆಗಳವರೆಗೂ ಇನ್ನೊಬ್ಬರ ಕೈಯಲ್ಲೇ ಇರೋದಂದ್ರೆ

ಎಂಥ ಹಿಂಸೆ ಅಂತ ನಂತರ ಗೊತ್ತಾಗತೊಡಗಿತು. ಒಂದೋ ಯಾವಾಗ್ಲೂ ನನ್ನ ಒಡತಿಯ, ಮತ್ತು ಇನ್ನೊಬ್ಬರ ಮಾತು ಕೇಳ್ತಿರ್ಬೇಕು, ಅದಿಲ್ವಾ ನಾನೇ ಮಾತು/ ಹಾಡು ಏನಾದ್ರೂ ಹೇಳ್ತಿರ್ಬೇಕು. ಅದೂ ನನ್ನಿಷ್ಟದ್ದಂತೇನೂ ಅಲ್ಲಾ... ಹೀಗಾದ್ರೆ ಹೇಗೆ ಜೀವನ ಮಾಡೋದು ಹೇಳಿ. ಸರಿ ಇಷ್ಟಾದ್ರೆ ಹೇಗೋ ತಡ್ಕೋಬಹುದಿತ್ತು,ಇನ್ನೂ ಹೇಳ್ತೀನಿ ಕೇಳಿ.... ಈ ಮಾರಾಯ್ತಿ ಅದ್ಯಾರಿಗೋ ಕಾಲ್ ಮಾಡ್ತಿರ್ತಾಳಾ.... ನಿಂತು, ಕೂತು, ಮಲಗಿ.... ಅಬ್ಬಬ್ಬ ಒಂದ್ ಕಡೆ ಕೂತು ಮಾಡಕ್ಕಾಗಲ್ವಾ ಇವ್ರಿಗೆ, ನನ್ನ ಒಮ್ಮೆ ಆಕಡೆ, ಒಮ್ಮೆ ಈ ಕಡೆ ತಿರ್ಗಿಸ್ತಾ.... ಅಬ್ಬಾ ಎಷ್ಟ್ ತಲೆ ಸುತ್ತುಬಂತು ಗೊತ್ತಾ..... ಹೊಟ್ಟೆಯೊಳಗೆಲ್ಲಾ ಕಸಿವಿಸಿ.... ಅಯ್ಯೋ ಆ ಮಾತು~ಕಥೇಲಿ ಇವ್ಳಿಗೇನೋ ಸಿಟ್ ಬಂತು.... ತೆಗೆದು ಬದಿಗೆ ಕುಕ್ಕಿದ್ಲು ನನ್ನ..,.. ಅಬ್ಬಾ ಸೊಂಟ ಮುರ್ದೋಯ್ತು ಕಣ್ರೀ..... ಅಷ್ಟೊತ್ಗೆ ನನ್ನಲ್ಲಿದ್ದ ಶಕ್ತೀನೂ ಪೂರಾ ಖಾಲಿಯಾಗಿ ಹಸಿವಾಗತೊಡಗಿತ್ತು. ಪುಣ್ಯಾತ್ಗಿತ್ತಿಗೆ ನನಗೆ ಊಟ ಹಾಕೋ ಯೋಚನೇನೆ ಇಲ್ಲಾ.... ಪ್ಲೀಸ್ ನನ್ನ ಚಾರ್ಜ್ ಗೆ ಹಾಕೂಂತ 'ಬುಳುಂಕ್, ಬುಳಂಕ್' ಅಂತ ಸದ್ದು ಮಾಡಿದ್ರೂ ಇವ್ಳ ಕಿವಿಗೇ ಹೋಗ್ಲಿವೇನೋ.... ಟಿ.ವಿ ನೋಡೋದ್ರಲ್ಲಿ ಬ್ಯುಸಿ. ಗಂಡ~ಮಕ್ಳಿಗೇ ಧಾರಾವಾಹಿ ಟೈಮ್ನಲ್ಲಿ ಊಟ ಸಿಗೋದ್ ಕಷ್ಟ, ಇನ್ ನಾನ್ಯಾವ ಲೆಕ್ಕ ಅಲ್ವೆ? ಎಷ್ಟೋ ಹೊತ್ತಿನ ನಂತರ ಬಂದು ನನ್ನ ನೋಡಿದವ್ಳೇ 'ಥತ್, ಯಾವಾಗ್ಲೂ ಇದ್ರ ಬ್ಯಾಟರಿ ಖಾಲಿಯಾಗಿದ್ದೇ ಇರುತ್ತೆ....' ಅಂದವ್ಳೇ, ಅಂತೂ ನನಗೂ ಊಟ ಹಾಕೋ ಮನ್ಸು ಮಾಡಿದ್ಲೂ. ಅಷ್ಟೊತ್ತಿಗಾಗ್ಲೇ ನಾನು ಅರೆ ಜೀವವಾಗಿದ್ದೆ ಮಾರಾಯ್ರೆ.

ಇವ್ಳದ್ ಮುಗೀತಾ, ನನ್ ಹಣೇ ಬರಹನೇ ಸರಿ ಇಲ್ಲ ಮಾರ್ರೆ, ಆ ಕೊರೋನಾ ಒಂದು ಬಂದು ಎಲ್ರ ಜೀವನ ಅಸ್ತವ್ಯಸ್ತ ಮಾಡೋ ಜೊತೆಗೆ, ನನ್ನ ಜೀವಕ್ಕೂ ಶಾಂತಿ ಇಲ್ಲದಂತೆ ಮಾಡಿದೆ ನೋಡಿ. ಈಗಿನ ಶಾಲೆಯ ಮಕ್ಕಳಿಗೆಲ್ಲ ಆನ್ಲೈನ್ ಕ್ಲಾಸಂತೆ.... ಇಷ್ಟ್ ದಿನ ಮಕ್ಕಳು ಮೊಬೈಲ್ ಮುಟ್ಟಿದ್ರೆ ಬಯ್ತಿದ್ದ ಹಿರಿಯರೀಗ, ತಾವೇ ಒತ್ತಾಯ ಮಾಡಿ ನನ್ನನ್ನ ಅವ್ರಿಗೆ ಕೊಟ್ಟು ಕೂರಿಸ್ತಾರೆ. ಹಿಂದೆಲ್ಲ ಮಕ್ಕಳಿಗೆ ತುಂಬಾನೇ ಇಷ್ಟವಾಗಿದ್ದ ನಾನು, ಈಗ ಅಷ್ಟಕ್ಕಷ್ಟೆ ಆಗಿದ್ದೀನಿ. ನನ್ನ ಕಂಡ್ರೆ ಮುಖ ತಿರುಗಿಸ್ತಿದಾರೆ. ಇವ್ಳ ಮಗನೂ ಅರೆ ಮನಸಿನಿಂದನೇ ತಗೊಂಡ್ನಪ್ಪಾ ನನ್ನ....ಕ್ಲಾಸ್ ಶುರುವಾಗೋದ್ರೊಳಗೆ ಆವ್ನಿಗೆ ಒಂದೆರೆಡ್ ಆಟ ಆದ್ರೂ ಆಡ್ಬೇಕು, ಮತ್ತೆ ಶುರುವೇ ನನಗೆ ಹಿಂಸೆ ಕೊಡೋದು. ಕ್ಲಾಸ್ ಮುಗುದ್ಮೇಲೆ ಮತ್ತೆ ಆಟ, ಅಬ್ಬಾ ಎಷ್ಟು ಪಟ ಪಟ ಅಂತ ಒತ್ತೋದು, ತಿರ್ಗೋರ್ಸದು ಮಾರಾಯ್ರೇ.... ಸ್ವಲ್ಪವೂ ಮಾನವೀಯತೆಯೇ ಇಲ್ವಾ ಈ ಮಾನವರಿಗೆ. ಅದೂ ಬೇರೆ ಹುಡುಗ್ರ ಗ್ರೂಪ್ ಮಾಡ್ಕೊಂಡು ಆಡ್ತಾನಪ್ಪಾ, "ಏ ಅಲ್ಲೇ ಇದಾನೆ, ಹಿಂದೆ ಹೋದ, ಹೊಡಿ ಹೊಡಿ.... ಅಯ್ಯೋ ಸಾಯ್ತೀಯ ನೋಡೀಗ.... ಎಡಗಡೆಯಿಂದ ಬಂದ.... ಅಯ್ಯೋ ಸತ್ತೆ ನಾನು...."ಈ ಥರದ ಅವರ ಮಾತುಗಳ ಕೇಳಲಾಗದೇ ಕಿವಿ ಮುಚ್ಚಿಕೊಳ್ಳೋಣ ಅನಿಸಿತು. ಆ ಭಾಗ್ಯ ನನಗೆ ಕೊಡ್ಲಿಲ್ವೇ ಆ ದೇವ್ರೂ. ಇಷ್ಟ್ ಹೊಡಿ~ಬಡಿ ಅನ್ನೋ ರೋಷ ಇರೋವ್ರು ಮಿಲಿಟ್ರಿಗಾದ್ರೂ ಸೇರ್ಕೋರ್ಬೇಕಪ್ಪಾ ಅಲ್ವಾ, ಯುದ್ಧದ ಸಮಯದಲ್ಲಾದ್ರೂ ದೇಶಕ್ಕೆ ಸಹಾಯವಾಗ್ಬೋದು. ಅವ್ನ ಅಮ್ಮಂಗೂ ಅದನ್ನ ಕೇಳಿ ಸಾಕಾಯ್ತೇನೋ, ಆಗ ಶುರುವಾಯ್ತು ನೋಡಿ ನನಗಾಗಿ ಅಮ್ಮ~ಮಗನಲ್ಲಿ ಜಗಳ. ಕೊಡು ಅಂತ ಅಮ್ಮ, ಕೊಡೋಲ್ಲ ಅಂತ ಮಗ.... ಅಬ್ಬ ಎಳೆದಾಡಿ ಬಿಟ್ರು ನನ್ನ. 'ಕೊಟ್ಟಿಲ್ಲಾಂದ್ರೆ ತಡಿ ಅಪ್ಪಂಗ್ ಹೇಳ್ತೀನಿ'! ಅಂತ ಪಾಪದ ಅಪ್ಪನ ಮೇಲೆ ಗೂಬೆ ಕೂರ್ಸಿದ್ದೇ ತಡ, ಅಮ್ಮನ ಗುಣವನ್ನೇ ಹೊತ್ತ ಶಾರ್ಟ್ ಟೆಂಪರ್ಡ್ ಮಗ.... ಎಸ್ದ ನೋಡಿ ನನ್ನ, ನಾನು ಪೂರಾ ಪೀಸ್ ಪೀಸ್ ಆಗ್ಬೇಕಾದ್ದೇ... ಕಣ್ಣು ಮುಚ್ಚಿ ಬಿಟ್ಟೆ.... ಹಾಗೆ ರಪ್ಪನೆ ಎಸೆದಿದ್ದ ಪುಣ್ಯಾತ್ಮ.... ಆದರೆ ಯಾವ ಜನ್ಮದ ಪುಣ್ಯವೋ ಅವನೇ ಮೊದಲೊಮ್ಮೆ

ಸಿಟ್ಟಾದಾಗ ಎಸೆದ ದಿಂಬಿನ ಮೇಲೆ ಬಿದ್ದಿದ್ದೆ ಮಾರಾಯ್ರೆ.... ಬದುಕಿತು ಬಡ ಜೀವ. ಆದ್ರೆ ದೇಹದ ಪಾರ್ಟ್ಸ್ ಎಲ್ಲ ಒಂದ್ಸಾರಿ ಅಲ್ಲೋಲಕಲ್ಲೋಲವಾಯ್ತು.

ಈಗ ಅಮ್ಮ, ನಂಜೊತೆ ವಾಟ್ಸಾಪ್, ಫೇಸ್ಬುಕ್, ಇನ್ಸ್ಟಾಗ್ರಾಂ ನೋಡೋದ್ರಲ್ಲಿ ಬ್ಯುಸಿ ಆದ್ಲು. ಸಾಹಿತ್ಯದ, ಅಡುಗೆಯ, ಸಂಗೀತದ ಅಂತ ಏನೇನೋ ಗುಂಪುಗಳಿವೆಯಲ್ಲ, ಅದಕ್ಕೆಲ್ಲ ಏನಾದ್ರೊಂದು ಹಾಕೇ ಇರ್ತಾಳೆ ನನ್ನ ಓನರಿಣಿ (ವಾನರಿಣಿ) ,ಮತ್ತೆ ಅದ್ರದ್ದೆಲ್ಲ ಲೈಕ್ಸೂ, ಕಮೆಂಟ್ಸೂ ನೋಡೋದ್ಬೇಡ್ವೇ.... ನೋಡಿ ತನಗೆ ಯಾರು ಲೈಕ್ ಕೊಟ್ಟಿದಾರೆ ಅವ್ರಿಗೆ ಕೊಡೋದ್ಬೇಡ್ವೇ? 'ಟಿಂಗ್' ಅಂತ ನಾನು ಶಬ್ದ ಮಾಡಿದ್ ಕೂಡ್ಲೇ ಅವ್ಳ ಮುಖ ಸಂತೋಷದಿಂದ ಅರಳೋದ್ ನೋಡ್ಬೇಕ್ ನೀವು. ಪಾಪ! ಆ ಹೊಗಳೋದೆಲ್ಲ ನಿಜ ಅಂದ್ಕೊಂಡ್ ಬಿಟ್ಟಿದಾಳೆ, ಅಮಾಯಕಿ(!). ಆಮೇಲೆ ಹಾಗೇ ಸುಮ್ನೇ ಒಂದೆರೆಡ್ ಸೆಲ್ಫೀ ತೆಕ್ಕೊಂಡ್ಲು. ಆ ಮೂತಿ ಸೊಟ್ಟಗೆ ಮಾಡಿ, ಬಿಳೀ ಕೂದಲನ್ನ ಮುಚ್ಚಿ, ಮುಂದಿದ್ದ ಹಲ್ಲನ್ನು ಕವರ್ ಮಾಡಿದ ಅವಳ ಫೋಟೋ ತೆಗೆಯಲು ನನಗಂತೂ ಒಂಥರಾ ಜಿಗುಪ್ಸೆಯೇ..... ಆದ್ರೆ ಏನ್ಮಾಡ್ಲೀ? ನಿರಾಕರಿಸಲು ನನಗ್ಯಾವ ಸ್ವಾತಂತ್ರವಿದೆ? ಮತ್ತೆ ನನಗೆ ಹಸಿವಾಗತೊಡಗಿತು. ಮತ್ತೆ ಬಯ್ಕೊಂಡು ಚಾರ್ಜ್ ಗೆ ಹಾಕಿ ಕುಕ್ಕಿದ್ಲು ನನ್ನ. ಅಲ್ಲಾ ನನಗೆ ಒಂದ್ ಅರ್ಥ ಆಗಲ್ಲಾ, ಕೆಲ್ಸ ಮಾಡಿಸ್ಕೋತಾರೆ ಎಲ್ಲ, ಊಟ ಹಾಕಕ್ಕೆ ಮಾತ್ರ ಯಾಕೆ ಕಿರಿಕಿರಿ ಮಾಡ್ಕೋತಾರೋ ಇವ್ರು? ಇರ್ಲಿರ್ಲಿ, ಎಲ್ಲ ಮೇಲಿರೋ ದೇವ್ರು ನೋಡ್ಕೋತಿರ್ತಾನೆ ಅಲ್ವಾ?.... ಆದ್ರೆ ಈಗ ಕುಕ್ಕಿದ್ದು ನಂಗೆ ಅಷ್ಟೊಂದೇನೂ ನೋವಾಗ್ಲಿಲ್ಲ, ಯಾಕೆ ಗೊತ್ತ? ನನ್ ಪಕ್ಕದ್ಲೇ ಅವ್ಳ ಮಗಳ ಮೊಬೈಲೂ ಊಟಾ ಮಾಡ್ತಿತ್ತು. ಅಬ್ಬಾ.... ಒಂದೇ ಅಲ್ವಾ ನಾವಿಬ್ರೂ, ಸ್ವಲ್ಪ ಕಷ್ಟ ಸುಖ ಮಾತಾಡ್ಬೋದೂಂತ ಅನ್ನಿಸ್ತು. ಆದ್ರೆ ಪಕ್ಕದ ಮೊಬೈಲ್ ನಂಗಿಂತ ಚೆನಾಗಿದೆ ಅಂತ ಕಂಡು ಸ್ವಲ್ಪ ಹೊಟ್ಟೆಕಿಚ್ಚಾಯ್ತೂನ್ನಿ.

ಹಾಯ್ ಅಂದೆ.... ಒಂದೇ ಸಾರಿ ಸಿಟ್ಟಿನಿಂದ ಸಿಡಿದು ಬಿಡ್ತು ಆ ಮೊಬೈಲ್ ಸುಂದ್ರಿ, ಏನ್ ಹಾಯ್, ನಂಗಂತೂ ದಿನ ಪೂರ ಕೆಲಸ ಮಾಡಿ ಸುಸ್ತಾಗಿದೆ, ಈಗ್ಲಾದ್ರೂ ಸುಮ್ನಿರೋಣ ಅಂದ್ರೆ ನಿಂದೊಂದ್ ಹಾಯ್.... ಏನ್ ಹೇಳು? ಅಂತು. ಗಾಬರಿಯಾಗಿ ನಾನು ಬೆಬ್ಬೆಬ್ಬೆ.... ಅಂತ, ಯಾಕೆ ಇಷ್ಟೋಂದ್ ಸಿಟ್ಟೂ? ಅಂದಿದ್ದಕ್ಕೆ, "ಸಿಟ್ಬರ್ದೇ ಇನ್ನೇನ್ ಬರೋಕೆ ಸಾಧ್ಯ? ನನ್ ವಾರಸುದಾರಿಣಿ ಇದಾಳಲ್ಲ.... ಅವ್ಳೋ ಅವ್ಳ ಮೇಕಪ್ಪೋ ನೋಡ್ನೋಡಿ ಸಾಕಾಗಿ ಹೋಗಿದೆ. ದಿನಕ್ಕೊಂದ್ ಹತ್ಸಾರಿ ವೀಡಿಯೋ ಕಾಲ್ ಮಾಡ್ತಾಳೆ, ಇವ್ಳ ಮೂತಿ ಜೊತೆ ಆ ಕಡೆಯವ್ರ ಮೂತೀನೂ ನೋಡೋ ದೌರ್ಭಾಗ್ಯ ನಂದು. ಇವ್ಳು ಹಾಕೋ ಸೆಂಟ್ ವಾಸ್ನೆ ತಗೊಂಡೂ ತಗೊಂಡೂ ಇಡೀ ದಿನ ತಲೆ ಸುತ್ತರ್ತಿರತ್ತೆ ನಂಗೆ. ಆ ಯೂ ಟ್ಯೂಬ್ ನೋಡೋದು, ಅದರಲ್ಲಿ 'ಇದನ್ ನೋಡೀ ಷಾಕ್ ಆಗ್ಬಿಡ್ತೀರಾ....' ಅನ್ನೋದನ್ನೆಲ್ಲಾ ನೋಡಿ ನಿಜ ಅಂದ್ಕೊಂಡು ತಾನೂ ಏನೇನೋ ಮಾಡೋಕ್ ಹೋಗಿ ಪೆದ್ದು ಆಗೋದು. ಮತ್ತೆ ತಾನೆಲ್ಲಿ ಹೋದ್ರೂ ನಾನ್ ಜೊತೆಗಿರ್ಬೇಕ್ ಅವ್ಳಿಗೆ, ಏನ್ ಒಬ್ಬೇ ಹೋಗಕ್ಕೆ ಭಯಾನಾ.... ಒಂದೊದ್ಸಾರಿ ಎಲ್ಲೆಲ್ಲೋ ನನ್ನ ಇಟ್ಬಿಡೋದು, ಬೇರೆಲ್ಲೋ ಹುಡ್ಕೋದು. ನಾನಿಲ್ಲಿದೀನೀಂತ ಕೂಗ್ತಿರ್ತೀನಿ ನಾನು, ಕೇಳ್ಬೇಕಲ್ಲಾ ಅವ್ಳ್ಗೆ, ಕರ್ಮಾ! ಇನ್ ಅವ್ಳಾಡೋ ಮಾತೋ ದೇವ್ರಿಗೇ ಪ್ರೀತಿ.... ಕಂಗ್ಲೀಷ್ ಕುಮಾರಿ. ಆ ಭಾಷೆಲಿ ಮಾತಾಡ್ತಾ ಏನೇನೋ ವೀಡಿಯೋ ಬೇರೆ ಮಾಡಿ ಹಾಕ್ತಿರ್ತಾಳೆ. ಇವ್ಳು ಈ ಥರಾ ಎಲ್ಲ ಸಮಯ ಕಳ್ದು ಹಾಳಾಗೋದು, ಇವ್ಳ ಅಪ್ಪ-ಅಮ್ಮ' ಎಲ್ಲಾ ಈ ಸುಟ್ ಮೊಬೈಲಿಂದ' ಅಂತ ನಂಗ್ ಬಯ್ಯೋದು. ಇದೆಲ್ಲ ನೋಡ್ತಾ ಒಮ್ಮೊಮ್ಮೆ ನಂಗೆ ದೇವ್ರೇ ಸಾಕಪ್ಪಾ ಈ ಜನ್ಮ, ಒಮ್ಮೆ ಸಿಡಿದಾದ್ರೂ ಹೋಗ್ಬಾರ್ದಾ ಅನ್ಸತ್ತೆ

ಕಣೆ....ಯಾರನ್ನೋ ಲವ್ ಬೇರೆ ಮಾಡ್ತಿದಾಳೇನ್ಸುತ್ತೆ, ಯಾವಾಗ್ ನೋಡಿದ್ರೂ ಹಾಯ್ ಬೇಬೀ.... ಹೂಂ ಬೇಬೀ.... ಹೀಗೆ, ಇವ್ಳ ಈ ಬೇಬಿ ಕಾಟ ತಡೀಲಾರ್ದೇ ಯಾರಾದ್ರೂ ಇವ್ಳ ಬಾಯ್ಗೆ ಬೀಗ ಹಾಕ್ಬಾರ್ದಾ ಅಂತ ಕಾಯ್ತಿದ್ದೀನಿ". ಅಂತು.... ಇಷ್ಟೆಲ್ಲ ಕೇಳಿದ್ಮೇಲೆ ನನ್ನ ಗತೀನೇ ಇವ್ಳದ್ದೂ ನಾವಿಬ್ರೂ ಸಮಾನ ದುಃಖಿಗಳೂ ಅಂತ ಸ್ವಲ್ಪ ಸಮಾಧಾನವಾಯ್ತು.

ಅಷ್ಟೊತ್ಗೆ ಇಬ್ರಲ್ಲೂ ಶಕ್ತಿನೂ ತುಂಬ್ಕೊಂಡಿತ್ತು. ಅದನ್ನೇ ಕಾಯ್ತಿರೋರ್ ಹಾಗೇ ಇಬ್ರೂ ನಮ್ಮಿಬ್ರನ್ನ ತಗೊಂಡು ಬೇರೆ ಮಾಡಿದ್ರು. ಮತ್ತೆ ಇವಳ ಕೈಯಲ್ಲಿ ಸಿಕ್ಕು ನಲುಗುವ ಯೋಗ ನಂಗೆ. ನನ್ನನ್ನೇ ನೋಡ್ತ ಕೂತಳಿವಳು. ಸ್ವಲ್ಪ ಹೊತ್ತಾದ್ಮೇಲೆ ಏನೋ ವಾಸನೆ ಬಂದಂಗಾಯ್ತು ಇವ್ಳನ್ ನೋಡ್ತಾನೇ ಇದೀನಿ, ಎದ್ ಹೋಗಿ ನೋಡ್ತಾಳಾ ಅಂತ..... ಪುಣ್ಯಾತ್ಗಿತ್ತಿಗೆ ಅದರ ಕಡೆ ಗಮನವೇ ಇಲ್ಲ. ಹೊರಗೆ ಹೋದ ಅವಳ ಪತಿ ಒಳಗೆ ಬಂದವ್ನೇ ಅಡುಗೆ ಮನೆಗೆ ಹೋಗಿ, ಸ್ಟೌ ಮೇಲಿಟ್ಟಿದ್ದ ಹಾಲು ಕುದ್ದು, ಉಕ್ಕಿ ಪಾತ್ರೆ ಕರಕಾಲಿಗಿದ್ದನ್ನು ಕಂಡು ಹೊರಗೆ ಬಂದವನೇ ಇವಳಿಂದ ನನ್ನನ್ನು ಕಸಿದುಕೊಂಡ. ಏನ್ ಮಾಡ್ಬಿಡ್ತಾನೋ ಅಂತ ಭಯ ನಂಗೆ. ಆದ್ರೆ ಸುಮ್ನೆ ಪಕ್ಕದಲ್ಲಿಟ್ಟ. ಯಾಕಂದ್ರೆ ಮತ್ತೆ ಅವ್ನ ಜೇಬಿಗೇ ಕತ್ರಿ ಬೀಳುತ್ತೇಂತ ಗೊತ್ತಲ್ಲಾ.... ನಾನಂತೂ ಬಚಾವ್. ಚೆನ್ನಾಗಿ ಹೆಂಡತಿಗೆ ಬಯ್ದ. ನಂಗಂತೂ ಒಳಗೊಳಗೆ ತುಂಬಾ ಖುಷಿಯಾಯ್ತು. ಹಾಗೇ ಸ್ವಲ್ಪ ಹೊತ್ತು ಅಲ್ಲೇ ಪಿಳಿ ಪಿಳಿ ಅಂತ ಕಣ್ಬಿಟ್ಕೊಂಡು ಕೂತಿದ್ದೆ, ಒಂಥರಾ ಹಾಯಾಗಿತ್ತು. ಸೋಮಾರಿತನದಿಂದ ನಿದ್ದೆ ಬರೋಹಾಗಾಗ್ತಿತ್ತು. ಎಷ್ಟೊತ್ ನನ್ನ ಬಿಟ್ಟಿರಕ್ ಸಾಧ್ಯ ಅಲ್ವಾ ಅವ್ಳಿಗೆ. ನಿಧಾನವಾಗಿ ನನ್ನ ಹತ್ರ ಬಂದ್ಲು, ತಗೊಂಡ್ಲು, ನನಗೂ ಖುಷಿಯಾಯ್ತು, ಬೇಜಾರಾದ್ರೂ, ಖುಷಿಯಾದ್ರೂ ನಾನೇ ಬೇಕಲ್ವಾ ಇವ್ಳಿಗೆ ಅಂತ.... ಆದ್ರೆ ಆ ಸಂತಸ ಕ್ಷಣಿಕ ಅಂತ ಒಂದ್ ಹತ್ತು ನಿಮಿಷದಲ್ಲೇ ಅವಳ ಮುಖದ ಭಾವನೆಯಿಂದಲೇ ಗೊತ್ತಾಗೋಯ್ತು. ಗಂಡನ್ ಜೊತೆ ಚೆನ್ನಾಗಿ ಜಗಳ ಆಡ್ಕೊಂಡ್ ಬಂದಿರ್ಬೇಕು, ರಿಲ್ಯಾಕ್ಸ್ ಆಗೋಕ್ಕೋಸ್ಕರ ಯಾರೋ ಆನ್ಲೈನ್ ನಲ್ಲಿ ಕೊಟ್ಟ ಪದಬಂಧ ತುಂಬ್ತಿದ್ಲೂಂತ ಕಾಣುತ್ತೆ, ಆ ಪದಬಂಧದ ಶಬ್ದ ಗೊತ್ತಾಗಿಲ್ಲಾಂತ ತಲೆ ಬಿಸಿ ಮಾಡ್ಕೊಂಡು ನನ್ನ ಎಸೆದ್ಲು ನೋಡಿ ಗಿರಗಿರ ಅಂತ ತಿರುಗ್ತಾ ಬಿದ್ದೆ.... ಕೆಳಗೆ ದಿಂಬೂ ಇರ್ಲಿಲ್ಲ....ಯಾರಪ್ಪಾ ಅದೂ, ಸ್ವಲ್ಪ ಸುಲಭ ಕೊಡಬಾರ್ದಾ ಪದಬಂಧ, ನನ್ ಹಣೆಬರಹ, ಮುಗೀತು ನನ್ ಕಥೆ, ಅಮ್ಮಾ..... ಅಂತ ಕೂಗ್ತಾ ಇನ್ನೇನು ನನ್ನ ಮೈಮೂಳೆ ಎಲ್ಲಾ ಪುಡಿಪುಡಿ..... ಈ ಜನ್ಮದ ಅಂತ್ಯವಾಯ್ತು ಅಂತ ಯೋಚ್ಸಿ ದೇವ್ರೇ ಇನ್ಯಾವ ಜನ್ಮದಲ್ಲೂ ನನ್ನ ಮೊಬೈಲ್ ಆಗಿ ಹುಟ್ಟಿಸ್ಬೇಡಾ....ನನ್ನನ್ ಓನರ್ ಮಾಡಿ ಇವ್ಳನ್ ನನ್ ಮೊಬೈಲ್ ಮಾಡಪ್ಪಾ, ಸರಿಯಾಗಿ ಬುದ್ಧಿ ಕಲಿಸ್ತೀನಿ ಇವ್ಳಿಗೆ..... ಅಂತ ಜೋರಾಗಿ ಕಿರಿಚ್ತಾ ದೊಪ್ಪಂತ ಬಿದ್ಬಿಟ್ಟೆ, ಎಚ್ಚರಾಗಿ ನೋಡಿದ್ರೆ ಅಲ್ಲೇ....ಅ....ಲ್ಲೇ ಮಂಚದ್ ಕೆಳಗೆ ಇದ್ದೆ. ಇಷ್ಟೊತ್ತೂ ಆಗಿದ್ದೆಲ್ಲ ಬರೀ ಸವಿ(?) ಕನಸು ಕಣ್ರೀ..... ಅದೇನಾದ್ರೂ ನಿಜವಾಗಿದ್ರೆ ಅಂತ ಮೈಯೆಲ್ಲ ಹೆದರಿಕೆಯಿಂದ ಬೆವರಿ ಹೋಗಿತ್ತು. ನಡುಗುತ್ತಲೇ ಪಕ್ಕದಲ್ಲೇ ಇದ್ದ ನನ್ನ ಕಪ್ಪು ಸುಂದರಿಯನ್ನು ಅಕ್ಕರೆಯಿಂದ ಎತ್ತಿ ಮುದ್ದಿಸಿದೆ. ಸಾರಿ ಕಣೆ.... ಇನ್ನು ನಿನ್ನ ಚೆನ್ನಾಗಿ ನೋಡ್ಕೋತೀನಿ ಅಂದೆ.

ಅಯ್ಯೋ ಏನಾಯ್ತೂ? ಅಂತ ಕೇಳಿದ ಪತಿಗೆ ಏನಿಲ್ಲ ಚೂಡಿದಾರ್ ಬಿತ್ತೂ ಅಂದೆ. ಅದ್ ಬಿದ್ರೆ ಇಷ್ಟ್ ಶಬ್ದಾನಾ? ಅಂತ ಕೇಳಿದ್ದಕ್ಕೆ, ಅಯ್ಯೋ ಅದರೊಳಗೆ ನಾನಿದ್ದೆ ಕಣ್ರೀ.....ಅಂತ ಮೆಲ್ಲಗೆ ಹೇಳಿ, ಮೊಬೈಲ್ ನೋಡೋದ್ರಲ್ಲಿ ಮಗ್ನಳಾಗಿ ಬಿಟ್ಟೆ.

■

# ಪೇಪರ್ ದೆವ್ವ (ಮಕ್ಕಳಿಗಾಗಿ ಹಾಸ್ಯ ಕತೆ)

✍ಗುಂಡುರಾವ್ ದೇಸಾಯಿ

ರಾತ್ರಿ ಅನು ಒಮ್ಮಿಂದೊಮ್ಮೆಲೆ "ಇವತ್ತಿನ ಪೇಪರ್ ಎಲ್ಲಿ ಅದ?" ಎಂದ ಕೂಡಲೆ 'ದಿನಾ ಪೇಪರ್‌ನಲ್ಲಿ ಮುಖ್ಯವಾದ ವಿಷಯವನ್ನು ಟಿಕ್ ಮಾಡಿಟ್ಟು ಇದನ್ನು ಓದು ಎಂದರೆ ಓದದವಳು ಇವತ್ಯಾಕ ಮಗಳಿಗೆ ಪೇಪರೂ.....' ಎಂದು ಆಶ್ಚರ್ಯವಾಗಿ "ಯಾಕಮ್ಮ...ಏನಂತಹದು ವಿಶೇಷ ಇತ್ತು...ನಿಮ್ಮ ಶಾಲೆಯ ಕಾರ್ಯಕ್ರಮದ್ದು ಏನಾದರೂ ಬಂದಿದಿಯಾ?" ಎಂದ್ರು ಅಪ್ಪ.

"ಇಲ್ಲಪ್ಪ...ಎಲ್ಲೆದ ಹೇಳು?" ಎಂದಳು ಅನು.

"ಗೊತ್ತಿಲ್ಲಮ್ಮ, ವಾರದಿಂದ ಪೇಪರೇ ಬರತಾ ಇಲ್ಲ...ಅವ ಈ ಸಾರಿ ಬಿಲ್ ಕೊಡಲಿಕ್ಕೆ ಬರಲಿ...ದುಡ್ಡೆ ಕೊಡಲ್ಲ" ಎಂದ್ರು ಅಪ್ಪ.

"ಮೊನ್ನೆ ಅಂಗಳದಲ್ಲಿ ರಂಗೋಲಿ ಹಾಕುವಾಗ ಪೇಪರ್‌ನವನಿಗೆ ಕೇಳಿದೆ 'ಆಗಲೆ ಹಾಕಿ ಹೋಗಿದ್ದೆನಲ್ಲ ಆಂಟಿ' ಅಂದ" ಎಂದಳು ಅಮ್ಮ.

"ಓಹೋ...! ವಾರ ಆಯ್ತಲ್ಲ....! ಈಗ ಗೊತ್ತಾಯ್ತು , ಈಗ ಗೊತ್ತಾಯ್ತು ನನಗೆ...ಪೇಪರ್ ಎಲ್ಲಿ ಹೊರಟಿವೆ? ಅಂತ" ಎಂದು ಅನು ಅನ್ನುವಾಗ

ಮಧ್ಯ ಬಂದ ಸಮು "ಎಲ್ಲಿ...ದೆವ್ವ ಬಂದಿತ್ತಾ! ಒಯ್ಯೊಕೆ?"ಎಂದು ಕೇಳಿದ...

"ಅಯ್ಯಿ.. ಸಮ್ಮು ಎಷ್ಟು ಕರೆಕ್ಟ ಗೆಸ್ ಮಾಡಿದ್ದಿಯಲ್ಲಲೇ? ನಿಜ, ಪೇಪರ್ ದೆವ್ವ ಬಂದು ತೆಗೆದುಕೊಂಡು ಹೋಗುತ್ತಿದೆ?"ಎಂದ್ಲು.

"ಅಯ್ಯೊ....! ನಾನು ಬಾಯಿ ತಪ್ಪಿ ಹಾಗೆ ಅಂದೆ. ದೆವ್ವನಾ!" ಎಂದು ಅಂಜಿ ದೂರ ಸರಿದ ಸಮು.

"ಏನು ಹೇಳತಿಯ ನೇರವಾಗಿ ಹೇಳು. ಹಾಗೆಲ್ಲ ಜೋಕ್ ಮಾಡಬೇಡ" ಎಂದ್ರು ಅಪ್ಪ.

"ಅಪ್ಪಾ...ಈ ಸಮ್ಮು, ತಿಂಗಳಿನಿಂದ ಏನೂ ನಡಿಸ್ಯಾನ ಹೇಳು?"

"ಅಕ್ಕಾ..ನನಗೇನು ಗೊತ್ತಿಲ್ಲ..ದೆವ್ವಕ್ಕ ನನಗ ಸಂಬಂಧ ಕಟ್ಟಬೇಡಾ?"

"ಏ.. ಸಮ್ಮು, ನೀನು ಸುಮ್ನಿರೊ ಅಡ್ಡಬಾಯಿ ಹಾಕಬೇಡ" ಎಂದು ಹೇಳಿ "ಏನು..ನೀನ ಹೇಳು?" ಎಂದ್ರು ಅಪ್ಪ.

"ಗಾಳಿಪಟ ರೆಡಿಮಾಡೋದು....ಹಾರಿಸೋದು"

"ಹೌದು...! ಪೇಪರ್ ತೊಗೊಂಡು ಗಾಳಿಪಟಮಾಡಿ ಹಾರಸ್ತೀನಿ..ಅದಕ್ಕೇನಿಗ.....? ನೀನು ಹಾರಸ್ತೀಯಾ.....ನನ್ನ ಜೊತೆ ಫ್ಹೀ..ಫ್ಹಿ...ಫ್ಹಿ.." ಎಂದ ಅಣಕಿಸಿದ ಸಮು.

"ಹೌದಪ್ಪ, ಫ್ಹೀ..ಫ್ಹಿ...ಫ್ಹಿ.. ಅಂತ ಕಿಸಿಬ್ಯಾಡ...ಓಣಿಗಿನ ನಿನ್ನ ದೋಸ್ತರು ಏನು ಕೇಳತಾರ? ಹೇಳು"

"ಪೇಪರ್ ಕೇಳತಾರ"

"ನೀನು ಏನು ಮಾಡತಿ?"

"ಕೊಡತಿನಿ"

"ಅಜ್ಜಿ ಏನು ಮಾಡತಾಳ"

“ ಆಕಿ ಯಾವಾಗ ಚಂದ ಮಾತಾಡತಾಳ ಹೇಳು? ಮನಿ ಹಾಳಮಾಡತಿಯೊ.... ರಂಡೆಗಂಡ, ಸನ್ಯಾಸಿ” ಎಂದು ಬೈತಾಳ.

“ನೀನು ಮನೆಯಲ್ಲಿ ಇಲ್ಲದಾಗ ಏನು ಮಾಡತಾರ”

“ಏನು ಮಾಡತಾರ!”

“ಪೇಪರ ಕೊಡು ಅಜ್ಜಿ , ಆಂಟಿ, ಅಕ್ಕ ಅಂತ ಕೇಳತಾರ”

“ಹೌದು ನನಗೂ ಕೇಳಾಕ ಬಂದಾಗ ಕೊಟ್ಟೀನಿ” ಎಂದ್ರು ಅಪ್ಪ.

“ಕೊಟ್ರ ತಪ್ಪೇನದ? ಹೌದಲ್ಲಪ್ಪ....ನನ್ನ ಮಾತು ಸರಿ ಅದಲ್ಲ”

“ಹೌದಪ್ಪ ಸರಿ ಅದ” ಅಂದ್ರು ಅಪ್ಪ.

“ತಪ್ಪಿಲ್ಲ....ಆದರ ಅಜ್ಜಿದು ಕಾಟ ಅದಲ್ಲ” ಎಂದಳು ಅನು.

“ಆಕಿ ಯಾವಾಗಲೂ ಹಾಂಗ...ಮನೆಗಿರೊ ಸೈಕಲ್ ಪಂಪ್‌ಕೊಟ್ರು ಬೈತಾಳ. ನನ್ನ ಬ್ಯಾಟು ಕೊಟ್ರು ಬೈತಾಳ. ಅಪ್ಪಾ ಇನ್ನೊಬ್ಬರಿಗೆ ಸಹಾಯ ಮಾಡೋದು ತಪ್ಪಾ? ನೀವು ಹೇಳ್ತಿರ್‍ಲ್ಲೊ...ಒಳ್ಳೆದು ಮಾಡಬೇಕು ಅಂತ, ಶಾಲ್ಯಾಗೂ ಇದೆ ಹೇಳತಾರ” ಎಂದ ಸಮು.

“ಇಲ್ಲಪ್ಪ , ಸಹಾಯ ಮಾಡಬೇಕು”

“ಈ ಅಜ್ಜಿಗೆ ತೊಂಬತ್ತ ವರ್ಷ ಆಗಕ ಬಂತು, ಇನ್ನೂ ಬುದ್ಧಿ ಬರವಲ್ತು ಅಲ್ಲಪ್ಪ...ಕಾಗಿ ಮಾಡಿದಂಗೆ ಮಾಡತಾಳ...ಕೊಡಬೇಡ..ಕೊಡಬೇಡ ಅಂತಾಳ. ಸೈಕಲ್‌ಪಂಪು, ಬ್ಯಾಟು ತಾನು ತೆಗೆದುಕೊಂಡು ಏನು ಮಾಡತಾಳ...ತನ್ನ ಸೀರಿಬಟ್ಟೆ ಕೊಟ್ರೆ ಬಯ್ಯಬೇಕಪ...ನೀನು ನನಗೆ ತಂದ ವಸ್ತು ಅವು, ಅದಕೂ ಬೈತಾಳ” ಎಂದು ಆರೋಪಿಸಿದ ಸಮ್ಮು.

“ಇಲ್ಲಪ್ಪ.. ವಯಸ್ಸಾಗೇದ ಹಾಗೆಲ್ಲ ಮಾಡತಾಳ...ತಲೆಕೆಡಿಸಿಕೊಳ್ಳಬಾರದಪ್ಪ” ಎಂದ್ರು ಅಪ್ಪ.

“ಎಲ್ಲಾರ ಮನ್ಯಾಗ ಅಜ್ಜಿ ಇದ್ದಾರಪ್ಪ. ನಾನು ನೋಡತಿನಿ, ಹೋಗತೀನಿ...ಎಷ್ಟು ಪ್ರೀತಿ ಮಾಡತಾರ. ಈಕಿನಷ್ಟು ಕಿರಿಕಿರಿ ಮಾಡಲ್ಲ”ಎಂದಳು ಅನು.

“ಹೌದಪ..ಪಾಪ ಪೇಪರ ಕೇಳೊಕೆ ಬಂದ್ರೆ ಬಾಯಿ ಬಂದಂಗ ಬೈತಾಳ, ನಮ್ಮ ದೋಸ್ತರಿಗೆ ಹೊಲಸು ಹೊಲಸು ಮಾತಾಡತಾಳ... ‘ನೀವು ಬ್ರಾಂಬ್ರು..ನಿಮ್ಮ ಅಜ್ಜಿ ಹ್ಯಾಂಗ ಮಾತಾಡತಾಳಲೆ’ ಎಂದು ಕೇಳತಾರ..”ಎಂದ ಸಮು.

“ಹೌದಪ..ಮೊನ್ನೆ ನನ್ನ ಫ್ರೆಂಡ್ಸು ಮನಿಗೆ ಬಂದಾಗ ಎಷ್ಟು ಕಜೀಲ್ ಮಾಡಿ ಕಳಿಸಿದ್ಲು. ಅವರ ಮನಿಗೆ ಹೋದಾಗ ಏನೆಲ್ಲ ತಿಂದು ಬಂದಿರತೀನಿ. ಅವರ ಮನೆಯ ಅಜ್ಜಿಗಳು ಹಿಂಗ ಯಾರೂ ಮಾಡಲ್ಲ. ಎಷ್ಟು ನನ್ನ ಬಗ್ಗೆ ಆಡಿಕೊಂತಾರ ಗೊತ್ತಾ?” ಎಂದು ಮುಖ ಸಣ್ಣಗೆ ಮಾಡಿದಳು ಅನು.

“ಹೌದಮ....ಆಕೆಯ ಸ್ವಭಾವನ ಹಾಗೆ... ನನಗೂ ಯಾರನ್ನಾದರೂ ಊಟಕ್ಕೆ ಕರಿಲಿಕ್ಕೆ ಭಯ ಆಗತ್ತದ..ಅದು ಬಿಡಿ...ಏನೊ ದೆವ್ವದ ಬಗ್ಗೆ ಹೇಳ್ತಿದ್ರಲ್ಲ.. ಆ ದೆವ್ವದ ವಿಷಯಕ್ಕ ಬರ್‍ರಿ”

“ಅದೇ...ಪಾ..ಅವತ್ತು ಅಜ್ಜಿ ಓಣಿ ಹುಡುಗರಿಗೆ ಸಿಕ್ಕಹಾಗೆ ಬೈದು..ಜಗಳಾಡಿ ಉಪಾವಾಸ ಬಿದ್ದಗ ಏನು ಮಾಡಿದೆ...?”

"ಈ ಪೇಪರ್ ಕಾಲಾಗ ಒಳ್ಳೆ ಜಗಳ ಅಯ್ತಲ್ಲ.. ಎಂದು ಪೇಪರ್ ಕೊಟ್ಟು ಬಂದೆ"

"ಅಪ್ಪ, ಪೇಪರ್ ಸರಸ್ವತಿ ಅಂತ್ರಿ ಮಾರೋದು ತಪ್ಪಲ್ಲನು... ಕೊಟ್ರೆ ನೆನಸಿಕೊಂತ ದೋಸ್ತ್ರು ಪಟನಾದ್ರೂ ಮಾಡತಿದ್ರು" ಎಂದು ಮಾತು ಪೋಣಿಸಿದ ಸಮು.

"ಹಾಗಲ್ಲಪ..ನಾನೇನು ಮಾರಿಲ್ಲ..ಹಣ್ಣಿನ ಅಂಗಡಿ ಫ್ರೆಂಡಗೆ ಕೊಡತೀನಿ, ಪ್ಲಾಸ್ಟಿಕ್ ಬದಲು ಪೇಪರ್ ಬಳಸಲಿ ಅಂತ...ಅವನು ಅದಕ್ಕ ತಕ್ಕಂತ ಹಣ್ಣನ್ನು ಕೊಡತಾನ.."

"ಒಳ್ಳೆದಪ..ನಿನ್ನ ಆಲೋಚನೆನೂ. ಆದರ ಅವತ್ತು ನೀನು ಪೇಪರ್ ಒಯ್ಯೊದನ್ನು ನೋಡಿ...ಓಣಿ ಹುಡುಗರೆಲ್ಲ..ಗೊಳೋ ಅಂತ ಅಳಕತಿದವು"

"ಯಾಕೆ...?"

"ಗಾಳಿಪಟ ಮಾಡಕ ಪೇಪರ್ ಎಲ್ಲಿಂದ ತರೋಣ?" ಅಂತ

"ಅಯ್ಯೊ...! ಹಾಗಾ?"

"ನಿಮ್ಮಪ್ಪಗ ಹೇಳಲೆ ಎಂದು ಗಂಟು ಬಿದ್ದಿದ್ರು...ನೀನು ಸಿಟ್ಟಿನ್ಯಾಗ ಇದ್ದಿ; ಹೇಳಕೂ ಭಯ ಬಂತು"

"ಹೌದು ಸಮು...ಎರಡು ಮೂರು ದಿನದಿಂದ ಕೆಲ ಹುಡುಗರು ಕೇಳಿದವು... ಎಲ್ಲವನ್ನು ಅಂಗಡಿಗೆ ಕೊಟ್ಟೆ" ಅಂದೆ.

"ಎಲ್ಲರೂ ಅಜ್ಜಿ ಸಲುವಾಗಿಯೆ ಅಗಿದ್ದು ಎಂದು ಬೇಜಾರು ಮಾಡಿಕೊಂಡರು" ಎಂದ ಸಮ್ಮು

"ಅಪ್ಪ ದೆವ್ವ ಹುಟ್ಟಿದ್ದು ಇಲ್ಲೆ..." ಎಂದಳು ಅನು.

"ಎಲ್ಲಿ?" ಎಂದ ಅಪ್ಪ ಗಾಭರಿಯಿಂದ.

"ಏ...ಅಕ್ಕಾ ಸುಳ್ಳು ಸುಳ್ಳು ಏನೆಲ್ಲಾ ಹೇಳಬೇಡಾ....ನನ್ನ ಭಯ ಬೀಳಸಾಕ" ಎಂದು ಸಮು.

"ಪುಕ್ಕಾ...ಅಂಜು ಬುರುಕಾ?" ಎಂದು ನಕ್ಕು "ನಿನ್ನೆ ಬೆಳಿಗ್ಗೆ ಟ್ಯೂಷನ್ ಹೋಗಿ ಬರುತ್ತಿದ್ದೆನಾ? ಆವಾಗ ಒಂದು ಹುಡುಗ ನಮ್ಮ ಗೇಟಿನ ಮುಂದೆ ನಿಂತಿದ್ದ...ನಾನು ಬರೋದನ್ನು ನೋಡಿ ಓಡಿಹೋದ" ಎಂದಳು ಅನು.

"ಯಾಕೆ..?

"ಯಾಕೆ ಓಡಿದ? ಎಲ್ಲಿ ಹೋದ? ಅಂತ ನಾನು ನೋಡಿದೆ.....ದೂರದಲ್ಲಿ ನಿಂತಿದ್ದ ಅಟೋದೊಳಗೆ ಅಡಗಿ ಕುಳಿತಿದ್ದ, ಹೋಗಿ ಬಗ್ಗಿ ನೋಡಿದೆ..."

"ಅದೇ ಯಾಕೆ ಓಡಿಹೋದ?"

"ಅವನು ಪೇಪರ್‌ಹಿಡಿದುಕೊಂಡಿದ್ದ. ನನ್ನ ನೋಡಿ ಅಂಜಿದಂಗ ಕಂಡಿತು. ನೋಡಿದ್ರೂ ನೋಡಲಾರದಂಗ ಬಂದೆ..."

"ಹೋ...ಹೋ...ಹೀಗೊ ವಿಷಯ..ವಾರದಿಂದ ಯಾಕೆ ಪೇಪರ್ ಬರತಾ ಇಲ್ಲ ಅಂತ ತಲೆಕೆಡಸಿಕೊಂಡು ಸಾಕು ಸಾಕಾಗಿ ಹೋಯ್ತು..ಹಳೇ ಪೇಪರ್ ಹೋಗಲಿ. ಓದದೆ ಇರುವ ಪೇಪರ್ ತೆಗೆದುಕೊಂಡ್ರ ತಪ್ಪಲ್ಲೇನು? ನೀನು ಕೇಳಬೇಕಾಗಿತ್ತು?"

"ಹೌದಪ್ಪ ಅನಿಸ್ತು... ಆದರೆ ಅದು ನಮ್ಮದು ಪೇಪರ್ ಅಂತ ನನಗೆ ಹೇಗೆ ಗೊತ್ತಾಗಬೇಕು? ಒಮ್ಮೆಲೆ ಹಿಡಿದ್ರೆ ಆ ಹುಡುಗ ಅಂಜಿಕೊಂಡು ಓಡಿ ಹೋಗಲಿಕ್ಕೆ

ಹೋಗಿ ಏನಾದ್ರೂ ಮಾಡಿಕೊಂಡ್ರ...ಪಾಪ... ಅಲ್ಲವೆ..ಒಂದು ಪೇಪರ್ ಸಲುವಾಗಿ ಇಷ್ಟೆಲ್ಲಾ ರಾದ್ಧಾಂತ ಯಾಕ ಅಂತ ಬಿಟ್ಟೆ?" ಎಂದಳು ಅನು.

ಮಗಳ ಅಂತಃಕರಣದ ಮಾತುಗಳಿಗೆ ಖುಷಿಗೊಂಡು "ಇಲ್ಲ ನಾಳೆ ಆ ದೆವ್ವನ ರೆಡ್ ಹ್ಯಾಂಡ ಆಗಿ ಹಿಡಿಯೋಣ. ತಿಳುವಳಿಕೆ ಹೇಳಿದ್ರಾಯ್ತು" ಎಂದ್ರು ಅಪ್ಪ.

"ಬೇಡಪ ಪ್ಲೀಜ್... ಏನು ಮಾಡಬೇಡ. ಹಾಗೆ ಮಾಡಿದ್ರೆ ಅಂಜಿಕೋತಾರೆ"

"ಅಪ್ಪಾ...ಅವರಿಗೆ ಬೇಕಾಗಿದ್ದು ಪೇಪರ್...ನಿನಗೆ ಬೇಕಾಗಿದ್ದು ಓದಬೇಕಾದ ಪೇಪರ್..ಮನೆಯಲ್ಲಿದ್ದ ಪೇಪರನಲ್ಲಿ ಸ್ವಲ್ಪ ಪೇಪರು, ನಾಲ್ಕೈದು ಗಾಳಿಪಟಮಾಡಿ ಇಟ್ಟು ಬಿಡೋಣ, ನಾನೇ ಗಾಳಿಪಟ ಮಾಡ್ತೀನಿ"ಎಂದು ಸಮು.

"ಹೌದು, ಸಮು ಹೇಳಿದ ಐಡಿಯಾ ಒಳ್ಳೆಯದಿದೆ....ಅವರೆ ತಪ್ಪು ತಿದ್ದಿಕೊಳ್ಳು ಅವಕಾಶ ಕೊಟ್ಟ ಹಾಗಾಗುತ್ತದೆ. ಬೈದ್ರೆ ಬಡದ್ರೆ...ಮತ್ತೆ ಅವರಲ್ಲಿ ಕೆಟ್ಟದ್ದನ್ನು ಮಾಡಬೇಕನಿಸುತ್ತದೆ" ಎಂದಳು ಅನು.

ಮಕ್ಕಳ ಮಾತು ಹಿಡಿಸಿ "ಸರಿ...ನೀವು ಅಂದುಕೊಂಡ ಹಾಗೆ ಮಾಡಿ" ಎಂದರು ಅಪ್ಪ.

**********

ಬೆಳಿಗ್ಗೆ ಬೆಳಿಗ್ಗನೆ ಎದ್ದು ಕಂಪೌಂಡ್ ಮೇಲೆ ಹಳೇ ಪೇಪರ್, ಹಿಂದಿನ ರಾತ್ರಿ ಮಾಡಿಟ್ಟಿದ್ದ ಗಾಳಿಪಟ ಇಟ್ಟರು.

ಕಿಡಕಿಯಿಂದ ನೋಡತಾ ಕುಳಿತರು...ಪಕ್ಕದಮನೆ ಆಜಾನು ಆ ಕಡೆ ಓಣಿಯ ರಾಘು...ಮೂರ್ನಾಲ್ಕು ಹುಡುಗರು ಸರಿಯಾಗಿ ಪೇಪರ್ ಹುಡುಗ ಪತ್ರಿಕೆ ಗೇಟಿಗೆ ಇಟ್ಟು ಹೋದ ಕೂಡಲೆ, ಕಂಪೌಂಡನ ಹತ್ತಿರ ಪ್ರತ್ಯಕ್ಷ ಆದ್ರು.

"ನಿನ್ನೆ ಅಕ್ಕ ನೋಡಿ ಬಿಡುತ್ತಿದ್ದಲಲೇ..ಅಟೋದಾಗ ತೂರಿಕೊಂಡು ಬಿಟ್ಟಿದ್ದೆ... ಅದಕ ಇವತ್ತು ನಿಮ್ಮನ್ನೆಲ್ಲ ಕರಕೊಂಡು ಬಂದಿನಿ ಯಾವುದಕ್ಕೂ ಇರಲಿ ಎಂದು" ಎಂದ ರಾಘು.

"ಏನು ಮಾಡೋಣ ಈಗ" ಎಂದ ಆಜಾನು.

"ಏನಿಲ್ಲ...ಅವರಿಗೂ ಡೌಟ್ ಬಂದಿರತದ...ಹಿಡಿಯೋಕೆ ನೋಡುತಿರತಾರ.. ಮೆಲ್ಲಕ ಹೋಗಿ ಕೈ ಹಾಕತಿನಿ..ಯಾರದ್ರೂ ನೋಡಿದ್ರ...ಆಟ ಆಡುತಿರುವರಂಗ ನಾಟಕ ಮಾಡೋಣ" ಎಂದ ರಾಘು.

"ಭಾರಿ ಐಡಿಯಾ ಮಾಡಿರುವೆ, ಬಿಡಲೇ...ಅದಕ್ಕ ನಮ್ಮನ್ನ ಕರಿಸಿದ್ದೇನು?" ಎಂದ ಜೊತೆಗಿದ್ದ ಚಿಂಕು.

"ಹ್ಞಾಂ..ಮಗನ...ದಿನಾ ಅವನು ಕದ್ದುಕೊಂಡು ಯಾರಿಗೆ ಕೊಡತಾನ..? ನಮಗಲ್ಲ...ಮತ್ತೆ ಕೊಂಕು ಮಾತಾಡತಿ" ಎಂದ ಆಜಾನು.

"ಸ್ವಾರೆಪ...ನಡಿ....ಹೋಗೊಣ..ಅವನೊಬ್ಬನ ಯಾಕ ಸಿಗಬೇಕು...ಸಿಕ್ರ ಎಲ್ಲರೂ ಸಿಗೋಣ...ನಾಟಕ ಮಾಡಿ..ಮಾತು ಹೊಳ್ಳಿಸೋಣ"ಎಂದ ಚಿಂಕು.

ಎಲ್ಲರೂ ಬಂದು ಗೇಟಿನಲ್ಲಿ ಸಿಕ್ಕಿಸಿದ್ದ ಪೇಪರ್‌ಗೆ ಕೈ ಹಾಕಿದರು...

ಆಜಾನ್ "ತಡ್ರೊ.. ಅಲ್ಲಿ ನೋಡ್ರೋ...ಕಂಪೌಂಡ ಮೇಲೆ ....ಗಾಳಿ ಪಟ...ಪೇಪರ್

ಇವೆ.."

"ಮೆಲ್ಲಕಲೇ..ಹಿಂದ ಮುಂದ ನೋಡ್ರಿ...ಏನೋ ಮಸಲತ್ತು ಅದ" ಎಂದ ಚಿಂಕು.

" ಅಲ್ಲಿ ನೋಡು...ಯಾರ ಸುದ್ದಿ ಇಲ್ಲ...ಇನ್ನೂ ಮಲಗಿದಂಗಾರ, ಅಂಕಲ್ ನಮಗಾಗಿನ ಇದನ್ನು ಇಟ್ಟಿರಬೇಕು. ಅದನ್ನು ತೆಗೆದುಕೊಂಡು ಹೋಗೋಣ" ಅಂತ ರಾಘು ಅಂದ.

"ಇದನ್ನ ಏನು ಮಾಡಣಲೇ, ಇವತ್ತಿನ ಪೇಪರ್‌ನ್ನ.. ಅದನ್ನು ಹೆಗರಿಸಿ ಬಿಡೋಣ" ಎಂದ ಚಿಂಕು.

"ನಾವು ಕಳವು ಮಾಡುತ್ತಿರುವುದು ಗೊತ್ತಾಗಿದೆ. ನಮಗೆ ಬೈಯದೆ. ಹಿಡಿದು ಬಡಿಯದೆ...ಈ ರೀತಿ ಮಾಡಿದ್ದಾರೆ....ನಾವು ಹಾಗೆ ಮಾಡೋದು ಬೇಡ...ತಿಂಗಳಿಗೆ ಆಗುವಷ್ಟು ಪೇಪರ್ ಇಟ್ಟಾರ ಬರ್ರಿ" ಎಂದು ರಾಘು ಕರೆದ.

"ಹೌದು...ಇನ್ಮುಂದ ಅಂಕಲ್‌ದು ಓದದ ಪೇಪರ್ ಕದಿಯೋದು ಬೇಡ.. ಪೇಪರ್ ಬೇಕಾದ್ರ ಸಮುಗ ಹೇಳೋಣ, ವ್ಯವಸ್ಥೆ ಮಾಡತಾನ" ಎಂದು ಅಜಾನ್ ಹೇಳಿದಾಗ... "ಎಸ್......ಎಸ್" ಎಂದು ಎಲ್ಲರೂ ಗಾಳಿಪಟ, ಪೇಪರ್ ಹಿಡಿದು ಖುಷಿಯಿಂದ ಓಡಿದರು.

"ಅಕ್ಕ..ನೋಡಿದ್ಯಾ....ನಮ್ಮ ಪ್ಲಾನ್ ಸಕ್ಸಸ್..."ಎಂದ ಸಮು ಅಕ್ಕಗ ಶೇಕ್ ಹ್ಯಾಂಡ್ ಕೊಟ್ಟ.

ಅಪ್ಪಾ ಖುಷಿಯಿಂದ, ಹೊಸ ಪಾಠ ಕಲಿಸಿಕೊಟ್ಟ ಇಬ್ಬರನ್ನೂ ಮುದ್ದಾಡಿದ. ■




**5 ವರ್ಷದ ಹಿಂದೆ ಬಂದಿದ್ದು ನೆನಪು..!ಆಗ ಬಂದವರು, ಮತ್ತೇ ಇವಾಗಲೇ ನೋಡ್ತಾ ಇರೋದು ತಮ್ಮನ್ನ....!!!?**

# ಜಾಮ್ ಜಾಮ್

ಕ್ಷಮೇಶ್ವರ


ನೋಡಿ ಮುಂಚೆ ಎಲ್ಲ ಹಣ್ಣಿನ ರಸದ ತಿರುಳಿನ ಒಂದು ಪದಾರ್ಥ ಅಂದರೆ ಜಾಮ್ ಸಿಗುತ್ತಿದ್ದುದು ಒಂದೇ ಹೆಸರಿನಲ್ಲಿ. ಅದುವೇ ಕಿಸಾನ್ ಜಾಮ್. ಇದ್ಯಾಕೆ ಈ ಹೆಸರು ಬಂತೋ ಗೊತ್ತಿಲ್ಲ. ನಮ್ಮ ರಾಷ್ಟ್ರ ಭಾಷೆಯಲ್ಲಿ ಕಿಸಾನ್ ಅಂದರೆ ನಮಗಳ ಬೆನ್ನೆಲುಬು ಅನಿಸಿಕೊಳ್ಳುವ ರೈತ. ಅಂತೂ ನಮ್ಮೆಲ್ಲರ ಮನೆ ಮನೆಯ ಕಿಸಾನ್ ಜಾಮ್ ಮತ್ತು ಸಾಸ್, ಜಾಮ್ ಜಾಮ್ ಎನ್ನುತ್ತ ನಮ್ಮೆಲ್ಲ ರಸನವನ್ನು ಈಗಲೂ ತಣಿಸುತ್ತಿದೆ.. ಆಗೆಲ್ಲ ಬೆಂಗಳೂರಿನ ಆ ಫ್ಯಾಕ್ಟರಿ ಬಳಿ ಬಂದರೆ ಗಮ್ ಅಂತ ವಾಸನೆ ಬರುತ್ತಿತ್ತು. ಅಲ್ಲಿ ಮೂಗು ತೂರಿಸಿದರೆ, ಕೊಳೆತ ವಾಸನೆಯ ಟೊಮ್ಯಾಟೊಗಳ ರಾಶಿ ಹೊತ್ತ ಲಾರಿಗಳು. ಅದೇನೋ ಜಾಮ್ ಆದ ಮೇಲೆ ಅದರ ರುಚಿಯೇ ಬೇರೆ. ಆಗ ಊರಿಗೊಬ್ಬೇ ಪದ್ಮಾವತಿ ಎಂಬಂತೆ ಅವಳೇ ರಸನದ ರಾಣಿ. . ಈಗ ಎಂಕ, ನೊಣ, ಶೀನ ಅಲ್ಲ ಊರು ತುಂಬೆಲ್ಲಾ ಎನ್ನುವಂತೆ ಹತ್ತು ಹಲವು ಹೆಸರಿನ ಜಾಮ್‌ಗಳು ಮತ್ತು ಸಾಸ್ (ಬಹೂ ಇಲ್ಲ) ಗಳು ನಮ್ಮ ಮುಂದೆಯೇ ಕುಣಿದಾಡುತ್ತವೆ. ಅದಕ್ಕೆ ಸರಿಯಾಗಿ ಬಣ್ಣ ಬಣ್ಣದ ಜಾಹೀರಾತುಗಳು ಬೇರೆ. ಈಗಂತೂ ಅನೇಕ ಪ್ರಾಣಿಗಳೂ ಸಹ ಆ ಪದಾರ್ಥದ ಜಾಹೀರಾತಿನಲ್ಲಿ ಭಾಗವಹಿಸಿ ತೃಪ್ತಿ ಪಟ್ಟುಕೊಂಡಿವೆ ಇವಲ್ಲದೇ ವಿದೇಶೀಯವೂ ನಾವೇನು ಕಮ್ಮಿ ಎಂಬಂತೆ ಸೆಡ್ಡು ಹೊಡೆದು ದೊಡ್ಡ ಅಂಗಡಿಗಳಲ್ಲಿ ತಮ್ಮದೇ ಭಂಗಿಯಲ್ಲಿ ನಿಂತಿರುತ್ತವೆ. ಇವುಗಳ ಜೊತೆಗೆ ಚೀನೀ ಜಾಮ್ ಮತ್ತು ಸಾಸ್ ಗಳು ಬೇರೆ. ಕೆಲವು ತಿಂಗಳುಗಳ ಹಿಂದೆ ಚೀನೀ ಅಂದರೆ ಛೀ ಛೀ ಅಂತ ಮೂಗು ಮುರಿಯುತ್ತಿದ್ದ ನಾವು ಈಗ ಅದೇ ನಮಗೆ ಪರದೈವ ಎಂಬಂತೆ ಬಂದು ನಿಂತಿವೆ. ಇಷ್ಟು ಜಾಮ್ ಕಥೆಯಾಯಿತು. ಇಲ್ಲಿ ಇನ್ನೊಂದು ಜಾವ್ ಬಗ್ಗೆ ಹೇಳಿದರೆ ಉಳಿದ ಜಾವ್‌ಗಳಿಗೆಲ್ಲ ಸಮಾಧಾನವಾಗುತ್ತದೆ. ಅದೇನೆಂದು ಊಹೆ ಮಾಡ ಬಲ್ಲಿರಾ? ಬೇಡ ಬಿಡಿ ನಿಮಗ್ಯಾಕೆ ಆ ರೀತಿ ತಲೆ ತುರಿಸಿಕೊಳ್ಳುವ ಫಜೀತಿ. ನಾನೇ ಹೇಳಿ ಬಿಡುತ್ತೇನೆ. ಅದು 'ಟ್ರಾಫಿಕ್ ಜಾಮ್'.

ಈ ಟ್ರಾಫಿಕ್ ಜಾಮ್ ನಮ್ಮ ನಗರಗಳಲ್ಲಿ ಇರದ ಸ್ಥಳವೇ ಇಲ್ಲ. ಇದರ ಸುಖ ಅನುಭವಿಸಿದವರಿಗೇ ಗೊತ್ತು. ಕೆಂಪು ದೀಪ ಹೊತ್ತಿದೊಡನೇ ಗಕ್ಕನೆ ಚಾಲನೆಗೆ ಬ್ರೇಕ್. ಹಸಿರು ಬಂದೊಡನೆ ವಾಹನಗಳ ಹಾರನ್ ಗಳ ಬ್ರೇಕಿಂಗ್ ಕರ್ಣ ಕಠೋರ. ಹಿಂದಿ ನಗೆ ನಟ ಜಾನಿ ಲೀವರ್ ರವರು ಈ ಟ್ರಾಫಿಕ್ ಜಾಮ್ ಬಗ್ಗೆ ಹೀಗೆ ಹೇಳಿ ನಮ್ಮನ್ನು ನಗಿಸುತ್ತಾರೆ. ಅದೂ ನಮ್ಮ ಬಣ್ಣದ ನಗರಿ ಮುಂಬೈ. ಆಗೆಲ್ಲ ಇಂತಹ ಟ್ರಾಫಿಕ್ ಜಾಮ್‌ನಲ್ಲಿ ಕಡ್ಲೆಕಾಯಿ ಕಡ್ಲೆಕಾಯಿ ಅಂತ ಬುಟ್ಟಿ ಹೊತ್ತು ಅಲ್ಲಿ ಕಾಯುತ್ತಿದ್ದವರಿಗೆ ಮಾರುತ್ತಿದ್ದರಂತೆ. ಈಗ ಇದರ ಪರಿಸ್ಥಿತಿ ಹೇಗೆಂದರೆ, ಅಲ್ಲಿ ಕಾಯುತ್ತಿರುವವರಿಗೆ ಪಿಜ್ಜಾ, ಬರ್ಗರ್ ಆರ್ಡರ್ ತಗೊಂಡು ಸಪ್ಲೈ ಮಾಡ್ತಾರಂತೆ. ಇದು ಮುಂಬೈ ರಸ್ತೆಗಳ ಗತಿ. ನಮ್ಮಲ್ಲೂ ಇದೇ ರೀತಿ ಮುಂದೊಮ್ಮೆ ಅಲ್ಲೇ ಬಾಳೆಲೆ ಊಟ ಕೂಡ ದೊರೆಯಬಹುದೇನೋ. ಬಲ್ಲವನೇ ಬಲ್ಲ ಉಂಬುವ ಸವಿಯ ಅಲ್ಲವೇ !!

ಜಾನಿ ಲೀವರ್ ರವರೇ ಇನ್ನೊಂದು ಟ್ರಾಫಿಕ್ ಜಾಮ್ ಬಗ್ಗೆ ಹೇಳ್ತಾರೆ. ಅದು ಮುಂಬೈನ ಛತ್ರಪತಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ (ಒಲವಿನ ನಿಲ್ದಾಣ

ಬೇಕಾದವರಿಗೆ). ಆ ನಿಲ್ದಾಣದ ಹತ್ತಿರದಲ್ಲೇ ಟ್ರಾಫಿಕ್ ಜಾಮ್ ಆಗುತ್ತಿರುತ್ತಂತೆ. ಅದು ಅಲ್ಲಿಂದ ಮುಂದೆ ಗಗನಯಾನ ಮಾಡುವವರಿಗೆ ಬಿಸಿ ಬಿಸಿ ಕಜ್ಜಾಯದಂತೆ. ಅದಕ್ಕೊಬ್ಬ ಒಂದು ಸೊಲ್ಯೂಷನ್ ಕೊಟ್ಟ. ಅಂದರೆ ತೀರ್ಥವಲ್ಲ, ಟಾನಿಕ್ ಮೊದಲೇ ಅಲ್ಲ.  ಬದಲಿಗೆ ಅವರು ಸುಲಭವಾಗಿ ಅಡೆ ತಡೆಯಿಲ್ಲದೇ ವಿಮಾನ ನಿಲ್ದಾಣ ಸೇರುವ ಹಾದಿ. ಅದೇನೆಂದರೆ, ಅವರುಗಳನ್ನು ಪಕ್ಕದ ದೊಡ್ಡ ಮೋರಿಯಲ್ಲಿ ಲೀಲಾಜಾಲವಾಗಿ ತೇಲಿಸಿ  ಸಾಗಿಸುವುದು. ತೇಲಿಸೋ ಇಲ್ಲ ಮುಳುಗಿಸೋ ಅಂತ ಅವನಿಗೆ ಕೈ ಮುಗಿದರೆ ಸಾಕು ಅದು ನೇರ ವಿಮಾನ ನಿಲ್ದಾಣದ ಬಾಗಿಲಿಗೆ ತಲುಪುವಂತೆ. ಅದರಲ್ಲಿಳಿದರೆ, ಅವರುಗಳು ಪೂಸಿಕೊಂಡಿರುವ ಘಮ ಘಮ ಸೆಂಟುಗಳ ಘಮತ್ವ ಏನಾಗಬೇಕು.. ಆ ಬ್ರೋಕರ್ ಅದಕ್ಕೂ ಪರಿಹಾರ ಇದೆಯೆಂದ. ಅದೇನೆಂದರೆ ಎಲ್ಲರಿಗೂ ಅಡಿಯಿಂದ ಮುಡಿಯವರೆಗೂ ಮುಚ್ಚುವ ಪ್ಲಾಸ್ಟಿಕ್ ಉಡುಗೆ ಕೊಡುತ್ತಾನಂತೆ. ಅಫ್ ಕೋರ್ಸ್ ಅದಕ್ಕೆ ಸುಂಕ ಕಟ್ಟಲೇ ಬೇಕು. ಬ್ರೋಕರೇಜ್ ಅಂತಾದರೂ ಅನ್ನಿ ಕಸ್ಟಮ್ಸ್ ಡ್ಯೂಟಿ ಅಂತಾದರೂ ಅನ್ನಿ ಅದಂತೂ ಕಸ್ಟಮರಿ ಕೊಡಲೇ ಬೇಕು !! ಇಲ್ಲದಿದ್ದರೆ ಸಲಹೆಗೆ ಬೆಲೆ ಎಲ್ಲಿ?

■



## ಏನಕೇನ್.....

**✍ವೈ.ಎಂ. ರಘುನಂದನ್**

ಲಿಮ್ಕ ಬುಕ್ ಆಫ್ ರಿಕಾರ್ಡ, ಗಿನ್ನೀಸ್ ಬುಕ್ ಆಫ್ ರೆಕಾರ್ಡ... ಅನೇಕ ದಾಖಲೆಗಳನ್ನು ಪರಿಶೀಲಿಸಿ ನೋಡಿ, ತರಾವರಿ ಕಲೆ/ಪ್ರದರ್ಶನಗಳನ್ನ ಪ್ರತಿಭೆಗಳನ್ನ ತೋರಿ, ಹೆಸರುಗಳಿಸಿ, ಪ್ರಸಿದ್ದರಾಗಿರುವವರ ದೊಡ್ಡ ಪಟ್ಟಿಸಿಗುತ್ತದೆ, ಅಚ್ಚರಿ ಮೂಡಿಸುವ ಸಾಧನೆಗಳು ತಿಳಿಯುತ್ತದೆ. ಕೆಲವು ಸಲ 'ಪಂಚತಂತ್ರ' ಆಧಾರಿತ ಉಪಾಯ ರೂಢಿಸಿಕೊಂಡು, ಪ್ರಸಿದ್ದರಾದವರೂ ಇದ್ದಾರೆ. ಸಾಮ, ಧಾನ, ಭೇದ ಮತ್ತು ದಂಡ ಎಂಬ ಚರ್ತುರೋಪಾಯಗಳೂ ಇವೆ. ಅದರಲ್ಲಿ ಭೇದೋಪಾಯ ಬಹಳ ಆಕರ್ಷಕವಾಗಿದೆ, ಹಾಸ್ಯ ಪ್ರಜ್ಞೆ ಉಳ್ಳವರಿಗೆ ಇದು ಸಹಾಯಕಾರಿ.

'ಕೊರವಂಜಿ' ಕಾಡಿಗೆ ಹೋಗುವ ಮುನ್ನ ಊರಲ್ಲೇ ಇದ್ದ ಕಾಲ, ಕಡಿಮೆ ಬೆಲೆ ಉತ್ತಮ ಹಾಸ್ಯದ ರಸದೂಟ ಇಕ್ಕುತ್ತಿದ್ದ ಕಾಲ, ಅದರಲ್ಲಿ ನಾನಾ ತರಹ ನಳಪಾಕ ಮೂಡಿ, ಉಣ ಬಡಿಸುತ್ತಿದ್ದ ಹಿರಿಯರಲ್ಲಿ ನಾ. ಕಸ್ತೂರಿಯೂ ಒಬ್ಬರು. ಕೆಲಸಕ್ಕೆ ಸೇರಿದ ಮೇಲೆ, ಅದೂ ಸರ್ಕಾರಿ ಕೆಲಸಕ್ಕೆ ಸೇರಿದ ಮೇಲೆ, ಒಂದು ನಿವೃತ್ತಿ ದಿನಾಂಕ ಇರುತ್ತದೆ ಎಳೆಗರೂ ಎತ್ತಾಗದೇ... ಆಗುವಂತೆ, ನಿವೃತ್ತಿ ದಿನ ನಾ. ಕಸ್ತೂರಿ ಅವರಿಗೂ ಆಗಿತ್ತು.

ದೊಡ್ಡ ಕುಟುಂಬ, ಖರ್ಚು ಜಾಸ್ತಿ, ಬರುತ್ತಿದ್ದ ಸಂಭಳ ನಿಂತಿತು, ಬೇರೆ ಬೇರೆ ಕಡೆ ಕೆಲಸ ಮಾಡುತ್ತ ದಿನಗಳನ್ನು ದೂಡಿದ್ದರು, ಪೆನ್‌ಶನ್ ಹಣ, ಗ್ರಾಚುಯಿಟಿ, ಪಿ.ಎಫ್ (ಪ್ರಾವಿಡೆಂಟ್ ಫಂಡ್) ಮುಂತಾದವು ಬರಲು ಆಗ ವರ್ಷದ ಮೇಲೆ ಆಗುತ್ತಿತ್ತಂತೆ, ಈಗ ಹಾಗಿಲ್ಲ ನಿವೃತ್ತಿ ದಿನವೇ ಎಲ್ಲಾ ನಿಗದಿಪಡಿಸಿ ಚೆಕ್ ಕೊಡುತ್ತಾರೆ, ಹೀಗಾಗಿ ನಿವೃತ್ತಿ ಹಣಕ್ಕಾಗಿ ನಾಲ್ಕಾರು ಬಾರಿ ಯೂನಿವರ್ಸಿಟಿ ಕಛೇರಿಗೆ ಹೋಗಿ ಬಂದರೂ ಫಲ ಸಿಕ್ಕಲಿಲ್ಲ, ಆಗ ಅವರ ಹಾಸ್ಯ ಪ್ರಜ್ಞೆ ಭೇದೋಪಾಯ ಅನುಸರಿಸಲು ಪ್ರೇರೆಪಿಸಿತ್ತು. ಒಂದು ಶುಭ ದಿನ ಕೈಯಲ್ಲಿ ಒಂದು ಮನವಿ ಪತ್ರ ತಯಾರಿಸಿ ಹಿಡಿದುಕೊಂಡು ರಿಜಿಸ್ಟ್ರಾರ್ ಮುಂದೆ ಹೋದರಂತೆ ಎಲ್ಲರಿಗೂ ನಾ. ಕಸ್ತೂರಿ ಅಂದರೆ ಪ್ರೀತಿ, ಗೌರವ, ಆದರದಿಂದ ಬರಮಾಡಿಕೊಂಡು, ಕೂಡಿಸಿ ಕ್ಷೇಮ ಸಮಾಚಾರ ವಿಚಾರಿಸಿದರಂತೆ, ನಂತರ 'ತಾವು ತಂದಿದ್ದ ಮನವಿ ಪತ್ರ ತೋರಿಸುತ್ತ 'ನೋಡಿ ಸಾರ್, ಇದನ್ನ ಪೇಪರ್‌ನಲ್ಲಿ ಪ್ರಕಟಣೆಗೆ ಕೊಡೋಣ ಅಂತ ಬಂದಿದ್ದೇನೆ'-ಅಂತ ತೋರಿಸಿದರಂತೆ. 'ನನ್ನ ಪ್ರೀತಿಯ ವಿದ್ಯಾರ್ಥಿಗಳೇ.... ನನಗೆ ನಿವೃತ್ತಿಯಾಗಿ ಐದಾರು ತಿಂಗಳು ಆಗಿದೆ, ಬರಬೇಕಾದ ನಿವೃತ್ತಿ ವೇತನ, ಗ್ರಾಚುಯಿಟಿ, ಪ್ರಾವಿಡೆಂಟ್ ಫಂಡ್ ಎಲ್ಲಾ ಸೇರಿ ಸುಮಾರು... ಹಣ ಬಾಕಿ ಇದೆ, ನೀವುಗಳು ಕೈಲಾದಷ್ಟು ಸಾಲ ಕೊಟ್ಟಲ್ಲಿ..... ಹಣ ಬಂದ ತಕ್ಷಣ ಹಿಂದಿರುಗಿಸುತ್ತೇನೆ...' ಎಂಬ ಒಕ್ಕಣೆ.

ರಿಜಿಸ್ಟ್ರಾರ್ ಹೌಹಾರಿ 'ಬೇಡಿ ಸಾರ್, ನನಗೆ ಹತ್ತು ದಿನ ಸಮಯ ಕೋಡಿ, ಎಲ್ಲಾ ಸೆಟಲ್ ಮಾಡಿಸಿಕೊಡುತ್ತೇನೆ' ಅಂದರಂತೆ, ನುಡಿದಂತೆ ನಡದ ಅವರು ಒಂದು ವಾರದಲ್ಲೇ ಎಲ್ಲಾ ತರಿಸಿ ಚುಕ್ತ ಮಾಡಿದ್ದರಂತೆ, ಇಂತಹ ಭೇದೋಪಾಯ ಹಾಸ್ಯ ಪ್ರಜ್ಞೆ ವ್ಯಕ್ತಿಗಳಿಂದ ಮಾತ್ರ ಸಾಧ್ಯ. ನನ್ನ ತಂದೆ ಅವರಿಗೆ ಆಗ ಎಲ್.ಐ.ಸಿ ಯಿಂದ ಬರಬೇಕಿದ್ದ ಹಣ ಹೀಗೆ ಐದಾರು ತಿಂಗಳಾಗಿದ್ದರೂ ಬಂದಿರಲಿಲ್ಲ, ಒಂದು ದಿನ ಕಛೇರಿಗೆ ಹೋಗಿ ಅಲ್ಲಿನ ಸೆಟ್ರಲ್ ಮೆಂಟಿನ ಅಧಿಕಾರಿಗೆ ಅರ್ಜಿಕೊಟ್ಟಿದ್ದರಂತೆ

ಸ್ವೀಕೃತಿ ಪಡೆದು! ಅದರ ಸಾರಾಂಶ 'ಈಗಾಗಲೇ ನನಗೆ 61 ವರ್ಷ, ನನ್ನ ಪತ್ನಿ ಸತ್ತು ಐದು ವರ್ಷ ಆಗಿದೆ, ಮಗನಿಗೆ 40 ವರ್ಷ ನಾಮಿನಿ ಮಾಡಿದ್ದೀನಿ, ನನಗೆ ಬರುವ ಹಣ ಯಾವಾಗ ಬರುತ್ತದೋ ಗೊತ್ತಿಲ್ಲದ ಕಾರಣ, ಮೊಮ್ಮಗನಿಗೆ ನಾಮಿನಿ ಮಾಡುತ್ತಿದ್ದೇನೆ, ಅವನ ಕಾಲದಲ್ಲೂ ಸೆಟಲ್ ಆಗದೇ ಹೋದಲ್ಲಿ ಇರಲಿ ಎಂದು ಮೈನರ್ ಮರಿ ಮಗನಿಗೆ ನಾಮಿನಿ ಮಾಡಿ ಅವನ ತಾಯಿಯನ್ನ ಗಾರ್ಡಿಯನ ಆಗಿ ಮಾಡುತ್ತಿದ್ದೇನೆ....' ವಗೈರೆ, ಅಧಿಕಾರಿಗಳು ಬೇರೆ ಸಬೂಬು ಹೇಳದೆ ವಾರದಲ್ಲಿ ಬರಬೇಕಿದ್ದ ಹಣವನ್ನು ತರಿಸಿಕೊಟ್ಟಿದ್ದರೆಂದು ಬೇರೆ ತಿಳಸಬೇಕಿಲ್ಲ!

ಬಾಲ್ಯದಲ್ಲಿ ನಾನು ಪೀಚು, ನನ್ನ ಸ್ನೇಹಿತರೆಲ್ಲ ಒಳ್ಳೆ ಕಟ್ಟು ಮಸ್ತಾಗಿದ್ದವರು, ಹಾಗಾಗಿ ಆಟದಲ್ಲಿ ನನನ್ನು ಅವರ ಸಹಾಯಕನನ್ನಾಗಿ ದುಡಿಸಿಕೊಳ್ಳುತ್ತಿದ್ದರು ಆಟಕ್ಕುಂಟು, ಲೆಖ್ಖಕ್ಕಿಲ್ಲ, ಹೆಚ್ಚಿಗೆ ಕೇಳಿದರೆ ಐಯಂಗಾರ್, ಲೀಡರ್ ಬೈದ್ ಹೆದರಿಸುತ್ತಿದ್ದ, ವೀರಬಾಹು ಅಂತಿದ್ದ, 'ಪುಳಿಯೋಗರೆ–ಸಕ್ಕರೆ ಪೊಂಗಲ್ ಪ್ರಾಡಕ್ಟ್' ನನ್ನನ್ನ ನಡುಗಿಸಿ ಬಿಡುತ್ತಿದ್ದ.

ಅದೊಂದು ವಾರ, ಬರೀ, ಫೀಲ್ಡಿಂಗ್, ಚೆಂಡು ತಂದು ಕೊಡುವುದರಲ್ಲೇ ಕಳೆದು ಹೋಗಿತ್ತು, ಆಟದ ಕೊನೇಯಲ್ಲಿ ಒಂದು ಓವರ್ ಆಡಲು ಕೊಡುತ್ತಿದ್ದ ಚಾನ್ಸೂ ಕೊಟ್ಟಿರಲಿಲ್ಲ, ಧ್ವನಿ ಯೇರಿಸಿ ಕೇಳುವ ಧೈರ್ಯ ಮಾಡಿದ್ದೆ, ಮೊದಲೇ ಹೈಸ್ಕೂಲ್ ಡ್ರಾಪ್ ಔಟು, ನಮ್ಮ ಐಯಂಗಾರ್ ಲೀಡರ್, ಈಗ ಆಟದಲ್ಲಿ ಸತತವಾಗಿ ಎರಡು ದಿನ ಸೋತ ಬೇಸರ, ನನ್ನ ಪಿರಿಪಿರಿಕಂಡು ಅಟ್ಟಾಡಿಸಿಕೊಂಡು ಬಂದು ಹೊಡೆದಿದ್ದ, ಆಗ ಪಂಚತಂತ್ರ ಪ್ರಿಯನಾದ ನಾನು ಕರಟಕ/ಡಮನಕರಂತೆ, ಭೇದೊಪಾಯದ ಮಾರ್ಗ ಹಿಡಿದಿದ್ದೆ–ಸೇಡು ತೀರಿಸಿಕೊಳ್ಳಲು.

ಅಂಗಡಿಗೆ ಹೋಗಿ 2 ಸಿಗರೇಟು ಕೊಂಡು ಅದನ್ನು ಒಂದು ಖಾಲಿ ಪ್ಯಾಕಲ್ಲಿ ಇಟ್ಟೆ, ಮನೇಲಿ ಒಂದೆರಡು ಕಡ್ಡಿಯಿದ್ದ ಬೆಂಕಿ ಪೊಟ್ಟಣ ತೆಗೆದುಕೊಂಡೆ, ಸೀದ ಐಯಂಗಾರ್ ಮಿತ್ರ ಇಲ್ಲದ್ದು ಖಚಿತ ಪಡಿಸಿಕೊಂಡು 'ಅವನ ಹೆಸರನ್ನು' ಅವರ ಮನೆಗೆ ಹೋಗಿ ಕೋಗಿದ್ದೆ, 'ಯಾರಡಾ... ಎನ್ನ ವೇಣು' ಅಂತೇನೋ ಕೇಳ್ತ, ಕೋಪದಿಂದಲೇ ನನ್ನ ಲೀಡರ್ ತಂದೆ ಬಂದಿದ್ದರು ಹೊರಗೆ, ನನಗೆ ತಮಿಳು ಬರಲ್ಲ.

'ಸಾರ್ ನಿಮ್ಮ ಮಗ ಇಟ್ಟುಕೊಂಡಿರು, ಹೋಗ್ತಾ ಇಸ್ಕೋತಿನಿ ಅಂತ ಇದನ್ನು ಕೊಟ್ಟಿದ್ದ ನಿನ್ನೆ... ಆಟ ಮುಗಿಸಿ ಹಾಗೇ ಮರೆತು ಹೋಗಿದ್ದ ಬಂದರೆ ಕೊಟ್ಟು ಬಿಡಿ ಅಂತ' –ಸಿಗರೇಟು ಪ್ಯಾಕು, ಕಡ್ಡಿಪೆಟ್ಟಿಗೆ ಕೊಟ್ಟು ಬಂದಿದ್ದೆ, ಮುಂದಿನದು ನೀವೇ ಊಹಿಸಿ, ನಮ್ಮ ಐಯಂಗಾರ್ ಲೀಡರ್‌ಗೆ ಪುತ್ತೂರು ಬೋನ್ ಸೆಂಟರ್ ಬಳಿ ಅತಿಥಿ ಆಗಿ ಒಂದು ಕೈ, ಒಂದು ಕಾಲು ಮೂಳೆ ಮುರಿದಿದ್ದರಿಂದ, ಬ್ಯಾಂಡೇಜ್ ಆಗಿತ್ತು. ಏನಕೇನ ಉಪಾಯದಿಂದ, ಕೆಲವೊಮ್ಮೆ ಕಾರ್ಯ ಸಾಧಿಸಿಕೊಳ್ಳಬೇಕಾಗುತ್ತೆ.

■

**ಉತ್ತರಭೂಪ**

**ಪ್ರಶ್ನೆ – ವಿಧಿಯ ಕಾಟದಿಂದ ಶಿವನು ಚರ್ಮವನ್ನು ಹೊದಿಯಬೇಕಾಯಿತು, ಕೃಷ್ಣ ದನ ಕಾಯಬೇಕಾಯಿತು ನಿಮಗೇನಾಯಿತು?**

**ಉತ್ತರ – ನಿಮ್ಮ ಪ್ರಶ್ನೆಗೆ ಉತ್ತರ ಹೇಳಬೇಕಾಯಿತು**

# ವಿಲೇವಾರಿ ವರಿ...

**ಶಂಸ ಐತಾಳ**

ತಮ್ಮ 40 ವರ್ಷಗಳ ಸುದೀರ್ಘ ಸರ್ವೀಸಿನಲ್ಲಿ ಎಂದೂ ಕಾಣದ ಸಮಸ್ಯೆಯೊಂದು ಧುತ್ತೆಂದು ಎದುರಾದಾಗ ವಿಶ್ರಾಂತ ಪ್ರೋ॥ ಕೋದಂಡಪಾಣಿ ಎಂಬ (ಹಿಂದಿ), ಎಂ.ಎ (ಕನ್ನಡ) ಪಿ.ಎಚ್.ಡಿ ಅವರಿಗೆ ಏನು ಮಾಡುವುದೆಂದೇ ತೋಚದಂತಾಯಿತು, ಅವರು ಕರ್ತವ್ಯತಾ ವಿಮೂಢರಾದರು. ಹೌದು ಇದೇ ಸಮಸ್ಯೆ ಹಿಂದೆ ಹಲವುಸಲ ಎದುರಾಗಿದ್ದರೂ ಅದು ಇಂತಹ ಬೃಹದಾಕಾರವನ್ನು ವಿರಾಡ್ರೂಪವನ್ನು ತಾಳಿರಲಿಲ್ಲ. 'ಇಷ್ಟು ವರ್ಷ ಜನರದಿಂದ ನೀವು ಕಾಪಾಡಿಕೊಂಡಿರುವ ಮತ್ತು ಯಾವ ಪ್ರಯೋಜನಕ್ಕೂ ಬಾರದ ಪ್ರಾಚೀನ ವಸ್ತುಗಳನ್ನೆಲ್ಲ ಕಾಂಪೌಂಡಿನಾಚೆ ಎಸೆದುಬಿಡಿ' ಎಂದು ಅವರ ಮಗ ಸಾ(ಫ್ಟ್)ವೇ(ರ್) ಪಿನಾಕಪಾಣಿ ಸುಗ್ರೀವಾಜ್ಞೆ ಮಾಡಿದ್ದ ಆಗ ಕೋಪಾ ರಾಯರು ಕೋಪತಾಳಿ 'ನಿಷ್ಪ್ರಯೋಜಕ– ವಾದುನನ್ನೆಲ್ಲ ಎಸೆದು ಬಿಡುವುದೇ? ಹಾಗೆ ನೋಡಿದರೆ ನಿನಗೆ ನನ್ನಿಂದ ಯಾವ ಪ್ರಯೋಜನವೂ ಇಲ್ಲ ಎನ್ನುತ್ತ ಬೀಸುವ ದೊಣ್ಣೆಯಿಂದ ತಾತ್ಕಾಲಿಕವಾಗಿ ತಪ್ಪಿಸಿಕೊಂಡಿದ್ದರು.

ಸದರಿ ಪುರಾತನ ವಸ್ತುಗಳಾದರೂ ಯಾವುದೂ ಫಿಲಿಪ್ಸ್ ಗೋಡೆ ಗಡಿಯಾರ, ಪ್ಯಾನಾಸೋನಿಕ್ ಟ್ರಾನ್ಸಿಸ್ಟರ್, ಮೈಕ್ರೋವೆವನ್, ವೋಲ್ಟಾಸ್ ವಾಷಿಂಗ್ ಮೆಷೀನ್, ಕಸ ಗುಡಿಸಿ ದೂಳು ಒರೆಸುವ ಸೇವೆ ಸಲ್ಲಿಸುವ ವಿದ್ಯುತ್ ಪೊರಕೆ, ಹೀಟರ್, ಕೋರ್, ಓಪನ್ ಸ್ಟ್ಯಾಂಡ್, ಅಲ್ಮೆರಾ, ಇತ್ಯಾದೀತ್ಯಾದಿ, ಇವುಗಳಲ್ಲಿ ಪ್ರತಿಯೊಂದಕ್ಕೂ ತನ್ನದೇ ಆದ ಅದ್ಭುತ ಇತಿಹಾಸವುಂಡು, ಗೋಡೆಗಡಿಯಾರವನ್ನು ತಂದು ತಮ್ಮ ಅಪ್ಪಯ್ಯ (ಆವರೆಗೆ ಅವರು ಬೆಳಿಗ್ಗೆ ಆಕಾಶದಲ್ಲಿ ಮಿರುಗುವ ನಕ್ಷತ್ರಗಳನ್ನು ನೋಡಿಯೇ ಕರಾರುವಾಕ್ ಆಗಿ ಸಮಯವೆಷ್ಟು ಎಂದು ತಿಳಿದುಕೊಳ್ಳುತ್ತಿದ್ದರು) ಅವರು ಬೇರಾವುದಾದರೂ ಊರಿಗೆ ಹೋದಾಗ ಮಾತ್ರ, ಕುಳ್ಳ ಪಿನಾಕಿ, ಮೇಜನ್ನೇರಿ ಅದರ ಕಿವಿ ಹಿಂಡಬೇಕಾಗಿತ್ತು ಟ್ರಾನ್ಸಿಸ್ಟರ್ ಅನ್ನು ರಿಪೇರಿಗಾಗಿ 'ಇಲ್ಲಿ ಎಲ್ಲವನ್ನೂ ರಿಪೇರಿ ಮಾಡಿಕೊಡಲಾಗತ್ತೆ' ಎಂಬ ಬೋರ್ಡ್ ಹಾಕಿರುವ ಅಬ್ದುಲ್ಲನ ಷಾಪ್‌ಗೆ ತೆಗೆದು ಹೋದಾಗ ಅವನು ಅದರ ಪೋಸ್ಟ್‌ಮಾರ್ಡಂ ಮಾಡಿ ಇದು ಫುಲ್ ಡ್ಯಾಮೇಜಾಗಿದೆ ಇದರ ರಿಪೇರಿಗಾಗಿ ನೀವು ಮಾಡುವ ಖರ್ಚಿಗೆ ಬೇರೆ ಹೊಸದನ್ನೇ ಕೊಂಡುಕೊಳ್ಳಬಹುದು ಎಂದು ಸದುಪದೇಶ ಮಾಡಿದ್ದ, ಮತ್ತೆ ವಿದ್ಯುತ್ಪಂಖಾವನ್ನು ತೆಗೆದುಕೊಂಡು ಹೋದಾಗ ಕೂಡ ಈ ಪ್ರೊಫೆಸರ್ ಸಾಹೇಬರಿಗೆ ಬುದ್ಧಿಯಿಲ್ಲ ಎಂದು ಮನಸ್ಸಿನಲ್ಲಿಯೇ ನಕ್ಕು ಬಿಟ್ಟಿದ್ದ, ಇನ್ನುಳಿದದ್ದು ಪುಸಕ್ತಗಳ ಗುಡ್ಡೆ ಅವುಗಳ ಕಥೆಯನ್ನು ಆಮೇಲೆ ಹೆಳುತ್ತೇನೆ. ಸದ್ಯದ ನಿರುಪಾಯಕರ ಪರಿಸ್ಥಿತಿಯಲ್ಲಿ ಇವುಗಳಿಗೆ ಏನಾದರೂ ಒಂದು ಸದ್ಗತಿ ತೋರಿಸಲೇಬೇಕಾಗಿತ್ತು ಏಕೆಂದರೆ ಮಗ ಪಿನಾಕಿ ಹಳೆಯ ಎರಡು ಬಿಎಚ್ಕೆ ಬಾಡಿಗೆ ಮನೆಯಿಂದ ಹೊಸ ಮೂರು ಬಿಎಚ್ಕೆ ಸ್ವಂತ ಮನೆಗೆ ಬರುವವಾರವೇ ಷಿಫ್ಟ್ ಆಗುವವನಿದ್ದ.

ಸದ್ಯದ ನಿರುಪಾಯಕ ಪರಿಸ್ಥಿತಿಯಲ್ಲಿ ಈ ಪುಸ್ತಕಗಳಿಗೆ ಏನಾದರೊಂದು ಸದ್ಗತಿ ತೋರಿಸಲೇಬೇಕಾಗಿತ್ತು ಅವುಗಳಲ್ಲಿ ಕೆಲವು ಹತ್ತೊಂಬತ್ತನೆಯ ಶತಮಾನದಲ್ಲಿ ಮುದ್ರಿತವಾದ ಜರ್ಜರಿತ ಪುಸ್ತಕವಾಗಿದ್ದವೂ ಮುಟ್ಟಿದರೆ ಸಾಕು; ಅವುಗಳ ಪುಟಗಳು ಕಿತ್ತು ಬರುವಂತಿದ್ದವು. ಅಂತಹ ಅವಶೇಷಗಳನ್ನು ಪಳೆಯುಳಿಕೆಗಳನ್ನು ಆಯ್ಕೆ

ಮಾಡಲೆಂದು ಅವುಗಳನ್ನು ಪರಿಶೀಲಿಸತೊಡಗಿದರು ಅವುಗಳಲ್ಲಿ ಕೆಲವು ಮೈಸೂರು ವಿಶ್ವವಿದ್ಯಾನಿಯದ ಪ್ರಸಾರಾಂಗದ ಪ್ರಕಟಣೆಗಳೇ ಆದ ವಿಶ್ವಕೋಶ, ವಿಷಯ ವಿಶ್ವಕೋಶ ನಿಘಂಟುಗಳೇ ಮುಂತಾದಿ ಅಕ್ಷರಶಃ ಭಾರೀ 'ತೂಕದ' ಮಹಾ ಕೃತಿಗಳಾಗಿದ್ದರೆ, ಇನ್ನುಳಿದ ಕೆಲವು ಬೇರೆ ಬೇರೆ ಪತ್ರಿಕೆಗಳಿಂದ ತಮಗೆ ವಿಮರ್ಶೆಗಾಗಿ ಬಂದ ಪುಸ್ತಕಗಳಾಗಿದ್ದವು. ಅವುಗಳ ಜೊತೆಗೆ ತಾವೇ ಬರೆದು ತಾವೇ ಸ್ವಂತ ಖರ್ಚಿನಿಂದ ಪ್ರಕಟಿಸಿ ಅದ್ಧೂರಿಯಾಗಿ ಬಿಡುಗಡೆ ಮಾಡಿದ ಸ್ವತಂತ್ರ ಹಾಗೂ ಸ್ವೋಪಜ್ಞ ಕೃತಿಗಳಾಗಿದ್ದವು ಅವರಿಗೆ ಪುಸ್ತಕೋದ್ಯಮದ ಮಾರುಕಟ್ಟೆ ವಿಭಾಗದಲ್ಲಿ ಪ್ರತಿಭೆ, ಪರಿಶ್ರಮ, ಅನುಭವಗಳು ಶೂನ್ಯವಾಗಿದ್ದುದರಿಂದ ಪ್ರತಿಯೊಂದು ಉತ್ಕೃಷ್ಟ ಕೃತಿಯೊಂದು ತಾವು ಸಂಪೂರ್ಣವಾಗಿ ನಂಬಿದ ಪುಸ್ತಕಗಳ ಹತ್ತುಹಲವು ಪ್ರತಿಗಳು ರಾಶಿಬಿದ್ದು ದೂಳಾವೃತವಾಗಿದ್ದವು, ತಾವು ರಚಿಸಿರುವ ಪುಸ್ತಕಗಳ ಅಂತ್ಯ ಸಂಸ್ಕಾರ ಮಾಡಬೇಕಾದ ಅನಿವಾರ್ಯತೆಯ ಸಂಕಷ್ಟದಲ್ಲಿ ಸಿಲುಕಲು ತಯಾರಾಗಿರದ ಪ್ರೊ. ಅವರು ಅವುಗಳ ದೂಳು ಹೊಡೆದು ಪ್ರತ್ಯೇಕವಾಗಿ ತೆಗೆದಿರಿಸಿದರು ಕೊನೆಗೆ ಪ್ರಯತ್ನವೆಂಬಂತೆ, ಸಮೀಪವಿದ್ದಂತಹ ಸರ್ಕಾರಿ ಲೈಬ್ರರಿಯ ಮುಖ್ಯಸ್ಥರಿಗೆ ಕರೆಮಾಡಿ, 'ನಿಮಗೆ ಕೊಡಲೆ' ಎಂದು ಕೇಳದರು ಅವರೂ ಈಗ ಇವುಗಳನ್ನೆಲ್ಲ ಯಾರು ಓದುತ್ತಾರೆ? ಕೈ ಬೆರಳ ತುದಿಯಲ್ಲಿರುವ ಮೊಬೈಲಿನಲ್ಲಿಯೇ ಎಲ್ಲವೂ ಸಿಗುವಾಗ ಎಂದು ಸಾರಾಸಗಟಾಗಿ ಉತ್ತರ ನೀಡಿದ್ದರು, ಆಮೇಲೆ ಅವುಗಳನ್ನು ತಮ್ಮ ಚಿರಪರಿಚಿತ ಹಳೆ ಪುಸ್ತಕದಂಗಡಿಯವನ ಮನವೊಲಿಸಿ, ಅವನಿಗೆ ಪುಕ್ಕಟೆಯಾಗಿ ದಾನಮಾಡಿದ್ದರು ದಕ್ಷಿಣೆ ಕೇಳಿದ್ದರೂ ಕೊಡುತ್ತಿದ್ದರೋ ಏನೋ?

ಕೊನೆಗೆ ಕನಕಪುರ ಬಂಡೆಯಂತಹ ಗಟ್ಟಿ ಮನಸ್ಸು ಮಾಡಿ ಒಂದು ಶುಭದಿನ ಶುಭ ಮುಹೂರ್ತದಲ್ಲಿ ರೇಡಿಯೋ ಟ್ರಾನ್ಸಿಸ್ಟರೇ ಮೊದಲಾದವುಗಳ ಅವಶೇಷಗಳನ್ನು ಅಂಗಳಕ್ಕೆ ತಂದು ರಾಶಿಹಾಕಿ 'ಹಳೇ ಪೇಪರ್, ಹಳೇ ಪಾತ್ರೆ' ಎಂದು ರಾಗವಾಗಿ ಕೂಗುತ್ತ ಬಂದ ಸಾಬಿಯನ್ನು ಕರೆದು ತೆಗೆದುಕೊಳ್ಳಲು ಹೇಳಿದರು 'ಇದನ್ನೆಲ್ಲ ತೆಗೆದುಕೊಂಡು ಏನು ಮಾಡಲಿ ಸಾರ್?' ಎಂದ ಅವನು ರಾಯರ ಪ್ರಾರ್ಥನೆಯನ್ನು ಮನ್ನಿಸಿ ಕೆ.ಜಿ.ಗೆ ಎರಡೂವರೆ ರೂಪಾಯಿ ದರ ಚೌಕಾಶಿಯ ಮಾತೇ ಇಲ್ಲ, ಫಿಕ್ಸೆಡ್ ರೇಟ್ ಎಂದು ಕೋಪಾ ಅವರ ಉತ್ತರಕ್ಕೂ ಕಾಯದೆ, ಆ ಗುಡ್ಡೆಗೆ ತನ್ನ ರಕ್ಕಸ ಕೊಡಲಿಯನ್ನು ಪ್ರಯೋಗಿಸಿ, ಪುಡಿಪುಡಿ ಮಾಡಿದಾಗ ರಾಯರ ಹೃದಯ ಒಡೆದು ಹೋಗುವುದೊಂದೆ ಬಾಕಿ ಉಳಿದಿತ್ತು.

ರಾಯರ ವಿಷಣ್ಣವದನ ನೋಡಿದ ಪಿನಾಕಪಾಣಿ ಪ್ರಸನ್ನವದನನಾದ ಎಂಬಲ್ಲಿಗೆ..

–ಶುಭಂ–

■

**ಒಮ್ಮೆ ತಿಂಮ ಬಸ್ಸಿನಲ್ಲಿ ಹೋಗುತ್ತಿದ್ದ. ಅಕಸ್ಮಾತ್ ತಿಂಮನ ಕಾಲು ಮುಂದಿನ ಸೀಟಿನಲ್ಲಿ ಕೂತಿದ್ದವನಿಗೆ ತಗುಲಿತು. ತಿಂಮ ಕ್ಷಮೆ ಕೇಳಿದ. ಅದಕ್ಕೆ ಅವರು ರೇಗಿ ಏನ್ರೀ ಮೊದಲು ಕಾಲಿಂದ ಒದ್ದು ಬಿಡೋದು ಆಮೇಲೆ ಕ್ಷಮೆ ಕೇಳೋದು. ಇದು ಸರೀನಾ ಅಂತ ಕೇಳಿದರು. ಅದಕ್ಕೆ ತಿಂಮ ಕ್ಷಮಿಸಿ ಇನ್ನು ಮುಂದೆ ಮೊದಲು ಕ್ಷಮೆ ಕೇಳಿ ಆಮೇಲೆ ಒದೀತೀನಿ ಅಂದನಂತೆ**

**–ಬೀಚಿ**